ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 5 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 168 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಜಾತಿಗಣತಿ ವೇಳೆ ಆಸ್ತಿ ವಿವರ ಕೇಳಿದರೆ
ಡಿಸಿಎಂ ಡಿಕೆಶಿ ಸಿಡಿಮಿಡಿ

ಸುದೀರ್ಘ ಪ್ರಶ್ನೆಗಳಿಗೆ ಅಸಮಾಧಾನ



ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಸಮೀಕ್ಷೆಗೆ ಬೆಂಗಳೂರಿನ ಸದಾಶಿವನಗರದ ನಿವಾಸದಲ್ಲಿ ಗಣತಿದಾರರಿಗೆ ತಮ್ಮ ಕುಟುಂಬದ ವಿವರ ನೀಡುವ ಮೂಲಕ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗಣತಿಗೆ ಚಾಲನೆ ನೀಡಿದರು.

ಬೆಂಗಳೂರು,ಅ.4(ಕೆಎಂಶಿ)– ಗಣತಿದಾರರಿಗೆ ಆಸ್ತಿ ವಿವರಗಳ ಮಾಹಿತಿ ನೀಡಲು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಿರಾಕರಿಸಿದ್ದಾರೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಸಮೀಕ್ಷೆಯನ್ನು, ಸದಾಶಿವನಗರದ ನಿವಾಸದಲ್ಲಿ ಗಣತಿದಾರರಿಗೆ ತಮ್ಮ ಕುಟುಂಬದ ವಿವರ ನೀಡುವ ಮೂಲಕ ಉದ್ಘಾಟಿಸಿದರು. ಪತ್ನಿ ಉಷಾ ಜೊತೆಗೂಡಿ ಸಮೀಕ್ಷೆದಾರರ ಸುದೀರ್ಘ ಪ್ರಶ್ನೆಗಳಲ್ಲಿ ಕೆಲವಕ್ಕೆ ಉತ್ತರ ನೀಡಿ, ಇನ್ನು ಕೆಲವು ಪ್ರಶ್ನೆಗಳಿಗೆ ಇಲ್ಲ ಎಂಬುದಾಗಿ ತಿಳಿಸಿದರು. ▶ 6ನೇ ಪುಟಕ್ಕೆ

ಗಣತಿದಾರರ ಪ್ರತಿಭಟನೆ
ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗೆ ಅಡ್ಡಿ!

ಬೆಂಗಳೂರು, ಅ.4– ಜಾತಿ ಸಮೀಕ್ಷೆ ಎನ್ನಲಾದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಬೆಂಗಳೂರಿನಲ್ಲಿ ಮೊದಲ ದಿನವಾದ ಶನಿವಾರ ಅಡೆತಡೆಗಳು ಎದುರಾಗಿದ್ದು, ತಮ್ಮ ಕುಂದುಕೊರತೆಗಳನ್ನು ಪರಿಹರಿಸುವಂತೆ ಒತ್ತಾಯಿಸಿ ಗಣತಿದಾರರು ಪ್ರತಿಭಟನೆ ನಡೆಸಿದರು.

ಸುಮಾರು 100 ಗಣತಿದಾರರು ಮಲ್ಲೇಶ್ವರಂ ನಗರಸಭೆ ಕಚೇರಿ ಎದುರು ಧರಣಿ ನಡೆಸಿದರು. ಸೆಪ್ಟೆಂಬರ್ 22ರಂದು ಕರ್ನಾಟಕದಾದ್ಯಂತ ಪ್ರಾರಂಭವಾದ ಸಮೀಕ್ಷೆಯು ಅಕ್ಟೋಬರ್ 7ರವರೆಗೆ ಮುಂದುವರಿಯುತ್ತದೆ. ಬೆಂಗಳೂರಿನಲ್ಲಿ ಇದನ್ನು ಎರಡು ದಿನಗಳ ಕಾಲ ಹೆಚ್ಚಿಗೆ ನಡೆಸಲು ನಿರ್ಧರಿಸಲಾಗಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮೂಲಗಳ ಪ್ರಕಾರ, ಪ್ರತಿಭಟನಾನಿರತ ಗಣತಿದಾರರು ▶ 6ನೇ ಪುಟಕ್ಕೆ

ಭಾರದಲ್ಲಿ ಭೀಮ ಬಲಾಢ್ಯ; 440 ಕೆಜಿ ಹೆಚ್ಚಳದೊಂದಿಗೆ ಬರೋಬ್ಬರಿ
5905 ಕೆಜಿ ತೂಗಿದ್ದಾನೆ

- ಸುಗ್ರೀವ, ಶ್ರೀಕಂಠ ಕ್ರಮವಾಗಿ ಎರಡು, ಮೂರನೇ ಅತೀ ಭಾರ ಹೊಂದಿದ್ದಾರೆ
- ಇಂದು ಸ್ವಸ್ಥಾನಕ್ಕೆ ಮರಳುವ ಗಜಪಡೆಗೆ ಸಾಂಪ್ರದಾಯಿಕವಾಗಿ ತೂಕ ಪರೀಕ್ಷೆ



ಮೈಸೂರು,ಅ.4 (ಎಂಟಿವೈ) –ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ 14 ಆನೆಗಳಲ್ಲಿ ಭೀಮನ ತೂಕದಲ್ಲಿ 440 ಕೆಜಿ ಹೆಚ್ಚಳವಾಗಿದೆ. ಹಾಗಾಗಿ ಆತ ಹೆಚ್ಚು ತೂಕವುಳ್ಳವನಾಗಿದ್ದರೆ, ಎರಡನೇ ಸ್ಥಾನದಲ್ಲಿ ಸುಗ್ರೀವ ಹಾಗೂ ಮೂರನೇ ಸ್ಥಾನದಲ್ಲಿ ಶ್ರೀಕಂಠನ ತೂಕ ಸುಧಾರಿಸಿದೆ.

ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಎರಡು ತಂಡಗಳಲ್ಲಿ ಮೈಸೂರಿಗೆ ಬಂದಿದ್ದ ಈ ಆನೆಗಳಿಗೆ ಅರಮನೆ ಆವರಣದಲ್ಲಿ ವಿಶೇಷ ಆರೈಕೆ ಮಾಡಲಾಗುತ್ತಿತ್ತು. ಆ.4ರಂದು ಮೊದಲ ತಂಡದಲ್ಲಿ ಬಂದ 9 ಆನೆಗಳಿಗೆ ಆ.12ರಿಂದ ಹಾಗೂ ಆ.25ರಂದು ಎರಡನೇ ತಂಡದಲ್ಲಿ ಆಗಮಿಸಿದ್ದ ಐದು ಆನೆಗಳಿಗೆ ಆ.26ರಿಂದ ವಿಶೇಷ ಆಹಾರ ನೀಡುವ ಮೂಲಕ ಆರೈಕೆ ಮಾಡಲಾಗುತ್ತಿತ್ತು. ಮೊದಲ ತಂಡಕ್ಕೆ 45 ದಿನ, ಎರಡನೇ ತಂಡಕ್ಕೆ 35 ದಿನ ವಿಶೇಷ ಆಹಾರ ನೀಡಿ ಉಪಚರಿಸಲಾಗಿತ್ತು. ದಸರಾ ಮುಗಿಸಿ ಸ್ವಸ್ಥಾನಕ್ಕೆ ಮರಳುವ ಮುನ್ನ ಸಂಪ್ರದಾಯದಂತೆ ಗಜಪಡೆಗೆ ತೂಕದ ಪರೀಕ್ಷೆ ನಡೆಸಲಾಗಿದೆ. ▶ 6ನೇ ಪುಟಕ್ಕೆ

ಮೈಸೂರು ಜಿಲ್ಲೆಯಲ್ಲಿ ಬರೀ ಶೇ.49ರಷ್ಟು ಸಮೀಕ್ಷೆ

- ಅಧಿಕಾರಿಗಳಿಗೆ ಇನ್ನು ಮೂರು ದಿನದಲ್ಲಿ ಶೇ.51ರಷ್ಟು ಸಮೀಕ್ಷೆ ಸವಾಲು
- ಅಕ್ಟೋಬರ್ 7ರ ಗಡುವಿನಲ್ಲಿ ಸಮೀಕ್ಷೆ ಪೂರ್ಣಗೊಳಿಸುವ ವಿಶ್ವಾಸ

ಮೈಸೂರು, ಅ.4(ಬಿಎಲ್‌ಯು)– ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ (ಜಾತಿ) ಸಮೀಕ್ಷೆ ನಡೆಸಲು ಸರ್ಕಾರ ನೀಡಿರುವ ಗಡುವು ಇನ್ನು ಮೂರು ದಿನವಿದ್ದು, ಮೈಸೂರು ಜಿಲ್ಲೆಯಲ್ಲಿ ಈಗ ಶೇಕಡ 49ರಷ್ಟು ಮಾತ್ರವೇ ಸಮೀಕ್ಷೆ ನಡೆದಿದೆ.

ಮೈಸೂರಿನಲ್ಲಿ ಜಾತಿಗಣತಿಗಾಗಿ 5,240 ಸಿಬ್ಬಂದಿ ನಿಯೋಜಿಸಲಾಗಿದೆ. ಬೆಳಗ್ಗೆಯಿಂದ ಸಂಜೆ ತನಕ ಪ್ರತಿ ದಿನ ನಿರಂತರವಾಗಿ ಸಮೀಕ್ಷೆ ನಡೆಸುತ್ತಿದ್ದಾರೆ. ಆದರೆ, ಮೈಸೂರು ಜಿಲ್ಲೆಯಲ್ಲಿ ಶೇಕಡ 49ರಷ್ಟು ಮಾತ್ರವೇ ಇದುವರೆಗೆ ಸಮೀಕ್ಷೆ ಆಗಿದೆ. ಜಾತಿ ಸಮೀಕ್ಷೆ ನಡೆಸಲು ಸರ್ಕಾರ ಅ.7ರ ಕಾಲ ಮಿತಿ ವಿಧಿಸಿದೆ. ಆದರೆ ಎಷ್ಟೇ ಬಿರುಸಿನಿಂದ ಮಾಡುತ್ತಿದ್ದರೂ ▶ 6ನೇ ಪುಟಕ್ಕೆ



ಫಾಸ್ಟ್ ಟ್ಯಾಗ್ ಇಲ್ಲದವರು ಇನ್ನು ದುಪ್ಪಟ್ಟು ಹಣ ಪಾವತಿಸಬೇಕಿಲ್ಲ
ನ.15ರಿಂದ ಈ ಹೊಸ ಟೋಲ್ ನಿಯಮ ಜಾರಿ



ನವದೆಹಲಿ: ಕೇಂದ್ರ ಸರ್ಕಾರ ಫಾಸ್ಟ್ ಟ್ಯಾಗ್ ಇಲ್ಲದವರಿಗೆ ಗುಡ್ ನ್ಯೂಸ್ ನೀಡಿದ್ದು, ನವೆಂಬರ್ 15ರಿಂದ, ಫಾಸ್ಟ್ ಟ್ಯಾಗ್ ಇಲ್ಲದ ವಾಹನಗಳ ಮಾಲೀಕರು ದುಪ್ಪಟ್ಟು ಹಣ ಪಾವತಿಸಬೇಕಾಗಿಲ್ಲ. ಕೇಂದ್ರ ಸರ್ಕಾರ ಫಾಸ್ಟ್‌ಟ್ಯಾಗ್ ಇಲ್ಲದವರು ದುಪ್ಪಟ್ಟು ಹಣ ಪಾವತಿಸಬೇಕು ಎಂಬ ನಿಯಮವನ್ನು ಸಡಿಲಿಸಿದ್ದು, ನಗದು ರೂಪದಲ್ಲಿ ಪಾವತಿ ಆಯ್ಕೆ ▶ 6ನೇ ಪುಟಕ್ಕೆ

ದಸರಾ ವೇಳೆ ಮೈಸೂರು ಸುತ್ತಮುತ್ತಲ ಪ್ರವಾಸಿತಾಣ, ಧಾರ್ಮಿಕ ಸ್ಥಳಗಳಿಗೆ
ದಾಖಲೆ ಪ್ರಮಾಣದಲ್ಲಿ ಭಕ್ತರು, ಪ್ರವಾಸಿಗರು ಭೇಟಿ



ಮೈಸೂರು ಅರಮನೆ ಮುಂಭಾಗ ಶನಿವಾರ ಸಂಜೆ ಆಕರ್ಷಕ ದಸರಾ ದೀಪಾಲಂಕಾರ ವೀಕ್ಷಿಸಲು ಸೇರಿರುವ ಸಾವಿರಾರು ಪ್ರವಾಸಿಗರು.



ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿ ಆಕರ್ಷಕ ವಿದ್ಯುತ್ ದೀಪಾಲಂಕಾರದೊಂದಿಗೆ ಕುಟುಂಬವೊಂದರ ಸೆಲ್ಫಿ ಸಂಭ್ರಮ.

ಮೈಸೂರು,ಅ.4(ಎಂಟಿವೈ)–ನಾಡಹಬ್ಬ ದಸರಾ ಮಹೋತ್ಸವದ ವೇಳೆ ಮೈಸೂರು ಹಾಗೂ ಸುತ್ತಮುತ್ತಲಿನ ಪ್ರಮುಖ ಪ್ರವಾಸಿ ಸ್ಥಳಗಳಿಗೆ ಭಾರೀ ಸಂಖ್ಯೆಯಲ್ಲಿ ಪ್ರವಾಸಿಗರು ಲಗ್ಗೆಯಿಟ್ಟಿದ್ದು, ಹೆಚ್ಚಿನ ಆದಾಯ ಸಂಗ್ರಹವಾಗಿದೆ. ದಸರಾ ಹಿನ್ನೆಲೆಯಲ್ಲಿ ಮೈಸೂರು ಅರಮನೆ ಆವರಣ ಸೇರಿದಂತೆ ವಿವಿಧೆಡೆ ನಡೆಯುತ್ತಿದ್ದ ಕಾರ್ಯಕ್ರಮಗಳಲ್ಲಿ ಹೆಸರಾಂತ ಕಲಾವಿದರು ಕಾರ್ಯಕ್ರಮ ನೀಡಿದರು. ಹಾಗೆಯೇ ದೀಪಾಲಂಕಾರದಿಂದ ಕಂಗೊಳಿಸುತ್ತಿರುವ ಮೈಸೂರು ಸೌಂದರ್ಯ ಕಣ್ತುಂಬಿಕೊಳ್ಳಲು ಪ್ರವಾಸಿಗರ ದಂಡೇ ▶ 6ನೇ ಪುಟಕ್ಕೆ

ಮೃಗಾಲಯಕ್ಕೆ 1.56 ಲಕ್ಷ ಮಂದಿ ಭೇಟಿ; 191.37 ಲಕ್ಷ ಆದಾಯ ಸಂಗ್ರಹ
ಕಳೆದ ಬಾರಿಗೆ ಹೋಲಿಸಿದರೆ 10 ಸಾವಿರ ಸಂಖ್ಯೆ ಕಡಿತವಾದರೂ ಶುಲ್ಕ ಹೆಚ್ಚಳದಿಂದ ಅಧಿಕ ಆದಾಯ

ಮೈಸೂರು,ಅ.4(ಎಂಟಿವೈ)– ಮೈಸೂರು ಮೃಗಾಲಯಕ್ಕೆ ನವರಾತ್ರಿ ವೇಳೆ, 10 ದಿನದಲ್ಲಿ 1.56 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದು, 191.37 ಲಕ್ಷ ರೂ. ಪ್ರವೇಶ ಶುಲ್ಕ ಸಂಗ್ರಹವಾಗಿದ್ದರೆ, ಆಯುಧಪೂಜೆ ದಿನ 27,033 ಮಂದಿ, ಜಂಬೂ ಸವಾರಿ ದಿನ 27,272 ಪ್ರವಾಸಿಗರು ಸಂದರ್ಶಿಸಿದ್ದಾರೆ.

ಕಳೆದ ಎರಡು ವರ್ಷಕ್ಕೆ ಹೋಲಿಸಿದರೆ ಮೃಗಾಲಯಕ್ಕೆ ದಸರಾ ವೇಳೆ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆಯಲ್ಲಿ 10 ಸಾವಿರ ದಷ್ಟು ಕಡಿತವಾಗಿದೆ. ಆದರೆ, ಪ್ರವೇಶ ಶುಲ್ಕ ಹೆಚ್ಚಳದಿಂದಾಗಿ ಸಂಗ್ರಹವಾದ ಆದಾಯದಲ್ಲಿ ಮಾತ್ರ ಹೆಚ್ಚಳವಾಗಿದೆ. 2021ರಲ್ಲಿ ಅರಮನೆ ಆವರಣಕ್ಕೆ ಸೀಮಿತವಾದ ದಸರಾ ವೇಳೆ 10 ದಿನದಲ್ಲಿ ▶ 6ನೇ ಪುಟಕ್ಕೆ

ಮೈಸೂರು ಮಿತ್ರ

ದಸರಾ ಮನೆ ಉದ್ಯಾನವನ ಸ್ಪರ್ಧೆ: 11ನೇ ವರ್ಷವೂ ಅತ್ಯುತ್ತಮ ಉದ್ಯಾನ ಬಹುಮಾನ



ಮೈಸೂರಿನ ಕಣ್ಣನ್ ಡಯಾಗ್ನೋಸ್ಟಿಕ್ ಸೆಂಟರ್‌ನ ಡಾ. ಲಕ್ಷ್ಮಣ್ ಅವರ ಪತ್ನಿ ಡಾ.ಹೇಮಾಮಾಲಿನಿ ಲಕ್ಷ್ಮಣ್ ಅವರು ಸತತವಾಗಿ ದಸರಾ ಮನೆ ಮನೆ ಉದ್ಯಾನವನ ಸ್ಪರ್ಧೆಯಲ್ಲಿ 11ನೇ ವರ್ಷವೂ ಅತ್ಯುತ್ತಮ ಉದ್ಯಾನವನ, ಟೆರೇಸ್ ಉದ್ಯಾನವನ ಮತ್ತು ಫಾರ್ಮ್ ಗಾರ್ಡನ್ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಅವರ ಹೆಚ್‌ಎಲ್ ಟ್ರಾಂಕ್‌ವಿಲ್ಲಾ ತೋಟವು ತರಹೇವಾರಿ ಹಣ್ಣಿನ ಮರಗಳು ಮತ್ತು ಅಪರೂಪದ ಯುರೋಪಿಯನ್ ಗುಲಾಬಿಗಳಿಗಾಗಿ ಪ್ರಸಿದ್ಧಿಯಾಗಿದೆ.

ಸಿಎಂ ಸ್ಥಾನದಿಂದ ಸಿದ್ದರಾಮಯ್ಯ ಬದಲಾವಣೆ ವದಂತಿ; ಆಯಾ ಕಾಲದ ರಾಜಕೀಯ ಬೆಳವಣಿಗೆ ಗಮನಿಸಿ ಹೈಕಮಾಂಡ್ ನಿರ್ಧಾರ ಮಾಡುತ್ತದೆ

ಮೈಸೂರಿನಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಮಹದೇವಪ್ಪ ಸ್ಪಷ್ಟನೆ

ಮೈಸೂರು,ಅ.4(ಬಿಎಲ್‌ಯು)–ಆಯಾ ಕಾಲದ ರಾಜಕೀಯ ಬೆಳವಣಿಗೆ ಗಮನಿಸಿ ಕಾಂಗ್ರೆಸ್ ಹೈಕಮಾಂಡ್ ಹಲವು ನಿರ್ಧಾರಗಳನ್ನು ಕೈಗೊಳ್ಳುತ್ತದೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸ್ಪಷ್ಟಪಡಿಸಿದರು.



ಡಾ.ಮಹದೇವಪ್ಪ

ಮೈಸೂರಿನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಾಯಕತ್ವ ಬದಲಾವಣೆ ಮೂಲಕ ರಾಜ್ಯ ರಾಜಕೀಯದಲ್ಲಿ ಕ್ರಾಂತಿಯಾಗುತ್ತದೆ ಎಂಬ ವದಂತಿಗೆ ಅವರು ಸ್ಪಷ್ಟನೆ ನೀಡಿದರು. ಸಿದ್ದರಾಮಯ್ಯ ಅವರು ಈಗ ಮುಖ್ಯಮಂತ್ರಿ ಆಗಿದ್ದಾರೆ, ಸಿಎಂ ಆಗಿ ಅವರೇ ಮುಂದುವರೆಯುತ್ತಾರೆ. ಆಯಾ ಕಾಲಕ್ಕೆ ತಕ್ಕಂತೆ ನಮ್ಮ ಹೈಕಮಾಂಡ್ ಹಲವು ರಾಜಕೀಯ ನಿರ್ಧಾರ ಕೈಗೊಳ್ಳುತ್ತದೆ. ಹೈಕಮಾಂಡ್ ಬಿಟ್ಟು ಉಳಿದವರು ಏನೇ ಮಾತನಾಡಿದರೂ ಅದಕ್ಕೆ ಬೆಲೆ ಇಲ್ಲ, ಪ್ರಯೋಜನವೂ ಇಲ್ಲ ಎಂದು ಡಾ.ಮಹದೇವಪ್ಪ ಹೇಳಿದರು.

ಯಾವ ಶಿಷ್ಟಾಚಾರವೂ ಉಲ್ಲಂಘನೆ ಆಗಿಲ್ಲ!

ಅಕ್ಟೋಬರ್ 2ರಂದು, ಮೈಸೂರು ದಸರಾ ಜಂಬೂ ಸವಾರಿ ಮೆರವಣಿಗೆಗೆ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೆರೆದ ಜೀಪಿನಲ್ಲಿ ಸಾಗಿ ಜನರಿಗೆ ಶುಭಾಶಯ ತಿಳಿಸಿದರು. ಆ ವೇಳೆ ನನ್ನ ಮೊಮ್ಮಗ ತೆರೆದ ಜೀಪಿನಲ್ಲಿದ್ದ ಎಂಬ ಮಾತ್ರಕ್ಕೆ ಶಿಷ್ಟಾಚಾರ ಉಲ್ಲಂಘನೆ ಆಗಿಲ್ಲ ಎಂದು ಡಾ.ಮಹದೇವಪ್ಪ ಸ್ಪಷ್ಟನೆ ನೀಡಿದರು. ಅಲ್ಲಿ ಯಾವ ಶಿಷ್ಟಾಚಾರವೂ ಉಲ್ಲಂಘನೆ ಆಗಿಲ್ಲ. ಅದು ಶಿಷ್ಟಾಚಾರದ ವ್ಯಾಪ್ತಿಗೆ ಬರುವುದೂ ಇಲ್ಲ. ಅದು ಪರೇಡ್ ಅಲ್ಲ, ಅಲ್ಲಿ ಯಾವುದೇ ರೀತಿಯ ಧ್ವಜ ವಂದನೆ ಇರಲಿಲ್ಲ. ಹೀಗಿರುವಾಗ ಶಿಷ್ಟಾಚಾರ ಹೇಗೆ ಉಲ್ಲಂಘನೆ ಆಗುತ್ತದೆ ಹೇಳಿ ಎಂದು ಪ್ರಶ್ನಿಸಿದರು.

ಜನರಿಗೆ ವಂದನೆ ಸಲ್ಲಿಸಲು ಎಲ್ಲರೂ ಒಟ್ಟಾಗಿ ಹೋದೆವು. ದಸರಾ ಆಚರಣೆ ಬಗ್ಗೆ ಅರಿವಿಲ್ಲದವರು ಈ ರೀತಿಯ ಸುದ್ದಿ ಹಬ್ಬಿಸುತ್ತಾರೆ ಎಂದು ಡಾ.ಮಹದೇವಪ್ಪ ಹೇಳಿದರು. ಈ ಬಾರಿ ದಸರಾ ಯಶಸ್ವಿಯಾಗಿ ನಡೆದಿದೆ. ಮೈಸೂರಿನಲ್ಲಿ 11 ದಿನದಲ್ಲಿ ಒಂದು ಸಾವಿರ ಟನ್ ಕಸ ಸಂಗ್ರಹ ಆಗಿತ್ತು. ಪೌರ ಕಾರ್ಮಿಕರ ಶ್ರಮದಿಂದ ಇಡೀ ನಗರ ಸ್ವಚ್ಛವಾಗಿದೆ. ಈ ಹಿನ್ನೆಲೆಯಲ್ಲಿ ಪೌರ ಕಾರ್ಮಿಕರಿಗೆ ವಂದನೆ ಸಲ್ಲಿಸುತ್ತೇನೆ. ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಸ್ವಯಂ ಪ್ರೇರಣೆಯಿಂದ ತಮ್ಮ ಮನೆಯ ಹಬ್ಬದ ರೀತಿ ತಮ್ಮನ್ನು ತೊಡಗಿಸಿಕೊಂಡು ದಸರಾ ಆಚರಣೆ ಮಾಡಿದರು. ಆರಂಭದಲ್ಲಿ ಸ್ವಲ್ಪ ಗೊಂದಲವಿತ್ತು, ಆದರೆ ತರುವಾಯ ಅದು ನಿವಾರಣೆ ಆಯಿತು. ದಸರಾ ಆಚರಣೆ ವಿಚಾರದಲ್ಲಿ ನಮಗೆ ಯಾವುದೇ ರಾಜಕೀಯ ಅಜೆಂಡಾ ಇರಲಿಲ್ಲ. ಇದರಿಂದ ನಿರಾತಂಕವಾಗಿ ದಸರಾ ಆಚರಣೆಯನ್ನು ಯಶಸ್ವಿಯಾಗಿ ಮುಗಿಸಿದ್ದೇವೆ ಎಂದು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಂತಸ ವ್ಯಕ್ತಪಡಿಸಿದರು.

ನಾಳೆ ಮೈಸೂರಲ್ಲಿ ಪ್ರಭಿಗ್ಯಾನ್ ಉತ್ಸವ

ಮೈಸೂರು,ಅ.4(ಜಿಎ)–ಮೈಸೂರಿನ ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಕಾಲೇಜು ವತಿಯಿಂದ ಅ.6ರಂದು ಬೆಳಗ್ಗೆ 9.30ಕ್ಕೆ ಕಾಲೇಜಿನಲ್ಲಿ ಅಂತರ ಕಾಲೇಜಿನ ಪ್ರಭಿಗ್ಯಾನ್ ಉತ್ಸವ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎನ್.ಭಾರತಿ ಈ ವಿಷಯ ತಿಳಿಸಿ, ಜಾಗತಿಕ ಸವಾಲುಗಳನ್ನು ಎದುರಿಸಲು ಮಹಿಳೆಯರ ಸಬಲೀಕರಣ ವಿಷಯಕ್ಕೆ ಅನುಗುಣವಾಗಿ ಆಯೋಜಿಸಿದ್ದು, ಎಡಿಸಿ ಪಿ.ಶಿವರಾಜು ಉತ್ಸವವನ್ನು ಉದ್ಘಾಟಿಸುವರು. ಸಂಜೆ 4.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಸಂಸದ ಯದುವೀರ್ ಒಡೆಯರ್, ಶ್ವೇತಾ ಮಡಪ್ಪಾಡಿ ಮತ್ತಿತರರು ಭಾಗವಹಿಸಲಿದ್ದಾರೆ. ಉತ್ಸವದಲ್ಲಿ ಜಿಲ್ಲೆಯ ಪದವಿ, ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿ ಸಾಹಿತ್ಯ, ಸಾಂಸ್ಕೃತಿಕ, ವಾಣಿಜ್ಯ, ವ್ಯವಹಾರ ನಿರ್ವಹಣೆ, ವಿಜ್ಞಾನ ಕ್ರೀಡಾ ವಿಭಾಗಗಳ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಜ್ಯೋತಿಲಕ್ಷ್ಮೀ ಜಿ.ಕಾವಾ, ಡಾ.ಮಾರುತಿ ಪ್ರಸನ್ನ ಇದ್ದರು.

ಕಾರು ಡಿಕ್ಕಿ: ಸ್ಥಳದಲ್ಲೇ ಬೈಕ್ ಸವಾರ ಸಾವು

ಮೈಸೂರಿನ ವರುಣ ಕೆರೆ ಬಳಿ ಘೋರ ದುರಂತ

ಮೈಸೂರು, ಅ.4(ಬಿಎಲ್‌ಯು)– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಅದರ ಸವಾರ ಮೃತಪಟ್ಟಿರುವ ಘಟನೆ ಮೈಸೂರಿನ ವರುಣ ಕೆರೆ ಬಳಿ ಇಂದು ಸಂಭವಿಸಿದೆ. ಮೈಸೂರಿನ ತಿ.ನರಸೀಪುರ ತಾಲೂಕು ಚಿಕ್ಕಬಯವಳ್ಳಿಯ ಹೇಮಂತ್ ಕುಮಾರ್ (28) ದುರಂತದಲ್ಲಿ ಮೃತಪಟ್ಟ ದುರ್ದೈವಿಯಾಗಿದ್ದಾನೆ. ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಹೇಮಂತ್ ಕುಮಾರ್ ಇಂದು ಬೆಳಿಗ್ಗೆ ಪಲ್ಸರ್ ಬೈಕ್‌ನಲ್ಲಿ ಮೈಸೂರಿನತ್ತ ಬರುತ್ತಿದ್ದಾಗ ಬೆಳಿಗ್ಗೆ 6.45 ಗಂಟೆಯಲ್ಲಿ ಎದುರಿನಿಂದ ಬಂದ ಟಾಟಾ ನೆಕ್ಸಾನ್ ಕಾರು ಡಿಕ್ಕಿ ಹೊಡೆದಿದೆ.



ಹೇಮಂತ್‌ಕುಮಾರ್

ಕಾರು, ಬೈಕ್‌ಗೆ ಡಿಕ್ಕಿ ಹೊಡೆದ ರಭಸಕ್ಕೆ ಹೇಮಂತ್‌ಕುಮಾರ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತ ಸಂಭವಿಸಿದ ನಂತರ ಕಾರು ಚಾಲಕ ರಂಗಸ್ವಾಮಿ ಅಲ್ಲೇ ಕಾರು ನಿಲ್ಲಿಸಿ ಪೇರಿ ಕಿತ್ತಿದ್ದಾನೆ.

ಈ ಸಂಬಂಧ ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾನವೀಯತೆ ಮರೆಯಾಯ್ತು: ಈ ಅಪಘಾತ ಸಂಭವಿಸಿದ ವೇಳೆ ಗಾಯಾಳುವನ್ನು ಕೂಡಲೇ ಆಸ್ಪತ್ರೆಗೆ ಸಾಗಿಸುವ ಪ್ರಯತ್ನವನ್ನು ಕಾರು ಚಾಲಕನಾಗಲೀ, ದಾರಿ ಹೋಕರು ಮಾಡದೇ ಇದ್ದರಿಂದ ಬೈಕ್ ಸವಾರ ನರಳಿ ನರಳಿ ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದಾನೆ. ಕಾರು ಡಿಕ್ಕಿ ಹೊಡೆದ ರಭಸಕ್ಕೆ ಬೈಕ್ ಸವಾರ ಹೇಮಂತ್‌ಕುಮಾರ್ ಕೆಳಗೆ ಬಿದ್ದು ತೀವ್ರ ಗಾಯದಿಂದ ನರಳಿದ್ದಾರೆ. ಈ ವೇಳೆ ಕಾರು ಚಾಲಕ ಜಕ್ಕಳ್ಳಿಹುಂಡಿ ರಂಗಸ್ವಾಮಿಯಾಗಲೀ, ಅಲ್ಲಿ ನೆರೆದ ಇತರರಾಗಲೀ ತಕ್ಷಣ ಆಸ್ಪತ್ರೆಗೆ ಸಾಗಿಸುವ ಪ್ರಯತ್ನ ಮಾಡಲಿಲ್ಲ. ಅಪಘಾತ ಸಂಭವಿಸಿದ ಸ್ಥಳದಲ್ಲಿ ಇತರೆ ವಾಹನಗಳು ಸಂಚರಿಸುತ್ತಿದ್ದರೂ ಯಾರೊಬ್ಬರೂ ರಕ್ತದ ಮಡುವಿನಲ್ಲಿ ಬಿದ್ದಿದ್ದ ಹೇಮಂತ್ ಕುಮಾರ್‌ನನ್ನು ಆಸ್ಪತ್ರೆಗೆ ಸಾಗಿಸುವ ಮನಸ್ಸು ಮಾಡಲಿಲ್ಲ. ಆಂಬುಲೆನ್ಸ್ ಸ್ಥಳಕ್ಕೆ ಬರುವ ವೇಳೆಗೆ ಹೇಮಂತ್‌ಕುಮಾರ್ ಪ್ರಾಣಪಕ್ಷಿ ಹಾರಿ ಹೋಗಿತ್ತು. ಪ್ರಾಯಶಃ ತಕ್ಷಣ ಆತನನ್ನು ಆಸ್ಪತ್ರೆಗೆ ಕರೆದೊಯ್ದಿದ್ದರೆ ಬದುಕುಳಿಸುವ ಸಾಧ್ಯತೆ ಇತ್ತು. ಆದರೆ ಅಲ್ಲಿ ನೆರೆದಿದ್ದವರು ಮಾತ್ರ ಫೋಟೋ, ವಿಡಿಯೋ ತೆಗೆಯುವುದರಲ್ಲೇ ನಿರತರಾಗಿ, ರಕ್ಷಣೆ ಗೋಜಿಗೆ ಹೋಗಲಿಲ್ಲ. ದಿನ ಕಳೆದಂತೆ ಜನರು ಮಾನವೀಯತೆ ಮರೆಯುತ್ತಿದ್ದಾರೆ ಎಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕಿಲ್ಲ.

ಯೋಗಿ ನಾರೇಯಣ ಬಣಜಿಗ ಸಂಘದಿಂದ ಅ.12ಕ್ಕೆ ಪ್ರತಿಭಾ ಪುರಸ್ಕಾರ, ವಧು–ವರರ ಸಮಾವೇಶ

ಮೈಸೂರು,ಅ.4(ಜಿಎ)–ಯೋಗಿ ನಾರೇಯಣ ಬಣಜಿಗ (ಬಲಿಜ) ಸಂಘದ ವತಿಯಿಂದ ಅ.12ರಂದು ಬೆಳಗ್ಗೆ 10.30ಕ್ಕೆ ಸರಸ್ವತಿಪುರಂ ರಾಧಾಕೃಷ್ಣ ಮಾರ್ಗದಲ್ಲಿರುವ ಸಂಘದ ಆವರಣ ದಲ್ಲಿ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ, ವಧು–ವರರ ಸಮಾವೇಶ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಆರ್.ಗೋಪಾಲಕೃಷ್ಣ ಈ ವಿಷಯ ತಿಳಿಸಿ, ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ನಗದು, ಸ್ಮರಣಿಕೆ, ಪ್ರಮಾಣಪತ್ರ ನೀಡಿ ಗೌರವಿಸಲಾಗುವುದು. ಇದೇ ವೇಳೆ ರಾಜ್ಯದ ವಿವಿಧ ಭಾಗಗಳಿಂದ ಸಮುದಾಯ ವಧು–ವರರು ಆಗಮಿಸಿ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ. ಮಾಜಿ ಸಚಿವ ಡಾ.ಎಂ.ಆರ್. ಸೀತಾರಾಂ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಎಂ.ನಾರಾಯಣ, ಕಾಂಗ್ರೆಸ್ ವಕ್ತಾರ ಹೆಚ್.ಎ.ವೆಂಕಟೇಶ್, ಕೆ.ಎನ್.ಮೋಹನ್ ಕುಮಾರ್, ಸಿ.ಜಿ.ಚಂದ್ರಶೇಖರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಅಧ್ಯಕ್ಷ ಎಂ.ನಾರಾಯಣ, ಕೆ.ಚಂದ್ರಶೇಖರ್, ಬಿ.ಕೆ.ಸುರೇಶ್, ಹೆಚ್.ವಿ.ನಾಗರಾಜ ಉಪಸ್ಥಿತರಿದ್ದರು.

ಸಿದ್ದರಾಮಯ್ಯಗೆ ಅಸ್ಥಿರತೆ ಕಾಡುತ್ತಿದೆ; ಹಾಗಾಗಿಯೇ ನಾನೇ ಉಳಿದ ಅವಧಿಗೂ ಸಿಎಂ ಎನ್ನುತ್ತಾರೆ!

ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ವ್ಯಂಗ್ಯೋಕ್ತಿ

ಬೆಂಗಳೂರು, ಅ. 4 (ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಸ್ಥಿರತೆ ಭಾವನೆ ಕಾಡುತ್ತಿರುವುದರಿಂದ, ಉಳಿದ ಅವಧಿಗೂ ನಾನೇ ಅಧಿಕಾರದಲ್ಲಿ ಇರುತ್ತೇನೆ ಎಂಬುದಾಗಿ ಪದೇ ಪದೆ ಉಚ್ಛರಿಸುತ್ತಿದ್ದಾರೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ವ್ಯಂಗ್ಯವಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ ಎರಡೂವರೆ ವರ್ಷಗಳ ಅವಧಿಗೆ ಅಧಿಕಾರದಲ್ಲಿರುವ ವಿಶ್ವಾಸವಿಲ್ಲವೇ ಎಂದು ಪ್ರಶ್ನಿಸಿದರು.

ಇವರ ಹೇಳಿಕೆ ಹೇಗಿದೆ ಎಂದರೆ, ನಾನು ಸತ್ತಿಲ್ಲ, ಬದುಕಿದ್ದೇನೆ ಎಂದು ಹೇಳುವ ಪರಿಸ್ಥಿತಿ ಇವರಿಗೆ ಬರಬಾರದಿತ್ತು. ಕಾಂಗ್ರೆಸ್ ಆಡಳಿತದಲ್ಲಿ ನಡೆಯಬಹುದಾದ ಕ್ರಾಂತಿಯನ್ನು ಒಂದಷ್ಟು ಸಮಯ ಮುಂದೂಡುವ ಉದ್ದೇಶದಿಂದ ಜಾತಿಗಣತಿ ಕಾರ್ಯ ಕೈಗೆತ್ತಿಕೊಂಡಿದ್ದಾರೆಯೇ ಹೊರತು,



ಯಾವ ಸಮುದಾಯದ ಅಭಿವೃದ್ಧಿಗಲ್ಲ ಎಂದರು. ತಮ್ಮ ಉಳಿವಿಗಾಗಿ ಸರ್ಕಾರದ 420 ಕೋಟಿ ರೂ.ಗಳನ್ನು ವೆಚ್ಚ ಮಾಡುತ್ತಿದ್ದಾರೆ. ಈ ವರದಿಯೂ ಕಾಂತರಾಜ್ ವರದಿಯಂತೆ ಮೂಲೆ ಸೇರುತ್ತದೆ. ಸಿದ್ದರಾಮಯ್ಯ ಅವರಿಗೆ ಸಮೀಕ್ಷೆಗಿಂತ ತಾವು ಅಧಿಕಾರದಲ್ಲಿ ಹೇಗೆ ಮುಂದುವರೆಯಬೇಕು ಎಂಬ ಯೋಜನೆಗಳಲ್ಲಿ ಇದೂ ಒಂದು ಭಾಗವಾಗಿದೆ ಎಂದರು.

ಇವರ ಸಮೀಕ್ಷೆ ಹೇಗಿದೆಯೆಂದರೆ, ಮುಜಾವರ್ ಮುಸ್ಲಿಂ ಬ್ರಾಹ್ಮಣ ಎಂದು ಸೇರಿಸಿದ್ದಾರೆ, ಅದನ್ನು ಎಲ್ಲಿಂದ ತಂದಿದ್ದಾರೆ ಎಂದು ಪ್ರಶ್ನಿಸಿದರು.

ಜಿಎಸ್‌ಟಿ ಪಾಲನ್ನು ರಾಜ್ಯಕ್ಕೆ ಸರಿಯಾಗಿ ನೀಡುತ್ತಿಲ್ಲ ಎಂಬ ಮುಖ್ಯಮಂತ್ರಿ ಆರೋಪವನ್ನು ಸಾರಾಸಗಟಾಗಿ ತಳ್ಳಿಹಾಕಿದ ಜೋಷಿ, ಕರ್ನಾಟಕದ ಪಾಲಿಗೆ ಎಷ್ಟು ಹಣ ದಕ್ಕಬೇಕೋ, ಅಷ್ಟು ದಕ್ಕಿದೆ. ಸರ್ಕಾರ ಅರ್ಜಿ ಹಾಕಿಕೊಂಡು ನಮ್ಮ ಬಳಿ ಹಣ ಕೇಳಬೇಕಿಲ್ಲ, ಆಯಾ ರಾಜ್ಯಗಳು ಕೇಳುವುದಕ್ಕೂ ಮುನ್ನವೇ ಅದರ ಪಾಲಿನ ಹಣ ಸಂದಾಯವಾಗಿರುತ್ತದೆ. ಕಾಂಗ್ರೆಸ್ ಆಡಳಿತದಲ್ಲಾದರೆ, ತಮ್ಮ ಪಾಲು ಪಡೆಯಲು ಆಯಾ ರಾಜ್ಯಗಳು ಪದೇ ಪದೇ ಅರ್ಜಿ ಸಲ್ಲಿಸಬೇಕಿತ್ತು, ಆದರೆ, ಈಗ ಅಂತಹ ಪರಿಸ್ಥಿತಿ ಇಲ್ಲ ಎಂದರು.

ಅಧಿಕಾರ ಸ್ವೀಕಾರ...




ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಮಂಡಳಿ ಉಪಾಧ್ಯಕ್ಷೆಯಾಗಿ ಕೆ.ಆರ್. ನಗರ ತಾಲೂಕಿನ ಕಾಂಗ್ರೆಸ್ ಮುಖಂಡರಾದ ಐಶ್ವರ್ಯ ಮಂಚನಹಳ್ಳಿ ಮಹದೇವ್ ಅವರು ಬೆಂಗಳೂರಲ್ಲಿರುವ ನಿಗಮದ ಕೇಂದ್ರ ಕಚೇರಿಯಲ್ಲಿ ಅಧಿಕಾರ ವಹಿಸಿಕೊಂಡರು. ಈ ವೇಳೆ ಅವರ ತಾಯಿ ಅನುರಾಧಾ ಮಂಚನಹಳ್ಳಿ ಮಹದೇವ ಇತರರಿದ್ದರು.

ಅ.7ರಂದು ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

ಮೈಸೂರು,ಅ.4–ಮೈಸೂರಿನ ಜಯಲಕ್ಷ್ಮಿಪುರಂ ಶ್ರೀ ಕಾವೇರಿ ಕೊಡಗು ಮಹಿಳಾ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅ. 7 ರಂದು ಬೆಳಗ್ಗೆ 10.30 ಗಂಟೆಗೆ ಸಂಘದ ಅಧ್ಯಕ್ಷರಾದ ಶ್ರೀಮತಿ ಕೊಲ್ಲಿರ ಬೊಳ್ಳಮ್ಮ ಕುಟ್ಟಪ್ಪ ಅವರ ಅಧ್ಯಕ್ಷತೆಯಲ್ಲಿ ವಿಜಯನಗರದ ಕೊಡವ ಸಮಾಜದಲ್ಲಿ ನಡೆಯಲಿದೆ ಎಂದು ಗೌರವ ಕಾರ್ಯದರ್ಶಿ ಶ್ರೀಮತಿ ಭವಾನಿ ಬೆಳ್ಳಿಯಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ

ಪಿ.ಜಿ. ದ್ವಾರಕಾನಾಥ್



ಮೈಸೂರು,ಅ.4–ಬೆಂಗಳೂರು ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಪಿ.ಜಿ.ದ್ವಾರಕಾನಾಥ್ (85) ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ನಿಧನರಾದರು. ವಿದ್ಯಾವರ್ಧಕ ಸಂಘಕ್ಕೆ ವಿಜ್ಞಾನ ಉಪಾಧ್ಯಾಯರಾಗಿ ಸೇರಿಕೊಂಡ ದ್ವಾರಕಾನಾಥ್ ಅವರು, ಇಲ್ಲಿ ಸುಮಾರು 65 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ್ದರು. ವಿದ್ಯಾವರ್ಧಕ ಸಂಘ, ಬಿ.ಎಂ.ಶ್ರೀ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ (ಕುವೆಂಪುನಗರ) ಮತ್ತು ವಿವಿಎಸ್ ಸಪ್ತಶ್ರೀ ಪಬ್ಲಿಕ್ ಸ್ಕೂಲ್ (ವಿಜಯನಗರ)ನ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ಮೂಲತಃ ಬೆಂಗಳೂರಿನವರಾದ ಇವರು ಪತ್ನಿ ಲೀಲಾವತಿ, ಪುತ್ರ ಅನಿರುಧ್, ಪುತ್ರಿ ಅಚಲಾ, ಸೊಸೆ ತಾನ್ಯಾ, ಅಳಿಯ ರಂಜನ್, ಮೊಮ್ಮಗ ಅತಿಕ್ಷ್ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬೆಂಗಳೂರಿನಲ್ಲಿ ಶನಿವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ.ಆರ್.ದರ್ಶನ್ ಕುಮಾರ್



ಮೈಸೂರು,ಅ.4–ಮೈಸೂರಿನ ಬಂಬೂಬಜಾರ್ ನಿವಾಸಿ ಹಾಗೂ ದಿವಂಗತ ಆಯಿಲ್ ಮಿಲ್ ಬಿ.ಬಿ.ರಾಜಶೇಖರ್ ಅವರ 3ನೇ ಪುತ್ರ ಬಿ.ಆರ್.ದರ್ಶನ್ ಕುಮಾರ್(39) ಗುರುವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಬನ್ನಿಮಂಟಪದ ವೀರಶೈವ ರುದ್ರಭೂಮಿಯಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆಂಪೇಗೌಡ



ಮೈಸೂರು, ಅ. 4–ಪಾಂಡವಪುರ ತಾಲೂಕು ಕೆ.ಬೆಟ್ಟಹಳ್ಳಿ ನಿವಾಸಿ ಕೆಂಪೇಗೌಡ (63) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಪ್ರಮೀಳಾ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಕೆ. ಬೆಟ್ಟಹಳ್ಳಿಯ ಅವರ ತೋಟದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆಯೇಷಾ ಫಿನಾ

ಮೈಸೂರಿನ ಸಿದ್ಧಿಖ್ ನಗರದ ನಿವಾಸಿ ಅಬ್ದುಲ್ ಬಸಿತ್ ಕೋಟೇಶ್ವರ್ ಅವರ ಪತ್ನಿ ಆಯೇಷಾ ಫಿನಾ (48) ಶುಕ್ರವಾರ ಹೃದಯಾಘಾತದಿಂದ ನಿಧನರಾದರು.

ಮೃತರು ಪತಿ, ಪುತ್ರ ಅಬ್ದುಲ್ಲಾ, ಪುತ್ರಿ ಅವನಾ, ತಂದೆ ಶಾಹುಲ್ ಹಮೀದ್ ಮನ್ನಾ (ಮನ್ನಾ ಶೂಸ್, ವಿರಾಜಪೇಟೆ), ತಾಯಿ ನಿಗರ್ ಸುಲ್ತಾನಾ, ಸಹೋದರರಾದ ಅಫ್ಘಾನ್ ಮನ್ನಾ, ಜೀಶನ್ ಮನ್ನಾ, ಶಾರ್‌ಹಾನ್ ಮನ್ನಾ ಮತ್ತು ಅಮರ್ ಮನ್ನಾ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯ ಸಂಸ್ಕಾರ ಬೆಂಗಳೂರು–ಮೈಸೂರು ರಸ್ತೆಯಲ್ಲಿರುವ ಮುಸ್ಲಿಮರ ಸ್ಮಶಾನದಲ್ಲಿ ಶನಿವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.10.2025 ಭಾನುವಾರ, ಮಳೆ ನಕ್ಷತ್ರ: ಹಸ್ತ 27.09.2025 ರಿಂದ 10.10.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಶತಭಿಷ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

■ **ಶ್ರೀ ಶ್ರೀ ಸುಬ್ಬರಾಯದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ ಶ್ರೀ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ತ್ರಯೋದಶಿ, ಬೆಳಗ್ಗೆ ಮಹಾಭಿಷೇಕ, ಸಾಯಂಕಾಲ ಪುಷ್ಪಯಾಗ, ಭೇರಿತಾಡನ, ಸ್ಥಳ: ದೇವಸ್ಥಾನದ ಪ್ರಾಂಗಣ, ಕೃಷ್ಣ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ : ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6.30 ರಿಂದ.

■ **ಶೃಂಗೇರಿ ಶ್ರೀ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾ ಶರನ್ನವರಾತ್ರೋತ್ಸವ–2025, ತ್ರಯೋದಶಿ, ಶ್ರೀ ಅನ್ನಪೂರ್ಣೇಶ್ವರಿ ಅಲಂಕಾರ, ಸ್ವಯಂವರ ಪಾರ್ವತಿ ಹೋಮ, ಸ್ಥಳ: ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ, ಬೆಳಗ್ಗೆಯಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ, ಗರ್ಭಸಂಸ್ಕಾರ ಉಚಿತ ತಪಾಸಣಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್. ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10ರಿಂದ.

■ **ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸ್‌ಲೆನ್ಸ್:** ದಸರಾ ಕೇಕ್ ಶೋ, ಸ್ಥಳ: ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸ್‌ಲೆನ್ಸ್, ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11ಕ್ಕೆ.

■ **ಮೈಸೂರು ಬೊಂಬೆ ರಂಗ ಮಂದಿರ:** ಮೈಸೂರು ಬೊಂಬೆ ಪ್ರದರ್ಶನ, ಸ್ಥಳ: ಮೈಸೂರು ಪಪ್ಪೆಟ್ ಥಿಯೇಟರ್, ಮೃಗಾಲಯದ ಎದುರು, ಸಂಜೆ 4.30ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ಕರ್ಮಸಂನ್ಯಾಸಯೋಗ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಬಸವ ಸಮಿತಿ :** ಶರಣ ಸಂಗಮ–310, ದೇವನೂರು ಪ್ರಶಾಂತ್ ಅವರಿಂದ ಶೂನ್ಯ ಸಂಪಾದನೆ, ಅಧ್ಯಕ್ಷತೆ: ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನಲ್ ಥಿಯೇಟರ್:** ಕೈಲಾಸಂ ಒಂದು ವಿಲಕ್ಷಣ ಪ್ರತಿಭೆ ಕುರಿತು ಚರ್ಚೆ, ಉಪಸ್ಥಿತರು: ಹಿರಿಯ ರಂಗಕರ್ಮಿ ಕೆ.ವೆಂಕಟರಾಜು, ಲೇಖಕ ಬಿ.ಆರ್. ಮಂಜುನಾಥ್, ನಾಟಕಕಾರ ಶಶಿಧರ ಡೋಂಗ್ರೆ, ಹಿರಿಯ ರಂಗಕರ್ಮಿ ಪ್ರಸನ್ನ, ಸ್ಥಳ: ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ, ಹಾರ್ಡ್ವಿಕ್ ಶಾಲೆ ಆವರಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಸುಧರ್ಮಾ ಸಂಸ್ಕೃತ ದಿನಪತ್ರಿಕೆ:** ಬೆಳಗ್ಗೆ 10.30ಕ್ಕೆ 56ನೇ ವಾರ್ಷಿಕೋತ್ಸವದ ಅಂಗವಾಗಿ ಸುಧರ್ಮಾ ವಾರ್ಷಿಕ ವಿಶೇಷ ಸಂಚಿಕೆ ಹಾಗೂ ಲೇಖಕ ಕೂಡ್ಲಿ ಗುರುರಾಜ್ ಬರೆದಿರುವ ಎಸ್.ನಟರಾಜ್ ಅನುವಾದಿಸಿರುವ ದಿ ಸಾಗ ಆಫ್ ಸುಧರ್ಮ ಪುಸ್ತಕ ಹಾಗೂ ಸುಧರ್ಮಾ ವಾರ್ಷಿಕ ವಿಶೇಷ ಸಂಚಿಕೆ ಬಿಡುಗಡೆ : ಪದ್ಮಶ್ರೀ ಪುರಸ್ಕೃತರಾದ ಡಾ.ವಿಜಯ ಸಂಕೇಶ್ವರ್, ಅಧ್ಯಕ್ಷತೆ: ಸಂಸ್ಕೃತ ವಿದ್ವಾನ್ ಡಾ.ಎಚ್.ವಿ. ನಾಗರಾಜರಾವ್, ಪ್ರಸ್ತಾವನೆ: ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿವೃತ್ತ ಉಪನಿರ್ದೇಶಕ ವಿದ್ವಾನ್ ಡಾ. ಟಿ.ವಿ. ಸತ್ಯನಾರಾಯಣ ತಲಕಾಡು, ಮುಖ್ಯ ಅತಿಥಿಗಳು: ಶಾಸಕರಾದ ಟಿ.ಎಸ್. ಶ್ರೀವತ್ಸ, ಕೆ. ಶಿವಕುಮಾರ್, ಕುಮಾರಿ ಸಮಷ್ಟಿ ಗುಬ್ಬಿ, ವಿದ್ವಾನ್ ಡಾ. ವಿ.ಡಿ. ಹೆಗಡೆ, ವಿದ್ವಾನ್ ಎಂ.ಆರ್. ಸತೀಶ್; ಸಂಜೆ 4.15ಕ್ಕೆ ಸಮಾರೋಪ ಸಮಾರಂಭ, ಗ್ರಂಥಗಳ ಲೋಕಾರ್ಪಣೆ: ಬೆಂಗಳೂರು ಕರ್ನಾಟಕ ಸಂಸ್ಕೃತ ವಿವಿ ಕುಲಪತಿ ಡಾ. ಅಹಲ್ಯಾ ಶರ್ಮಾ, ಮುಖ್ಯ ಅತಿಥಿಗಳು: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ವಿಜಯ ವಿಠ್ಠಲ ವಿದ್ಯಾಸಂಸ್ಥೆ ಅಧ್ಯಕ್ಷ ಆರ್. ವಾಸುದೇವ ಭಟ್, ಸ್ಥಳ: ಬಿ.ಎಸ್.ಎಸ್. ವಿದ್ಯೋದಯ ಶಾಲೆ ಆವರಣ, ಕೃಷ್ಣಮೂರ್ತಿಪುರಂ.

■ **ಜನಮನ ಸಾಂಸ್ಕೃತಿಕ ಸಂಘಟನೆ:** ಪಿ.ಲಂಕೇಶರ ಕಥೆ ಕಲ್ಲು ಕರಗುವ ಸಮಯ ನಾಟಕ ಪ್ರದರ್ಶನ, ರಂಗರೂಪ, ವಿನ್ಯಾಸ ಮತ್ತು ನಿರ್ದೇಶನ: ಕೆ.ಆರ್.ಸುಮತಿ, ಸಂಗೀತ: ಹೆಚ್.ಜನಾರ್ಧನ್ (ಜನ್ನಿ), ರಂಗಸಜ್ಜಿಕೆ: ಹೆಚ್.ಕೆ.ವಿಶ್ವನಾಥ್, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಸಾಧನ ಮಂದಿರ :** ಪೂಜ್ಯ ಸ್ವಾಮಿ ಹಂಸಾನಂದ ಅವರಿಂದ ಸರಸ್ವತಿ ಪೂಜೆ, ಸಂಜೆ 4.45 ರಿಂದ ಯಡತೊರೆ ಶ್ರೀ ಯೋಗಾನಂದೇಶ್ವರ ಮಠ, ಸಂಜೆ 6 ರಿಂದ ಶ್ರೀ ಕೃಷ್ಣ ಮಂದಿರ, ಗೋಕುಲಂ 3ನೇ ಹಂತ; ರಾ. 7 ರಿಂದ ಸಮುದಾಯ ಭವನ, ಗುರುದ್ವಾರ ಸಮೀಪ, ಬೃಂದಾವನ ಬಡಾವಣೆ.

■ **ಋಷಿ ಸಂಸ್ಕೃತಿ ವಿದ್ಯಾಕೇಂದ್ರ ಟ್ರಸ್ಟ್ :** ಸಿದ್ಧ ಸಮಾಧಿ ಯೋಗ ಶಿಬಿರದ ಬಗ್ಗೆ ಉಚಿತ ಪರಿಚಯ ಕಾರ್ಯಕ್ರಮ, ಸ್ಥಳ: ಋಷಿ ಸಂಸ್ಕೃತಿ ವಿದ್ಯಾಕೇಂದ್ರ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ರಂಗಾಯಣ :** ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ನಾಟಕ ಶ್ರೀತಿಮ್ಮಾರ್ಪಣಮಸ್ತು, ನಿರ್ದೇಶನ : ರಮೇಶ್ ಕೆ. ಬೆಣಕಲ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ

ಮುಳ್ಳೂರು ಗ್ರಾಮದಲ್ಲಿಂದು, ಹುಣಸೂರು ತಾ.

■ **ಬಾ ಸೃಷ್ಟಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ :** ಬಾ ಸೃಷ್ಟಿ ಮಕ್ಕಳ ರಂಗ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಮತ್ತು ಮುಳ್ಳೂರು ಸರ್ಕಾರಿ ಶಾಲೆಯ ಮಕ್ಕಳಿಂದ ನಾಟಕ ಹಟ್ಟಿಪದ, ನಿರ್ದೇಶನ : ಶ್ರೀಕಾಂತ ನವಲಗರಿ, ಸಂಜೆ 7.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಕೆ.ಪಿ.ರೇವತಿ, ಹಂಸಿನಿ.ಎಸ್.ಕುಮಾರ್, ವ್ಯಾಖ್ಯಾನ –ಡಾ.ಎನ್.ಎಸ್.ತಾರಾನಾಥ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು– ಮಧುಲಿಕ ಶ್ರೀನಿವಾಸ್, 9.40 ನಮ್ಮ ಆರೋಗ್ಯ, ಬೆನ್ನುನೋವಿಗೆ ಕಾರಣಗಳು ಮತ್ತು ಆಯುರ್ವೇದ ಪರಿಹಾರ ಕುರಿತು ಆಯುರ್ವೇದ ತಜ್ಞರಾದ ಡಾ. ಶ್ರೀಶ ಕೃಷ್ಣ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ– ನೇರಫೋನ್ ಇನ್ ಕಾರ್ಯಕ್ರಮ, 10.30 KRISH TRISH and Balty boy ನಾವು ಭಾರತೀಯರು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ– ಬೋಗಾದಿಯ ಅಮೃತಾ ವಿದ್ಯಾಲಯಂ ಶಾಲೆಯ ಮಕ್ಕಳ ಕಾರ್ಯಕ್ರಮ ವೈವಿಧ್ಯ, 11.05 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ : ಪಾಂಡವಪುರ ತಾಲೂಕು, ಹೆಗ್ಗಡಹಳ್ಳಿಯ ಕೃಷ್ಣೇಗೌಡ ಮತ್ತು ಸಂಗಡಿಗರಿಂದ ನಾಟಿ ಹಾಕುವ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಭಾರತ ಹಾಗೂ ಪಾಕಿಸ್ತಾನ ತಂಡಗಳ ನಡುವೆ ಕೊಲಂಬೊದ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆಯುವ ಐಸಿಸಿ ವಿಶ್ವಕಪ್ ಮಹಿಳಾ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

ದೈನಂದಿನ ಆಕರ್ಷಣೆಗಳು

ಮ. 1, 4 ಮತ್ತು ಸಂಜೆ 7	: ಜೆಮಿನಿ ಸರ್ಕಸ್, ಹಾರ್ಸ್ ಪಾರ್ಕ್ ಮೈದಾನ, ಕಾರಂಜಿ ಕೆರೆ ಸಮೀಪ (3 ಪ್ರದರ್ಶನ)
ಸಂಜೆ 6,7,8 ಮತ್ತು ರಾ.9	: ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ರೈಡ್ (1 ಗಂಟೆ– ದಿನ 4 ಟ್ರಿಪ್),
ಬೆ. 10 ರಿಂದ 5	: ದಸರಾ ಛಾಯಾಚಿತ್ರ ಪ್ರದರ್ಶನ, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ
ಬೆ. 10ರಿಂದ	: ಆಹಾರ ಮೇಳ, ಸ್ಥಳ: ಮಹಾರಾಜ ಕಾಲೇಜು ಮೈದಾನ.
ಬೆ. 10ರಿಂದ 10 ರವರೆಗೆ	: ದಸರಾ ವಸ್ತುಪ್ರದರ್ಶನ.

ಮೊದಲ ಟೆಸ್ಟ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಭಾರತಕ್ಕೆ ಇನ್ನಿಂಗ್ಸ್ ಜೊತೆಗೆ 140 ರನ್‌ಗಳ ಭರ್ಜರಿ ಗೆಲುವು



ವಿಕೆಟ್ ಕಿತ್ತ ಸಂಭ್ರಮದಲ್ಲಿ ಟೀಂ ಇಂಡಿಯಾ ಆಟಗಾರರು

ಅಲಹಾಬಾದ್, ಅ.4– ಇಲ್ಲಿನ ನರೇಂದ್ರ ಮೋದಿ ಅಂತರರಾಷ್ಟ್ರೀಯ ಕ್ರಿಕೆಟ್ ಮೈದಾನದಲ್ಲಿ ನಡೆದ ವೆಸ್ಟ್ ಇಂಡೀಸ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಭರ್ಜರಿ ಬ್ಯಾಟಿಂಗ್ ಮತ್ತು ಬೌಲಿಂಗ್ ಪ್ರದರ್ಶನ ತೋರಿದ ಭಾರತ ತಂಡ ಇನಿಂಗ್ಸ್ ಮತ್ತು 140 ರನ್‌ಗಳ ಭರ್ಜರಿ ಗೆಲುವು ಸಾಧಿಸಿದೆ. ಆ ಮೂಲಕ ಸರಣಿಯಲ್ಲಿ 1–0 ಅಂತರದಿಂದ ಮುನ್ನಡೆ ಕಾಯ್ದುಕೊಂಡಿದೆ.

ಶನಿವಾರ 286 ರನ್‌ಗಳ ಹಿನ್ನಡೆಯೊಂದಿಗೆ ದ್ವಿತೀಯ ಇನಿಂಗ್ಸ್ ಆರಂಭಿಸಿದ ವಿಂಡೀಸ್ ರವೀಂದ್ರ ಜಡೇಜಾ ಹಾಗೂ ಮೊಹಮ್ಮದ್ ಸಿರಾಜ್ ಬೌಲಿಂಗ್ ದಾಳಿಗೆ ನಲುಗಿತು. ವೆಸ್ಟ್ ಇಂಡೀಸ್ ಕೇವಲ 2 ಸೆಷನ್‌ನಲ್ಲೇ 45.1 ಓವರ್‌ಗಳಲ್ಲಿ 146 ರನ್‌ಗಳಿಗೆ ಆಲೌಟ್ ಆಗುವ ಮೂಲಕ ದೊಡ್ಡ ಅಂತರದಿಂದ ಸೋಲು ಕಂಡಿತು.

ವಿಂಡೀಸ್ ಪರ ಅಲಿಕ್ ಅಥಾನಾಜೆ 38 ರನ್ ಗಳಿಸಿದ್ದು ವೈಯಕ್ತಿಕ ಗರಿಷ್ಠ ರನ್ ಆಗಿತ್ತು ಜಸ್ಟೀನ್ ಗ್ರೀನ್ಸ್ 25 ರನ್ ಸಿಡಿಸಿ ಕೊಂಚ ಹೋರಾಟ ನೀಡಿದರು. ಅಂತಿಮವಾಗಿ ಜೇಡನ್ ಸೀಲ್ಸ್ 22 ರನ್ ಗಳಿಸಿ ಕೊನೆಯವರಾಗಿ ವಿಕೆಟ್ ಒಪ್ಪಿಸಿದರು.

ಭಾರತದ ಪರ ರವೀಂದ್ರ ಜಡೇಜಾ 4 ವಿಕೆಟ್ ಪಡೆದು ಮಿಂಚಿದರು. ಮೊಹಮ್ಮದ್ ಸಿರಾಜ್ 3, ಕುಲದೀಪ್ ಯಾದವ್ 2 ಹಾಗೂ ವಾಷಿಂಗ್ಟನ್ ಸುಂದರ್ 1 ವಿಕೆಟ್ ಪಡೆದು ತಂಡಕ್ಕೆ ಗೆಲುವು ತಂದುಕೊಟ್ಟರು.

ಇದಕ್ಕೂ ಮೊದಲು ವೆಸ್ಟ್ ಇಂಡೀಸ್ ತನ್ನ ಮೊದಲ ಇನಿಂಗ್ಸ್‌ನಲ್ಲಿ ಕೇವಲ 162 ರನ್‌ಗಳಿಗೆ ಆಲೌಟ್ ಆಗುವ ಮೂಲಕ ಹಿನ್ನಡೆ ಅನುಭವಿಸಿತು. ಜಸ್ಟಿನ್ ಗ್ರೀವ್ (32), ಶೈ ಹೋಪ್ (26) ಹಾಗೂ ರೋಸ್ಟನ್ ಚೇಸ್ (24) ಕೊಂಚ ಹೋರಾಟ ನೀಡಿದರು.

ಬಳಿಕ ಬ್ಯಾಟಿಂಗ್ ಇಳಿದ ಭಾರತ ಕೆ.ಎಲ್.ರಾಹುಲ್ (100), ಧ್ರುವ್ ಜುರೆಲ್ (125) ಹಾಗೂ ರವೀಂದ್ರ ಜಡೇಜಾ (104 ಅಜೇಯ) ಬ್ಯಾಟಿಂಗ್ ಶತಕಗಳ ನೆರವಿನಿಂದ ಬರೋಬ್ಬರಿ 448 ರನ್ ಕಲೆಹಾಕಿ 286 ರನ್‌ಗಳ ಬೃಹತ್ ಮುನ್ನಡೆ ಸಾಧಿಸಿ ಡಿಕ್ಲೇರ್ ಮಾಡಿಕೊಂಡಿತು.

ವೆಸ್ಟ್ ಇಂಡೀಸ್ ಪರ ರೋಸ್ಟನ್ ಚೇಸ್ 2. ಜೇಡನ್ ಸೀಲ್ಸ್, ವಾರಿಕನ್ ಹಾಗೂ ಪೀರೆ ತಲಾ ಒಂದು ವಿಕೆಟ್ ಪಡೆದುಕೊಂಡರು. ಮೊದಲ ಟೆಸ್ಟ್‌ನಲ್ಲಿ ಒಂದು ಶತಕ ಹಾಗೂ 4 ವಿಕೆಟ್ ಪಡೆದ ರವೀಂದ್ರ ಜಡೇಜಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಆಸ್ಟ್ರೇಲಿಯಾ ಏಕದಿನ ಸರಣಿಗೆ ಭಾರತ ತಂಡಕ್ಕೆ ಶುಭಮನ್ ಗಿಲ್ ನಾಯಕ

ಅಹಮದಾಬಾದ್, ಅ.4– ಭಾರತ ಏಕದಿನ ಕ್ರಿಕೆಟ್ ತಂಡಕ್ಕೆ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಮರಳಿದ್ದಾರೆ. ಆದರೆ ತಂಡದ ನಾಯಕತ್ವವನ್ನು ಶುಭಮನ್ ಗಿಲ್ ಅವರಿಗೆ ನೀಡಲಾಗಿದೆ. ಮುಂಬೈನ ಬ್ಯಾಟರ್ ಶ್ರೇಯಸ್ ಅಯ್ಯರ್ ಉಪನಾಯಕರಾಗಿದ್ದಾರೆ.



ಶನಿವಾರ ನಡೆದ ಸಭೆಯಲ್ಲಿ 15 ಆಟಗಾರರ ತಂಡವನ್ನು ಪ್ರಕಟಿಸಲಾಯಿತು. ಮೂರು ಏಕದಿನ ಪಂದ್ಯಗಳ ಸರಣಿ ಮತ್ತು ಐದು ಟಿ20 ಪಂದ್ಯಗಳ ಸರಣಿಗಳಿಗೆ ತಂಡಗಳನ್ನು ಆಯ್ಕೆ ಮಾಡಲಾಯಿತು.

ಟಿ20 ತಂಡಕ್ಕೆ ಸೂರ್ಯಕುಮಾರ್ ಯಾದವ್ ಅವರೇ ನಾಯಕತ್ವ ವಹಿಸುವರು. ಈಚೆಗಷ್ಟೇ ಅವರ ನಾಯಕತ್ವದಲ್ಲಿ ತಂಡವು ಏಷ್ಯಾ ಕಪ್ ಜಯಿಸಿತ್ತು. ಗಿಲ್ ಉಪನಾಯಕರಾಗಿದ್ದಾರೆ. ವಿಕೆಟ್‌ಕೀಪರ್–ಬ್ಯಾಟರ್ ರಿಷಭ್ ಪಂತ್ ಅವರಿನ್ನೂ ಗಾಯದಿಂದ ಪೂರ್ಣ ಚೇತರಿಸಿಕೊಂಡಿಲ್ಲ. ಆದ್ದರಿಂದ ಧ್ರುವ ಜುರೇಲ್ ಅವಕಾಶ ಗಿಟ್ಟಿಸಿದ್ದಾರೆ. ಏಕದಿನ ತಂಡದಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ ಅವರು ಪ್ರಥಮ ವಿಕೆಟ್‌ಕೀಪರ್ ಆಗಿದ್ದಾರೆ. ಕರ್ನಾಟಕದ ವೇಗಿ ಪ್ರಸಿದ್ಧ ಕೃಷ್ಣ ಕೂಡ ಸ್ಥಾನ ಪಡೆದಿದ್ದಾರೆ.

ರೋಹಿತ್ ಮತ್ತು ವಿರಾಟ್ ಅವರು ಈಚೆಗೆ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ಹೋದ ವರ್ಷ ಟಿ20 ಮಾದರಿಗೂ ನಿವೃತ್ತಿ ಘೋಷಿಸಿದ್ದರು.

ತಂಡಗಳು ಇಂತಿವೆ: ಏಕದಿನ ಕ್ರಿಕೆಟ್: ಶುಭಮನ್ ಗಿಲ್ (ನಾಯಕ), ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್ (ಉಪನಾಯಕ), ಯಶಸ್ವಿ ಜೈಸ್ವಾಲ್, ಅಕ್ಷರ್ ಪಟೇಲ್, ಕೆ.ಎಲ್. ರಾಹುಲ್ (ವಿಕೆಟ್‌ಕೀಪರ್), ನಿತೀಶ್ ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಹರ್ಷಿತ್ ರಾಣಾ, ಮೊಹಮ್ಮದ್ ಸಿರಾಜ್, ಅರ್ಷದೀಪ್ ಸಿಂಗ್, ಪ್ರಸಿದ್ಧಕೃಷ್ಣ, ಧ್ರುವ ಜುರೇಲ್ (ವಿಕೆಟ್‌ಕೀಪರ್).

ಟಿ20 ಕ್ರಿಕೆಟ್: ಸೂರ್ಯಕುಮಾರ್ ಯಾದವ್ (ನಾಯಕ), ಶುಭಮನ್ ಗಿಲ್ (ಉಪನಾಯಕ), ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ನಿತೀಶ್ ಕುಮಾರ್ ರೆಡ್ಡಿ, ಶಿವಂ ದುಬೆ, ಅಕ್ಷರ್ ಪಟೇಲ್, ಜೀತೇಶ್ ಶರ್ಮಾ (ವಿಕೆಟ್‌ಕೀಪರ್), ವರುಣ್ ಚಕ್ರವರ್ತಿ, ಜಸ್‌ಪ್ರೀತ್ ಬೂಮ್ರಾ, ಅರ್ಷದೀಪ್ ಸಿಂಗ್, ಕುಲದೀಪ್ ಯಾದವ್, ಹರ್ಷಿತ್ ರಾಣಾ, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ರಿಂಕು ಸಿಂಗ್, ವಾಷಿಂಗ್ಟನ್ ಸುಂದರ್.

ವೇಳಾಪಟ್ಟಿ: ಏಕದಿನ ಪಂದ್ಯಗಳು: ಪರ್ತ್ (ಅ.19), ಅಡಿಲೇಡ್ (ಅ.23) ಮತ್ತು ಸಿಡ್ನಿ (ಅ.25)

ಟಿ20 ಪಂದ್ಯಗಳು: ಸಿಡ್ನಿ (ಅ.29), ಮೆಲ್ಬರ್ನ್ (ಅ.31), ಹೋಬರ್ಟ್ (ನ.2), ಗೋಲ್ಡ್ ಕಾಸ್ಟ್ (ನ.6) ಮತ್ತು ಬ್ರಿಸ್ಬೇನ್ (ನ.8).

ವಿಶ್ವ ರಕ್ತದಾನಿಗಳ ದಿನಾಚರಣೆ; ದಾನಿಗಳಿಗೆ ಸನ್ಮಾನ



ಮೈಸೂರು, ಅ. 4– ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತ ನಿಧಿ ಕೇಂದ್ರದ ಆವರಣದಲ್ಲಿ ಬ್ಲಡ್ ಆನ್ ಕಾಲ್ ಕ್ಲಬ್ ಸಹಯೋಗದೊಂದಿಗೆ ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ 15 ಬಾರಿ ಮೇಲ್ಪಟ್ಟು ಸ್ವಯಂ ಪ್ರೇರಿತ ರಕ್ತದಾನ ಮಾಡಿದ ರಕ್ತದಾನಿಗಳಾದ ನವೀನ್, ಕಾಂತಿಲಾಲ್ ಸಂದೇಶ, ಮಂಜುನಾಥ್ ವೈ ಎಸ್, ಯಶ್ವಂತ್, ರಶ್ಮಿ ಶರ್ಮಾ,ಪರಾಶ್ರಮ ಬೋರನ, ರಾಹುಲ್ ಕೊಠಾರಿ, ಮೀನಾಕ್ಷಿ ಕೊಠಾರಿ, ಮನೀಶ್ ಜೈನ್, ವನಿತಾ ಡಕ್, ಮುಕೇಶ್ ಅವರನ್ನು ಸನ್ಮಾನಿಸಲಾಯಿತು

ಇದೇ ಸಂದರ್ಭದಲ್ಲಿ 100ಕ್ಕೂ ಹೆಚ್ಚು ಬಾರಿ ಸ್ವಯಂ ಪ್ರೇರಿತ ರಕ್ತದಾನ ಮಾಡಿದ ದೇವೇಂದ್ರ ಪರಿಹಾರಿಯ ಅವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು.

ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂ ಗಾರ್, ಬ್ಲಡ್ ಆನ್ ಕಾಲ್ ಕ್ಲಬ್ ಮೈಸೂರು ದೇವೇಂದ್ರ ಪ ರಿ ಹಾ ರಿ ಯ, ಆನಂದ್ ಮಾಂಡೋಟ್, ಮಹಾವೀರ ಜೈನ, ಸಪ್ನ, ಮಮತಾ, ಸದಾಶಿವ್ ಹಾಗೂ ಸೇರಿದಂತೆ ಇನ್ನಿತರರು ಹಾಜರಿದ್ದರು.

ಸಹಸ್ರ ಚಂಡಿಕಾ ಯಾಗದ ಪೂರ್ಣಾಹುತಿ

ಮೈಸೂರು,ಅ.4– ನಗರದ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ಹಾಗೂ ಶರನ್ನವರಾತ್ರಿ ಅಂಗವಾಗಿ ನಡೆದ ವಿಸ್ತಾರ ಸಹಸ್ರ ಚಂಡಿಕಾಯಾಗದ ಪೂರ್ಣಾಹುತಿ ಅ.7 ಹುಣ್ಣಿಮೆ ದಿನ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳ್ಳಿಗ್ಗೆ 9.30ಕ್ಕೆ ಪೂಜಾ ಕೈಂಕರ್ಯ ಆರಂಭವಾಗಲಿದ್ದು, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ ಹಾಗೂ ಮಹಾಮಂಗಳಾರತಿ ನೆರವೇರಲಿದೆ. ಜೊತೆಗೆ ಶನಿ ಮಹಾಶಾಂತಿ ಮತ್ತು ಬಾದಾನಿವಾರಕ ಸುದರ್ಶನ ಹೋಮ, ಕುಜದೋಷ ನಿವೃತ್ತಿ ಶಾಂತಿ, ರಾಹು ಕೇತು ಶಾಂತಿ, ಗುರುಮಹಾಶಾಂತಿ, ಶ್ರೀ ಸತ್ಯನಾರಾಯಣ ಪೂಜೆ ಮತ್ತು ಮೃತ್ಯುಂಜಯ ಹೋಮ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಾರ್ವಜನಿಕ ಪ್ರಕಟಣೆ

ಈ ಮುಖಾಂತರ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ನಮ್ಮ ಕಕ್ಷಿದಾರರು ಇದೇ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನಿಗೆ ಸಂಬಂಧಪಟ್ಟ ಹಾಗೆ ಅದರ ಹಾಲಿ ಮಾಲೀಕರಾದ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ಟೌನ್, ವಾರ್ಡ್ ನಂ–5, ಮನೆ ನಂ.102 ರಲ್ಲಿ ವಾಸವಾಗಿರುವ ಶ್ರೀ ಎಂ.ಗಾಂಧಿರವರ ಧರ್ಮಪತ್ನಿಯಾದ ಸುಮಾರು 42 ವರ್ಷದ ಶ್ರೀಮತಿ. ಆಶಾ ಜಿ ಹಾಗೂ ಡಿಟೋ ಟೌನ್ ವಾರ್ಡ್ ನಂ–3 ರಲ್ಲಿ ವಾಸವಾಗಿರುವ ಶ್ರೀ ಸಂಪತ್ ಲಾಲ್ ಕುಮಾವತ್ ರವರ ಧರ್ಮಪತ್ನಿಯಾದ ಸುಮಾರು 37ವರ್ಷ ವಯಸ್ಸಿನ ಶ್ರೀಮತಿ ಶೀತಲ್ ಕುಮಾವತ್‌ರವರುಗಳಿಂದ ಖರೀದಿಸುವ ಉದ್ದೇಶ ದಿಂದ ಸದರಿಯವರಿಂದ ಕ್ರಯಪತ್ರವನ್ನು ನೋಂದಾಯಿಸಿಕೊಳ್ಳಲು ತಯಾರಿರುತ್ತೇವೆ. ಆದುದರಿಂದ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತಿಗೆ ಸಂಬಂಧಪಟ್ಟ ಹಾಗೆ ಬೇರೆ ಯಾರಿಗಾದರು ಯಾವುದೇ ರೀತಿಯಲ್ಲಾದರು ಹಕ್ಕು, ಬಾಧ್ಯತೆ, ಅಧಿಕಾರ, ಆಸಕ್ತಿ ಇದ್ದಲ್ಲಿ ಇಂದಿನಿಂದ 07 ದಿನಗಳ ಕಾಲಾವಧಿಯೊಳಗೆ ಸಂಬಂಧಪಟ್ಟ ಅಸಲಿ ದಾಖಲೆಗಳೊಂದಿಗೆ ಈ ಕೆಳಕಂಡ ವಕೀಲರನ್ನು, ಅವರ ಕಛೇರಿಯಲ್ಲಿ ಖುದ್ದಾಗಿ ಭೇಟಿ ಮಾಡತಕ್ಕದ್ದು. ಒಂದು ವೇಳೆ ಆ ರೀತಿಯಾಗಿ ಯಾರು ಭೇಟಿ ಮಾಡದಿದ್ದಲ್ಲಿ ಸದರಿ ಸ್ವತ್ತುಗಳ ಮಾರಾಟ ಸಂಬಂಧಪಟ್ಟ ಹಾಗೆ ಯಾರಿಗೂ ಯಾವುದೇ ರೀತಿಯಾದ ಅಭ್ಯಂತರವಿಲ್ಲವೆಂದು ಪರಿಗಣಿಸಿ ಕ್ರಯಪತ್ರವನ್ನು ನೋಂದಣಿ ಮಾಡಿಕೊಳ್ಳಲಾಗುವುದು. ಒಂದು ವೇಳೆ ಯಾರಾದರೂ ನಿಗಧಿತ ಕಾಲಾವಧಿ ಕಳೆದ ನಂತರ ಈ ಬಗ್ಗೆ ಪ್ರಶ್ನಿಸಿದ್ದಲ್ಲಿ ಅದಕ್ಕೆ ನಮ್ಮ ಕಕ್ಷಿದಾರರು ಯಾವುದೇ ರೀತಿಯಲ್ಲೂ ಹೊಣೆಯಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕು, ಬೇಗೂರು ಹೋಬಳಿ, ರಾಘವಪುರ ಗ್ರಾಮದ ಸರ್ವೆ ನಂ.335ರಲ್ಲಿ ವಿಸ್ತೀರ್ಣ 07–23 (ಏಳು ಎಕರೆ ಇಪ್ಪತ್ತಮೂರು ಗುಂಟೆ), ಖುಷ್ಕಿ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಸರ್ಕಾರಿ ಕೆರೆ; ಪಶ್ಚಿಮಕ್ಕೆ: ಸರ್ಕಾರಿ ಓಣಿ; ಉತ್ತರಕ್ಕೆ: ಚನ್ನಯ್ಯರವರ ಜಮೀನು; ದಕ್ಷಿಣಕ್ಕೆ: ಮಾದಯ್ಯನ ಗೊಪಾಲಯ್ಯರವರ ಜಮೀನು.

ಸಹಿ/– ನಾಗೇಶ ಕೆ, ಎಂ.ಬಿ.ಎ. ಎಲ್.ಎಲ್.ಬಿ.
ವಕೀಲರು , ನಂ.1197, 12/2, ಕೃಷ್ಣರಾಜ ಬುಲೆವಾರ್ಡ ರಸ್ತೆ, ಮೈಸೂರು ಟೆನ್ನಿಸ್ ಕೋರ್ಟ್ ಮುಂಭಾಗ, ಚಾಮರಾಜಪುರಂ,ಮೈಸೂರು
ಮೊ: 9538842045
ದಿನಾಂಕ: 05–10–2025, ಸ್ಥಳ : ಮೈಸೂರು

CAUTION NOTICE

The General Public is hereby informed that Mr. V.Krishnamurthy Mr. H.Guruswamy are the absolute Co-owners of the schedule property described in schedule, have entered into a Development Agreement & General Power of Attorney dated: 25-03-2022 with "Shree Sai Ayush Enterprises" Mr. Prakash alias Maddur prakash. The Landowner initiated arbitration proceedings by filing Com Appeal No. 80/2025, CMP No. 62/2024, and Proceedings in Arbitration Centre presently pending adjudication. Accordingly, the general public is hereby cautioned not to enter into any transaction of any agreement or deed, or otherwise in respect of the schedule property. Any person who deals with Mr. Prakash alias Maddur prakash in this regard shall be doing so entirely at their own risk, cost, and consequences. The landowners shall not be held responsible or liable for any loss, damage, or hardship that may arise there from.

SCHEDULE

All that piece and parcel of immovable property agricultural lands in Sy Nos.361/2, (Old Sy. No.361), Sy No.361/3, (Old Sy. No.361), Sy No.153/1, (Old Sy.No. 153/1) Sy No.153/4, (Old Sy: No. 153/2) totally measuring an extent of about 10 Acres 16/1/2 Guntas (excluding 6'Guntas of Kharab land) all situated in Hanchya Village, Kasaba Hobli, Mysuru.

Property Owner :
Sri. V. KRISHNAMURTHY.
Email:- k.koushik@icloud.com

Sd/- GIRISHA. S B.A.L., LL.B
ADVOCATE-Legallis,
KAR/1607/2011 #2513, CH-34,
2nd Floor, New Kantharaj Urs Road,
K.G. Koppal, Mysuru.
Mobile: 9844646874

Date: 04-10-2025

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಕಾರ್ಯಪಾಲಕ ಅಭಿಯಂತರವರ ಕಛೇರಿ, 1ನೇ ಮಹಡಿ, ಪಿ–4,10ನೇ ಮುಖ್ಯ ರಸ್ತೆ, 3ನೇ ಅಡ್ಡ ರಸ್ತೆ, ಸರಸ್ವತಿಪುರಂ, ಮೈಸೂರು–560009 ದೂರವಾಣಿ ಸಂಖ್ಯೆ : 0821–2543552
ಇ–ಮೇಲ್: kwbmysdiv@gmail.com

ಪತ್ರ ಸಂ: ಸಂಖ್ಯೆ:ಕಜಮಂ/ಕಾಅ/ತಾಂತ್ರಿಕ/ಸಅ–1/1786/2025–26 ದಿನಾಂಕ : 04.10.2025

ಅಲ್ಪಾವಧಿ ಟೆಂಡರ್ ಅಧಿಸೂಚನೆ

1. ಕಾಮಗಾರಿಯ ವಿವರ: **Jai-Hi Amrut** ಅಡಿಯಲ್ಲಿ ಬನ್ನೂರು ಪಟ್ಟಣದ ಚಾಮನಹಳ್ಳಿಯ ಮಂಡ್ಯ ರೋಡ್ ಹತ್ತಿರವಿರುವ ಜೋನ್–ಎ ರಲ್ಲಿರುವ 3.8 ಎಂ.ಎಲ್.ಡಿ.ಸಾಮರ್ಥ್ಯದ ಎಸ್.ಬಿ.ಟಿ. ಮಾದರಿಯ ಮಲಿನ ನೀರು ಶುದ್ಧೀಕರಣ ಘಟಕಕ್ಕೆ 50.05 ಕೆ.ಡಬ್ಲ್ಯೂ ಸೋಲಾರ್ ಪವರ್ ಪ್ಲಾಂಟ್ ಅನ್ನು ಒದಗಿಸಿ, ಅಳವಡಿಸಿ, ಪರೀಕ್ಷಿಸಿ ಮತ್ತು ಚಾಲನೆಗೊಳಿಸುವುದು ಮತ್ತು 2 x 2 ಮೀ ಗಾತ್ರದ ಶೌಚಲಯ ಮತ್ತು ಸೋಕ್ ಪಿಟ್ ನಿರ್ಮಿಸುವ ಕಾಮಗಾರಿಯ ಟೆಂಡರ್ ಅನ್ನು ರೂ 20,65,506/–(ಜಿ.ಎಸ್.ಟಿ. ಹೊರತುಪಡಿಸಿ)ಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಇಂಡೆಂಟ್ ಸಂಖ್ಯೆ:KUWSDB/2025-26/OW/WORK_INDENT395/CALL-2 ರಲ್ಲಿ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in. ಸಂಪರ್ಕಿಸಬಹುದು.

ಸಹಿ/–
ಕಾರ್ಯಪಾಲಕ ಅಭಿಯಂತರರು,
ಕ.ನ.ನೀ.ಸ ಮತ್ತು ಒಳಚರಂಡಿ ಮಂಡಳಿ, ವಿಭಾಗ, ಮೈಸೂರು.

ವಾಸಾಸಂಇ/ಮೈಸೂರು/ಶಿರಡಿ ಸಾಯಿ/1042/2025–26

ನಕ್ಕರೆ ಅದೇ ಸ್ವರ್ಗ

ಟೀಚರ್ : ಮುಂದೆ ಏನಾಗಬೇಕು ಅಂದುಕೊಂಡಿದ್ದೀಯಾ?
ತಿಮ್ಮ : ಪ್ರಾಣಿಗಳ ಡಾಕ್ಟರ್ ಆಗಬೇಕು ಅಂದುಕೊಂಡಿದ್ದೀನಿ ಸರ್.
ಟೀಚರ್ : ಪ್ರಾಣಿಗಳ ಡಾಕ್ಟರೇ ಯಾಕೆ?
ತಿಮ್ಮ : ಪ್ರಾಣಿಗಳು ಡಾಕ್ಟರ್ ಮೇಲೆ ಕಂಪ್ಲೆಂಟ್ ಕೊಡೊಲ್ಲ ಸರ್ ಅದಕ್ಕೆ...!

ಮೈಸೂರು ಮಿತ್ರ

ಭಾನುವಾರ, 5 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಮುಗುಳ್ನಗೆ ಮತ್ತು ಮೌನ ಇವೆರಡೂ ಅತ್ಯಂತ ಪ್ರಭಾವಿ ಸಾಧನಗಳು. ಮುಗುಳ್ನಗೆ ಸಮಸ್ಯೆಗಳನ್ನು ಬಗೆಹರಿಸಿದರೆ, ಮೌನವು ಸಾಕಷ್ಟು ಸಮಸ್ಯೆಗಳಿಂದ ನಮ್ಮನ್ನು ದೂರವಿರಿಸುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಓಡಿದವನಿಗೆ ಓಣಿ ಕಾಣಲಿಲ್ಲ, ಹಾಡಿದವನಿಗೆ ಹಾದಿ ಕಾಣಲಿಲ್ಲ.

ನಿಮ್ಮ ಪತ್ರಗಳು

ದಸರಾ ಪಾಸ್ ವಿತರಣೆಯಲ್ಲಿ ವ್ಯಾಪಕ ಗೋಲ್‌ಮಾಲ್

ಮಾನ್ಯರೆ,

ಈ ಬಾರಿಯ ದಸರಾ ಮಹೋತ್ಸವದಲ್ಲಿ ಪಾಸ್ ಮತ್ತು ಗೋಲ್ಡ್ ಕಾರ್ಡ್ ವಿತರಣೆಯಲ್ಲಿ ವ್ಯಾಪಕ ಗೋಲ್‌ಮಾಲ್, ಅವ್ಯವಸ್ಥೆ, ಗೊಂದಲಗಳು ಉಂಟಾಗಿವೆ ಎಂಬ ಗಂಭೀರ ಆರೋಪಗಳು ಕೇಳಿಬಂದಿವೆ. ಈ ಕುರಿತು ಸ್ಥಳೀಯ ಸುದ್ದಿ ವಾಹಿನಿಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ವರದಿಯಾದಂತೆ ಹಣ ಕೊಟ್ಟು ಪಾಸ್ ಪಡೆದ ಅನೇಕರಿಗೆ ದಸರಾ ಕಾರ್ಯಕ್ರಮಗಳನ್ನು ವೀಕ್ಷಿಸಲು ಅವಕಾಶ ಸಿಗಲಿಲ್ಲ. ಇದರಿಂದಾಗಿ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ವಿರುದ್ಧ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಅನೇಕರು ಹಣ ಪಾವತಿಸಿ ದಸರಾ ಪಾಸ್ ಪಡೆದರೂ ಕಾರ್ಯಕ್ರಮ ವೀಕ್ಷಿಸಲು ಅವಕಾಶ ಸಿಗದೆ ವಂಚನೆಗೊಳಗಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ, ಕಾನೂನು ಪ್ರಕಾರ ತಮ್ಮ ಹಕ್ಕುಗಳನ್ನು ಹೇಗೆ ಚಲಾಯಿಸಬೇಕು ಮತ್ತು ಪರಿಹಾರ ಪಡೆಯಬೇಕು ಎನ್ನುವುದರ ಕುರಿತು ಕಾನೂನು ತಜ್ಞರು ಸಲಹೆ ನೀಡಿದ್ದಾರೆ. ವಂಚನೆಗೊಳಗಾದವರು ಗ್ರಾಹಕರ ಹಕ್ಕುಗಳ ರಕ್ಷಣಾ ಕಾಯ್ದೆಯಡಿ ದೂರು ದಾಖಲಿಸಬಹುದಾಗಿದೆ. ಜೊತೆಗೆ, ನ್ಯಾಯಾಲಯದಲ್ಲಿ ಪರಿಹಾರ ಕೋರಿ ಅರ್ಜಿ ಸಲ್ಲಿಸುವ ಅವಕಾಶವೂ ಇದೆ. ಕೆಲವು ಕಡೆ ಪಾಸ್‌ಗಳು ಕಾಳಸಂತೆಯಲ್ಲೂ ಮಾರಾಟವಾಗಿರುವುದೇ ಈ ಗೊಂದಲಕ್ಕೆ ಕಾರಣ.

ಗ್ರಾಹಕರ ಹಕ್ಕುಗಳ ರಕ್ಷಣಾ ಕಾಯ್ದೆ 2019 ರ ಅಡಿಯಲ್ಲಿ, ಸೇವಾ ನ್ಯೂನತೆ ಅಥವಾ ಮೋಸದ ಚಟುವಟಿಕೆಗಳ ವಿರುದ್ಧ ದೂರು ಸಲ್ಲಿಸಲು ಅವಕಾಶವಿದೆ. ಇಲ್ಲಿ ಪಾಸ್ ವಿತರಣೆಯಲ್ಲಿನ ಲೋಪದೋಷಗಳು ಮತ್ತು ವಂಚನೆಗಳು ಸೇವಾ ನ್ಯೂನತೆಗೆ ಒಳಪಡುತ್ತವೆ. ದೂರುದಾರರು, ಜಿಲ್ಲಾ ಗ್ರಾಹಕರ ವಿವಾದಗಳ ಪರಿಹಾರ ವೇದಿಕೆಗೆ ಅಥವಾ ರಾಜ್ಯ ಗ್ರಾಹಕರ ಆಯೋಗಕ್ಕೆ ದೂರು ಸಲ್ಲಿಸಬಹುದು. ದೂರಿನಲ್ಲಿ ಘಟನೆ, ಪಾಸ್ ಪಡೆದ ಪುರಾವೆಗಳು ಮತ್ತು ಆದ ನಷ್ಟದ ಬಗ್ಗೆ ಸ್ಪಷ್ಟವಾಗಿ ವಿವರಿಸಬೇಕು.

ಇದಲ್ಲದೆ, ಭಾರತೀಯ ದಂಡ ಸಂಹಿತೆಯ ಸೆಕ್ಷನ್ 420ರ ಅಡಿಯಲ್ಲಿ, ವಂಚನೆ ಪ್ರಕರಣ ದಾಖಲಿಸಬಹುದು. ಇದರಲ್ಲಿ, ವಂಚನೆ ಮಾಡಿ ಹಣ ಪಡೆದು ಸೇವೆ ಒದಗಿಸದವರ ವಿರುದ್ಧ ಕ್ರಮ ಕೈಗೊಳ್ಳಬಹುದು. ಇಂತಹ ಪ್ರಕರಣಗಳಲ್ಲಿ, ಪೊಲೀಸರು ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವ ಸಾಧ್ಯತೆಗಳಿರುತ್ತವೆ. ಕಾನೂನು ತಜ್ಞರ ಪ್ರಕಾರ, ವಂಚನೆಗೊಳಗಾದವರು ಕೂಡಲೇ ಸ್ಥಳೀಯ ಪೊಲೀಸ್ ಠಾಣೆಗೆ ದೂರು ಸಲ್ಲಿಸಬೇಕು.

ಸಾರ್ವಜನಿಕರ ಹಿತದೃಷ್ಟಿಯಿಂದ, ಜಿಲ್ಲಾಡಳಿತವು ಈ ಘಟನೆಗಳನ್ನು ಗಂಭೀರವಾಗಿ ಪರಿಗಣಿಸಿ, ಸಮಗ್ರ ತನಿಖೆ ನಡೆಸಬೇಕು. ತಪ್ಪಿತಸ್ಥ ಅಧಿಕಾರಿಗಳು ಮತ್ತು ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಜೊತೆಗೆ, ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳಲು, ಪಾಸ್ ವಿತರಣಾ ವ್ಯವಸ್ಥೆಯನ್ನು ಇನ್ನಷ್ಟು ಪಾರದರ್ಶಕ ಮತ್ತು ಜವಾಬ್ದಾರಿಯುತವಾಗಿ ರೂಪಿಸಬೇಕಾಗಿದೆ.

–ಗೋವಿತ್ ಕಿರಣ್, ರಾಜೇಂದ್ರನಗರ, ಮೈಸೂರು

ಸರ್ಕಸ್ ಕಂಪನಿಗಳಿಗೆ ಸರ್ಕಾರದ ನೆರವು ಅಗತ್ಯ

ಮಾನ್ಯರೆ,

ದಸರಾ ಮಹೋತ್ಸವದ ಅಂಗವಾಗಿ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ 'ಜೆಮಿನಿ ಸರ್ಕಸ್' ಪ್ರಾರಂಭಗೊಂಡಿರುವುದು ಸ್ವಾಗತಾರ್ಹವಾಗಿದೆ. ದೇಶದ ಸರ್ಕಸ್ ಕಂಪನಿಗಳ ಇತಿಹಾಸದಲ್ಲಿ 'ಜೆಮಿನಿ' ಸರ್ಕಸ್‌ಗೆ ತನ್ನದೇ ಆದ ಭವ್ಯ ಇತಿಹಾಸವಿದೆ. ದೇಶದ ಉದ್ದಗಲಕ್ಕೂ ಚಿರಪರಿಚಿತವಾಗಿರುವ ಈ ಕಂಪನಿಯಲ್ಲಿ ವಿವಿಧ ರೀತಿಯ ಅತ್ಯಾಕರ್ಷಕ ಹಾಗೂ ಮೈ ಜುಮ್ ಅನ್ನಿಸುವಂತಹ ಚಿತ್ತಾಕರ್ಷಕ ಪ್ರದರ್ಶನಗಳು ಪ್ರೇಕ್ಷಕರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತವೆ. ಪ್ರಾಣಿ ದಯಾ ಸಂಘದವರ ಮಧ್ಯ ಪ್ರವೇಶದಿಂದ ಅನೇಕ ರಾಜ್ಯಗಳಲ್ಲಿ ಪ್ರಾಣಿಗಳನ್ನು ಸರ್ಕಸ್‌ನಲ್ಲಿ ಬಳಸುವುದನ್ನು ನಿಷೇದಿಸಿರುವುದರಿಂದ ಸರ್ಕಸ್ ಕಂಪನಿಗಳ ಅವನತಿ ಪ್ರಾರಂಭವಾಗಿ, ದೇಶದಲ್ಲಿ ಜೆಮಿನಿ ಸರ್ಕಸ್ ಸೇರಿದಂತೆ ಕೇವಲ ಮೂರೇ ಮೂರು ಸರ್ಕಸ್ ಕಂಪನಿಗಳು ಉಳಿದು ಕೊಂಡಿವೆ ಎಂದು ಹೇಳಲಾಗಿದೆ. ಈ ಕಂಪನಿಗಳನ್ನೇ ನಂಬಿಕೊಂಡು ಬದುಕು ತ್ತಿರುವ ನೂರಾರು ಮಂದಿ ನೌಕರರಿಗೆ, ಇದುವೇ ಜೀವನಾಧಾರವಾಗಿರುವುದರಿಂದ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಇಂತಹ ಸರ್ಕಸ್ ಕಂಪನಿಗಳ ನೆರವಿಗೆ ಬರುವುದು ಅಗತ್ಯವಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಗೋಲ್ಡ್ ಕಾರ್ಡ್ ಕೊಂಡವರಿಗೆ ಹಣ ವಾಪಸ್ ನೀಡಲು ಮನವಿ

ಮಾನ್ಯರೆ,

2025 ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಡೆದ ನಾಡಹಬ್ಬ ದಸರಾ ಮಹೋತ್ಸವದಲ್ಲಿ ಗೋಲ್ಡ್ ಕಾರ್ಡ್ ಅನ್ನು 6500 ನೀಡಿ ಖರೀದಿಸಿದ ಹಲವು ಮಂದಿಗೆ ತೀರ ನಿರಾಸೆ ಉಂಟಾಗಿದೆ. ಹಣ ನೀಡಿ ಗೋಲ್ಡ್ ಕಾರ್ಡ್ ಖರೀದಿಸಿದವರಿಗೆ ನಿಗದಿಪಡಿಸಿದ ಸ್ಥಳದಲ್ಲಿ ಜಂಬೂ ಸವಾರಿ ವೀಕ್ಷಿಸಲು ಪೊಲೀಸರು ಅನುಮತಿ ನೀಡದೆ ಮಧ್ಯಾಹ್ನ 12 ಗಂಟೆಗೆ ಗೇಟ್‌ಗಳನ್ನು ಬಂದ್ ಮಾಡಿದ್ದರು. ದೊಡ್ಡಗಡಿಯಾರ, ಕೆಆರ್ ಸರ್ಕಲ್, ಸೇರಿ ಇತರ ಸ್ಥಳಗಳಲ್ಲಿ ರಸ್ತೆಯಲ್ಲಿ ನಿಂತು ದಸರಾ ಆನೆ ನೋಡಿ ಎನ್ನುತ್ತಿದ್ದರು. ಇದು ನ್ಯಾಯವೇ? ಮಾಧ್ಯಮಗಳ ಮುಂದೆ ಪೊಲೀಸ್ ಆಯುಕ್ತರು ದಸರಾ ವೀಕ್ಷಣೆಗೆ ಬರುವವರಿಗೆ ಸಕಲ ಸೌಲಭ್ಯಗಳನ್ನು ಮಾಡಿಕೊಡಲಿದ್ದೇವೆ ಎಂದು ಹೇಳಿ ಪಾಸ್ ಪಡೆದಿರುವ ಅನೇಕ ಮಂದಿಗೆ ನಿಗದಿತ ಸ್ಥಳಕ್ಕೆ ಬಿಡದೆ, ನಿರಾಸೆಯೊಂದಿಗೆ ದಸರಾ ನೋಡಲು ಹರಸಾಹಸಪಡುವಂತಾಯಿತು. ಕೆಲವರು ದಸರಾ ನೋಡದೆ ಮನೆಯತ್ತ ಹೊರಟರು. ಮೈಸೂರು ದಸರಾಕ್ಕೆ ಕರ್ತವ್ಯ ನಿರ್ವಹಿಸಿದ ಮೈಸೂರು ಜಿಲ್ಲಾಧಿಕಾರಿಗಳು ಹಾಗೂ ಮೈಸೂರಿನ ಪೊಲೀಸ್ ಆಯುಕ್ತರು ಗೋಲ್ಡ್ ಕಾರ್ಡ್ ಪಡೆದು ದಸರಾ ವೀಕ್ಷಣೆ ಮಾಡದಿರುವವರನ್ನು ಗುರುತಿಸಿ, ಜಿಲ್ಲಾ ಉಸ್ತುವಾರಿ ಸಚಿವರು ಸರ್ಕಾರದೊಡನೆ ಚರ್ಚಿಸಿ ಕೊಡಲೇ ಹಣವನ್ನು ಹಿಂದಿರುಗಿಸಲು ಕ್ರಮ ಕೈಗೊಳ್ಳಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು


ನಾದಲಹರಿ



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ಶಬ್ದಕ್ಕಿರುವಂತೆ ಮೌನಕ್ಕೊಂದು ಮೌಲ್ಯವಿದೆ

ಮಾತೆಂಬುದು ಜ್ಯೋತಿರ್ಲಿಂಗ ಎಂದರು, ಅದರೊಳಗೆ ಅಡಗಿರುವ ಅರ್ಥದ ಮಹತ್ವವನ್ನು ಅರಿತಿರುವ ಮಹಾ ಮಹಿಮರು. ವಾಕ್ ಮತ್ತು ಗೇಯ ಅಥವಾ ಸಂಗೀತ ಎರಡೂ ಅದೆಷ್ಟು ಒಂದಕ್ಕೊಂದು ಪೂರಕವಾಗಿದೆ ಎಂಬುದನ್ನು ನಮ್ಮ ಹಿರಿಯರು ಎಂದೋ ಅರಿತಿದ್ದರು. ಪ್ರತೀ ಶಬ್ದದ ಒಳಗೆ ಅಡಗಿರುವ ಅರ್ಥದ ಬಗೆಗೆ ಅದೆಷ್ಟು ಚಿಂತನೆಗಳನ್ನು ಮಾಡಿದ್ದರೆಂದರೆ, ನಮ್ಮ ಕಾವ್ಯ ಮೀಮಾಂಸೆಯಲ್ಲಿ ಸ್ಫೋಟವಾದವೆಂಬ ಬೃಹತ್ ಅಧ್ಯಾಯವೇ ಇದೆ. ಕಾಳಿದಾಸನೂ ತನ್ನ ಕಾವ್ಯವಾದ ರಘುವಂಶದ ಆರಂಭದಲ್ಲೇ ವಾಕ್ ಮತ್ತು ಅರ್ಥದಂತೆ ಒಂದರೊಳಗೊಂದು ವಿಲೀನವಾಗಿರುವ ಅಥವಾ ಒಬ್ಬರೊಳಗೊಬ್ಬರು ಲೀನವಾಗಿರುವ, ಜಗತ್ತಿನ ತಾಯಿ ತಂದೆಯರಾದ ಪಾರ್ವತಿ ಪರಮೇಶ್ವರರನ್ನು ಕುರಿತು ಪ್ರಾರ್ಥಿಸುತ್ತಾನೆ. ಮಾತಿನಲ್ಲಿಯೇ ಧ್ವನಿ ಇದೆ, ಅರ್ಥವಿದೆ, ಭಾವ ಇದೆ, ನಾದವೂ ಇದೆ.



> ರಸ್ತೆ ರಸ್ತೆಗಳಲ್ಲಿ ಆಗಲಿ, ಸಭಾ ಭವನದ ವೇದಿಕೆಗಳಲ್ಲಿ ಆಗಲಿ ಇಂತಹ ಕಾರ್ಯಕ್ರಮವನ್ನು ಆಯೋಜಿಸುವವರು, ಅದರ ನಿರ್ವಹಣೆ ಹೊತ್ತವರು ಇದರ ಬಗೆಗೆ ಸ್ವಲ್ಪವಾದರೂ ಚಿಂತಿಸುವುದು ಒಳ್ಳೆಯದು. ಕಳಪೆ ಅಭಿರುಚಿಯ ಕಾರ್ಯಕ್ರಮಗಳನ್ನು ತಿರಸ್ಕರಿಸುವ ಆಯ್ಕೆಯೂ ಕೇಳುಗರಿಗೆ ಇದೆ. ಶಬ್ದಕ್ಕೆ ಇರುವಂತೆ ಮೌನಕ್ಕೂ ಒಂದು ಮೌಲ್ಯವಿದೆ.

ಮಾತು ಅಥವಾ ಶಬ್ದದ ಮಹತ್ತನ್ನು ಅರಿತವರಿಗೆ ಅದರೊಳಗೆ ಅಡಗಿರುವ ಹರಿತವೂ ತಿಳಿದಿರುತ್ತದೆ. ಮಾತಿಗೆ ಸಂಬಂಧಿಸಿದಂತೆ 'ಮಾತು ಮನೆ ಕೆಡಸಿತು, ತೂತು ಒಲೆ ಕೆಡಸಿತು', 'ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು' ಎಂಬ ಗಾದೆಗಳನ್ನೂ ಹುಟ್ಟುಹಾಕಿದ್ದಾರೆ ನಮ್ಮ ಜನಪದರು. ನಮ್ಮ ಮಾತು ಯಾವಾಗಲೂ ತೂಕವಾಗಿರಬೇಕು, ಹಗುರವಾಗಲ್ಲ ಎಂಬ ತಿಳುವಳಿಕೆಯ ಮಾತುಗಳನ್ನೂ ಹಿರಿಯರಿಂದ ಕೇಳುತ್ತಿರುತ್ತೇವೆ. ಆಡುವ ಮಾತಿನ ಕಡೆಗೆ ಎಚ್ಚರ ಇರದಿದ್ದಲ್ಲಿ, ಅದು ಮುಟ್ಟುವ ಗುರಿಯೆಡೆಗೆ ಗಮನ ಇರದಿದ್ದಲ್ಲಿ, ಆಡುವವ ಬೇಜವಾಬ್ದಾರಿ ಎಂದು ಅನಿಸಿಕೊಳ್ಳುತ್ತಾನೆ.

ಇನ್ನು ಶಬ್ದದ ಕಡೆಗೆ ಬರೋಣ. ಇಲ್ಲಿ ಶಬ್ದ ಎಂದರೆ ಯಾವುದೇ ಶಬ್ದ, ಗಲಾಟೆ–ಗದ್ದಲ ಅನ್ನುವುದಕ್ಕಿಂತ ಅದರ ಹೊರತಾದ, ಸಂಗೀತ, ನೃತ್ಯ ಅಥವಾ ಮತ್ಯಾವುದೇ ಕಲೆಗಳ ಅಭಿವ್ಯಕ್ತಿಯಿಂದ ಕೇಳುಗರ ಅಥವಾ ನೋಟಕರ ಮೇಲೆ ಉಂಟಾಗುವ ಪರಿಣಾಮ ಎಂದೆನ್ನಬಹುದು. ಇತ್ತೀಚಿನ ದಿನಗಳಲ್ಲಿ ಧ್ವನಿವರ್ಧಕ ಎಂಬ ಪೆಡಂಭೂತ ನಮ್ಮ ಬದುಕಿನಲ್ಲಿ ಹೆಜ್ಜೆ ಇಟ್ಟಾಗಿನಿಂದ ನಮ್ಮ ಕಿವಿಗಳು ಅದರ ಅಬ್ಬರಕ್ಕೆ ಅನಿವಾರ್ಯವಾಗಿ ಒಗ್ಗಿಕೊಂಡುಬಿಟ್ಟಿವೆಯೇನೋ ಎಂದು ನನಗೆ ಅನ್ನಿಸುತ್ತದೆ. ಒಂದು ಸಮಾರಂಭ ಅಥವಾ ಕಲಾ ಉತ್ಸವದಲ್ಲಿ ಧ್ವನಿವರ್ಧಕವನ್ನು ಬಳಸುವ ಉದ್ದೇಶವಾದರೂ ಏನು? ಅಲ್ಲಿ ಕುಳಿತಿರುವ ಎಲ್ಲರಿಗೂ ಸ್ಪಷ್ಟವಾಗಿ ಕೇಳಲಿ ಎಂಬುದು ಮಾತ್ರ, ಅಲ್ಲವೇ ಆ ಸಭಾಂಗಣವನ್ನೂ ಮೀರಿ ಹೊರಗೆ ಇರುವವರಿಗೆಲ್ಲರಿಗೂ ಕೇಳಿಸಲಿ ಎಂದು ಖಂಡಿತಾ ಅಲ್ಲ ತಾನೆ!

ಒಂದು ವೇಳೆ ಹೊರಾಂಗಣದಲ್ಲಿ ಸಂಗೀತವೋ, ನೃತ್ಯವೋ ನಡೆಯುತ್ತಿದೆ ಎಂದು ಇಟ್ಟುಕೊಳ್ಳೋಣ. ಆಗಲೂ ಸಹ ಹತ್ತು ಮೈಲಿ ದೂರದವರೆಗೆ ಕೇಳಿಸುವಂತೆ ಅಬ್ಬರದ ಶಬ್ದ ಮಾಲಿನ್ಯ ಉಂಟುಮಾಡಬೇಕೇ ಯೋಚಿಸಿ. ಇತ್ತೀಚಿನ ದಿನಗಳಲ್ಲಿ ಗಣೇಶೋತ್ಸವ, ರಾಜ್ಯೋತ್ಸವ, ಮದುವೆ, ಗರ್ಭಾ, ದಾಂಡಿಯಾ (ಅದು ಗುಜರಾತಿನದ್ದಾದರೂ), ಯುವ ದಸರಾ ಮುಂತಾದ ಸಂಭ್ರಮಾಚರಣೆಗಳಲ್ಲಿ ಸಂಗೀತದ ಹೆಸರಿನಲ್ಲಿ ನಡೆಯುವ ಅರಚಾಟವು (ಕ್ಷಮಿಸಿ) ಎಲ್ಲರನ್ನೂ ಕಿವುಡರನ್ನಾಗಿ ಮಾಡುವುದರಲ್ಲಿ ಸಂಶಯವೇ ಇಲ್ಲ ಎಂದು ಅನ್ನಿಸುತ್ತದೆ. ಅದರಲ್ಲೂ ವೇದಿಕೆಯ ಮೇಲೆ ಇರುವವರ ಜೊತೆಗೂಡಿ ಹುಚ್ಚೆದ್ದು ತಾವೂ ಹೆಜ್ಜೆ ಹಾಕುತ್ತಿರುವ ಯುವ ಜನತೆಗೆ ನಾವು ಯಾವ ಸಂಸ್ಕೃತಿಯನ್ನು ಕಲಿಸುತ್ತಿದ್ದೇವೆ. ಕೆಲವರು ಕಾರಿನಲ್ಲಿ ಹೋಗುವಾಗ ಅದೆಷ್ಟು ಜೋರಾದ ಸಂಗೀತ(!) ಹಾಕಿರುತ್ತಾರೆಂದರೆ, ಪಕ್ಕದಲ್ಲಿ ಹಾದು ಹೋಗುವವರು ಬೆಚ್ಚಿ ಬೀಳಬೇಕು– ಅಷ್ಟು.

ಈ ಮೈಕಾಸುರನ ಆಗಮನಕ್ಕೆ ಮೊದಲೂ ನಮ್ಮಲ್ಲಿ ವೀಣೆಯಂತಹ ಮೃದು ನಾದದ ವಾದ್ಯ ಸಂಗೀತ ಕಛೇರಿಗಳು ನಡೆಯುತ್ತಿರಲಿಲ್ಲವೇ ಆ ಮಧುರ ನಾದವನ್ನು ಸಾವಿರಾರು ಮಂದಿ ಕುಳಿತು ಆಸ್ವಾದಿಸುತ್ತಿರಲಿಲ್ಲವೇ? ಆಗ ನಮ್ಮ ಕಿವಿಗಳು ಅದೆಷ್ಟು ಸೂಕ್ಷ್ಮ ಗ್ರಹಣ ಶಕ್ತಿಯನ್ನು ಹೊಂದಿದ್ದುವು! ಕಣ್ಮುಚ್ಚಿ ಕುಳಿತು ವೀಣೆಯ ಒಂದೊಂದು ಪಲುಕುಗಳನ್ನೂ ಮನ ದಾಳಕ್ಕೆ ಇಳಿಸಿ, ಅದರ ನುಡಿತದ ಸೊಂಪನ್ನು, ನಾದದ ಕಂಪನ್ನು, ಮಿಡಿತದ ಇಂಪನ್ನೂ, ಮಧುರತೆಯನ್ನೂ ಅನುಭವಿಸುತ್ತಿದ್ದುದು ಈಗ ಬರೀ ನೆನಪಾಗಿ ಹೋಯಿತೇ. ಇಂದಿನ ವಿದ್ಯಾರ್ಥಿಗಳಿಗೆ ವಾದ್ಯಗಳ ಮೂಲ ಧ್ವನಿಯ ಪರಿಚಯವೇ ಇರುವುದಿಲ್ಲ ಎಂದರೆ ಬಹುಶಃ ಅತಿಶಯೋಕ್ತಿ ಅಲ್ಲ.

ಈಗ ವೀಣೆ ಒಂದೇ ಅಲ್ಲ, ಪಿಟೀಲು, ಘಟಕ್ಕೂ ಸಹ ಪಿಕಪ್‌ಗಳನ್ನು ಹಾಕಿಕೊಳ್ಳುವ ಪರಿಪಾಠ ಬಂದಿದೆ. ಸಂಗೀತ ಕಛೇರಿಗಳಲ್ಲಿ ಮೃದಂಗದವರಂತೂ ಮೈಕಿನವರಿಗೆ ಇನ್ನೂ ಎತ್ತರಿಸಿ ಎಂಬ ಸನ್ನೆ ಮಾಡುತ್ತಲೇ ಇರುತ್ತಾರೆ. ಇನ್ನು ಜುಗಲಬಂದಿ ಎಂಬ ಹೆಸರಿನಲ್ಲಿ ನಡೆವ ಕೆಲವು ಪ್ರದರ್ಶನಗಳನ್ನು ನೋಡಬೇಕು (ಕೇಳಬೇಕು ಅಲ್ಲ). ಅದರಲ್ಲೂ ಒಂದು ರಾಗವು ಮುಕ್ತಾಯ ಹಂತಕ್ಕೆ ಬರುತ್ತಿದೆ ಎನ್ನುವಾಗ ಈರ್ವರು ಕಲಾವಿದರಿಗೂ ಮೈಮೇಲೆ ಆವಾಹನೆ ಆಗಿಬಿಟ್ಟಿರುತ್ತದೆ. ಅಲ್ಲಿ ಸಂಗೀತ ಎಂಬುದು ಬೆದರಿ, ಬೆಚ್ಚಗೆ ಎಲ್ಲಿಯೋ ಅಡಗಿಕೊಂಡುಬಿಟ್ಟಿರುತ್ತದೆ.

ಆದರೆ ಉನ್ಮಾದಗೊಂಡ ಪ್ರೇಕ್ಷಕರ ಚಪ್ಪಾಳೆಯ ಸುರಿಮಳೆಯು ಆಕಾಶವನ್ನು ಮುಟ್ಟಿರುತ್ತದೆ. ಕಿವಿ ಗಡಚಿಕ್ಕುವ ಶಬ್ದಗಳ ಈ ಮಾಲಿನ್ಯವನ್ನು ತಡೆಗಟ್ಟುವವರು ಯಾರು? ಇದಕ್ಕೆ ಯಾರು ಹೊಣೆ ಕಲಾವಿದರನ್ನು ಕೇಳಿ, ಅವರು ಜನ ಇದನ್ನೇ ಬಯಸುತ್ತಾರೆ ಎಂದು ಹೇಳುತ್ತಾರೆ. ಕೇಳುಗರ ಕೇಳ್ಮೆಯ ಮಟ್ಟವನ್ನು ಸುಧಾರಿಸಬೇಕಾದುದು ಕಲಾವಿದರ ಜವಾಬ್ದಾರಿ ಅಲ್ಲವೇ? ನಾವು ಕೇಳುಗರಿಗೆ ಏನನ್ನು ಉಣಬಡಿಸಬೇಕು ಎಂಬ ಆಯ್ಕೆ ಯಾರದು! ಹೀಗಾಗಿ ನಮ್ಮ ಕಿವಿಗಳು ತಮ್ಮ ಸೂಕ್ಷ್ಮತೆಯನ್ನು ಎಂದೋ ಕಳೆದುಕೊಂಡು ಬಿಟ್ಟಿದೆ ಎಂಬುದು ವಿಷಾದದಿಂದಲೇ ಒಪ್ಪಿಕೊಳ್ಳಬೇಕಾದ ಸಂಗತಿ ಆಗಿದೆ.

ಇನ್ನು ಗಣೇಶನ ಉತ್ಸವ ಮುಂತಾದವುಗಳಲ್ಲಿ ಏರ್ಪಡಿಸುವ ಸಿನಿಮಾ ಹಾಡುಗಳೋ, ಭಾವಗೀತೆಯ ಗಾಯನವೋ ಅಥವಾ ವಾದ್ಯ ಸಂಗೀತ (ಆರ್ಕೆಸ್ಟ್ರಾ) ಇವುಗಳ ಅಬ್ಬರವಂತೂ ಇನ್ನೂ ಜೋರು. ಹಿನ್ನೆಲೆಯ ವಾದ್ಯದವರ ಮತ್ತು ಗಾಯಕರ ಜೋರು ಶಬ್ದಗಳ ನಡುವೆ ಕೇಳುಗ ಸಾಹಿತ್ಯದ ಸೊಬಗನ್ನಾಗಲೀ ಸಂಗೀತದ ಸೊಗಸನ್ನಾಗಲೀ ಅನುಭವಿಸುವುದು ಕನಸಿನ ಮಾತೇ ಸರಿ. ಹಿಂದೆ ಪಿ.ಕಾಳಿಂಗರಾಯರಾಗಲೀ, ಮೈಸೂರು ಅನಂತಸ್ವಾಮಿಯವರಾಗಲೀ ಅಥವಾ ಎಚ್.ಆರ್.ಲೀಲಾವತಿಯವರಾಗಲೀ ಬೆರಳೆಣಿಕೆಯಷ್ಟು ವಾದ್ಯಗಳನ್ನು ಮಾತ್ರ ಜೊತೆಗೆ ಇರಿಸಿಕೊಳ್ಳುತ್ತಿದ್ದುದು. ಆದರೆ ಜನಕ್ಕೆ ಅವರ ಸಂಗೀತವು ಎಂತಹ ಮೋಡಿಯನ್ನು ಮಾಡುತ್ತಿತ್ತು! ಈಗ ವೇದಿಕೆಯ ತುಂಬಾ ಹರಡಿಕೊಂಡಿರುತ್ತವೆ ನಾನಾ ನಮೂನೆಯ ವಾದ್ಯಗಳು. ಅವುಗಳ ಬೊಬ್ಬಿರಿಯುವಿಕೆಯನ್ನು ಸಹಿಸಿಕೊಳ್ಳಲೇಬೇಕಾದ ಅನಿವಾರ್ಯತೆ ಪಾಪ ಆ ಗಣಪನಿಗೆ.

ಸೂಕ್ಷ್ಮ ಮನಸ್ಸಿನವರ ಮೇಲೆ ಇದರಿಂದ ಉಂಟಾಗುವ ಪರಿಣಾಮದ ಕಡೆಗೆ ಎಲ್ಲರದೂ ದಿವ್ಯ ನಿರ್ಲಕ್ಷ್ಯ. ಕಲೆಯ ಪ್ರದರ್ಶನವು ಇತರರಿಗೆ ಕಿರಿಕಿರಿ ಉಂಟುಮಾಡುವ ವಸ್ತು ಆಗಬಾರದಲ್ಲವೇ? ಕಲೆಯ ಉದ್ದೇಶವೇ ಮನಸ್ಸನ್ನು ರಂಜಿಸುವುದು. ಅದರ ಹೆಸರಿನಲ್ಲಿ ಆ ರಂಜನೆಯು ಕೇಳುಗರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುವಂತಾಗಬಾರದು. ಮನುಷ್ಯರು ತಮ್ಮಿಂದ ಇತರರಿಗೆ ತೊಂದರೆ ಆಗಬಾರದೆಂಬ ಸೂಕ್ಷ್ಮತೆ ಅನ್ನಿ, ಸಾಮಾಜಿಕ ಕಳಕಳಿ ಅನ್ನಿ, ಜವಾಬ್ದಾರಿ ಅನ್ನಿ, ಅದನ್ನು ಕಳೆದುಕೊಂಡುಬಿಡಬಾರದಲ್ಲ. ರಸ್ತೆ ರಸ್ತೆಗಳಲ್ಲಿ ಆಗಲಿ, ಸಭಾ ಭವನದ ವೇದಿಕೆಗಳಲ್ಲಿ ಆಗಲಿ ಇಂತಹ ಕಾರ್ಯಕ್ರಮವನ್ನು ಆಯೋಜಿಸುವವರು, ಅದರ ನಿರ್ವಹಣೆಯನ್ನು ಹೊತ್ತವರು ಇದರ ಬಗೆಗೆ ಸ್ವಲ್ಪವಾದರೂ ಚಿಂತಿಸುವುದು ಒಳ್ಳೆಯದು. ಕಳಪೆ ಅಭಿರುಚಿಯ ಕಾರ್ಯಕ್ರಮಗಳನ್ನು ತಿರಸ್ಕರಿಸುವ ಆಯ್ಕೆಯೂ ಕೇಳುಗರಿಗೆ ಇದೆ. ಶಬ್ದಕ್ಕೆ ಇರುವಂತೆ ಮೌನಕ್ಕೂ ಒಂದು ಮೌಲ್ಯವಿದೆ. ಅದನ್ನು ಗೌರವಿಸೋಣ.

ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ವಂಚನೆ: ನಿವೃತ್ತ ಡಿವೈಎಸ್‌ಪಿ, ಪತ್ನಿ ವಿರುದ್ಧ ಎಫ್‌ಐಆರ್

ನೆಲಮಂಗಲ: ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಕೋಟ್ಯಂತರ ರೂಪಾಯಿ ವಂಚಿಸಿದ್ದಾರೆ ಎಂದು ಆರೋಪಿಸಿ ನಿವೃತ್ತ ಡಿವೈಎಸ್‌ಪಿ ನಂಜುಂಡಯ್ಯ ಅವರ ವಿರುದ್ಧ ದೂರು ನೀಡಲಾಗಿದ್ದು, ನೆಲಮಂಗಲ ಪಟ್ಟಣ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.



ಕನಕಪುರ ಮುಖ್ಯರಸ್ತೆಯ ಒ.ಬಿ.ಚೌಡಹಳ್ಳಿಯ ಉದ್ಯಮಿ ಟಿ.ಮೋಹನ್‌ಕುಮಾರ್ ಅವರು ನೀಡಿದ ದೂರು ಆಧರಿಸಿ ನಂಜುಂಡಯ್ಯ, ಆರ್.ಲಾವಣ್ಯಾ ಹಾಗೂ ಹೇಮಂತ್‌ಕುಮಾರ್ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ನಂಜುಂಡಯ್ಯ ಅವರು ರಾಜಾನುಕುಂಟೆಯಲ್ಲಿ ನೆಲಸಿದ್ದಾರೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಪ್ರಕರಣದ ಸಂಬಂಧ ನಿವೃತ್ತ ಡಿವೈಎಸ್‌ಪಿ ನಂಜುಂಡಯ್ಯ ಅವರನ್ನು ವಿಚಾರಣೆ ನಡೆಸಲಾಗಿದೆ. ಚನ್ನಪಟ್ಟಣ ಪೊಲೀಸ್ ತರಬೇತಿ ಕೇಂದ್ರದಲ್ಲಿ (ಡಿಎಆರ್) ನಂಜುಂಡಯ್ಯ ಅವರು ಕೆಲಸ ಮಾಡುತ್ತಿದ್ದರು. ಇತ್ತೀಚೆಗೆ ಸ್ವಯಂ ನಿವೃತ್ತಿ ತೆಗೆದುಕೊಂಡಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಂಜುಂಡಯ್ಯ ಅವರು ನಮ್ಮ 9 ಎಕರೆ ಜಮೀನು ಅಭಿವೃದ್ಧಿಪಡಿಸಿ, ನಿವೇಶನ ಮಾರಾಟ ಮಾಡಿ ಹಣ ನೀಡುವುದಾಗಿ ಹೇಳಿ ಜಮೀನು ತೆಗೆದುಕೊಂಡಿದ್ದರು. ಒಪ್ಪಂದದ ಕರಾರು ಮಾಡಿಸಿಕೊಂಡು ವಂಚನೆ ನಡೆಸಿದ್ದಾರೆ ಎಂದು ಆರೋಪಿಸಿ ನಂಜುಂಡಯ್ಯ ಅವರ ಸಂಬಂಧಿಯೂ ಆಗಿರುವ ಟಿ.ಮೋಹನ್‌ಕುಮಾರ್ ದೂರು ನೀಡಿದ್ದಾರೆ. ತಮ್ಮ ಗಮನಕ್ಕೆ ಬಾರದಂತೆ ನಕಲಿ ಸಹಿ ಮಾಡಿ ಒಂದೇ ನಿವೇಶನವನ್ನು ಹಲವರಿಗೆ ಕರಾರು ಮಾಡಿದ್ದು, ಪ್ರಶ್ನೆ ಮಾಡಿದರೆ ಬೆದರಿಕೆ ಹಾಕಿದ್ದಾರೆ. ಹಣ ನೀಡುವುದಾಗಿ ಕ್ರಯ ಮಾಡಿಸಿಕೊಂಡು ಹಣ ನೀಡದೆ ಬೆದರಿಸಿ ನನ್ನಿಂದ ಕ್ರಯಪತ್ರಗಳನ್ನು ಪಡೆದಿರುತ್ತಾರೆ ಎಂದು ಮೋಹನ್‌ಕುಮಾರ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಖರೀದಿಸಿದ ಸಿನಿಮಾ ಟಿಕೆಟ್ ಜೋಪಾನವಾಗಿಟ್ಟುಕೊಳ್ಳಿ !

ಬೆಂಗಳೂರು,ಅ.4–ರಾಜ್ಯದ ಮಲ್ಟಿಪ್ಲೆಕ್ಸ್‌ಗಳಲ್ಲಿನ ಚಲನಚಿತ್ರ ಪ್ರದರ್ಶನದ ಟಿಕೆಟ್ ಮೇಲೆ ವಿಧಿಸಿದ್ದ ರೂ.200 ಮಿತಿಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದ್ದು, ನ್ಯಾಯಾಲಯದ ಅಂತಿಮ ತೀರ್ಪು ಬರುವವರೆಗೆ ಸಿನಿಮಾ ವೀಕ್ಷಿಸುವವರು ತಮ್ಮ ಟಿಕೆಟ್ ಮತ್ತು ಹಣ ಪಾವತಿಸಿದ ದಾಖಲೆಗಳನ್ನು ಜಾಗರೂಕತೆಯಿಂದ ಇಟ್ಟುಕೊಳ್ಳುವಂತೆ ಚಿತ್ರ ವೀಕ್ಷಕರಿಗೆ ರಾಜ್ಯ ಸರ್ಕಾರ ಸೂಚಿಸಿದೆ.

ಚಲನಚಿತ್ರ ವೀಕ್ಷಣೆಗೆ ದುಬಾರಿ ಟಿಕೆಟ್ ದರ ನಿಗದಿ ಮಾಡುವುದನ್ನು ತಡೆಯಲು ರಾಜ್ಯ ಸರ್ಕಾರ ಮಲ್ಟಿಪ್ಲೆಕ್ಸ್‌ಗಳಲ್ಲಿ ಪ್ರದರ್ಶನಗೊಳ್ಳುವ ಚಲನಚಿತ್ರಗಳ ವೀಕ್ಷಣೆಯ ಟಿಕೆಟ್ ದರವನ್ನು ಗರಿಷ್ಠ 200 ರೂ. ಮಿತಿಗೊಳಿಸಿ ಆದೇಶಿಸಿದೆ. ಅದಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಅದರ ಜೊತೆಗೆ ಮಲ್ಟಿಪ್ಲೆಕ್ಸ್‌ಗಳು ಮಾರಾಟವಾದ ಪ್ರತಿ ಟಿಕೆಟ್‌ಗೆ ಸಮಗ್ರ ಮತ್ತು ಲೆಕ್ಕ ಪರಿಶೋಧಿಸಬಹುದಾದ ದಾಖಲೆಗಳನ್ನು ನಿರ್ವಹಿಸುವಂತೆ ನಿರ್ದೇಶಿಸಿದೆ.

ರಾಜ್ಯ ಸರ್ಕಾರ ನಿಗದಿಪಡಿಸಿದ ಮಿತಿಯನ್ನು ಪ್ರಶ್ನಿಸಿ ಸಲ್ಲಿಸಿದ ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿ, ರಾಜ್ಯ ಸರ್ಕಾರದ ಪರ ತೀರ್ಪು ಬಂದರೆ, ಮಲ್ಟಿಪ್ಲೆಕ್ಸ್‌ಗಳು ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಸಂಗ್ರಹಿಸಿದ ಎಲ್ಲಾ ಮೊತ್ತವನ್ನು ಟಿಕೆಟ್‌ಗಳನ್ನು ಬುಕ್ ಮಾಡಿದವರಿಗೆ ಬುಕ್ಕಿಂಗ್‌ಗೆ ಬಳಸಿದ ಪಾವತಿ ವಿಧಾನದ ಮೂಲಕವೇ ಮರುಪಾವತಿಸಬೇಕು ಎಂದು ನಿರ್ದೇಶಿಸಲಾಗಿದೆ.

ಆಡಿಟ್ ವರದಿ ನೀಡದ 'ವಾಟಾಳ್ ಪಕ್ಷ' ಸೇರಿ ವಿವಿಧ ಪಕ್ಷಗಳಿಗೆ ಚುನಾವಣಾ ಆಯೋಗದ ನೋಟಿಸ್

ಬೆಂಗಳೂರು, ಅ.4– ನೋಂದಾಯಿತ ಮಾನ್ಯತೆ ಪಡೆಯದ ರಾಜಕೀಯ ಪಕ್ಷಗಳಿಗೆ ಚುನಾವಣಾ ಆಯೋಗದಿಂದ ನೋಟಿಸ್ ಜಾರಿ ಮಾಡಲಾಗಿದೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ನೋಂದಣಿಯಾಗಿರುವ ರಾಜಕೀಯ ಪಕ್ಷಗಳು 3 ವರ್ಷಗಳಿಂದ ತನ್ನ ವಾರ್ಷಿಕ ಲೆಕ್ಕಪರಿಶೋಧಕ ಖಾತೆಗಳ ಮಾಹಿತಿಯನ್ನು ಆಯೋಗದ ಅನುಸಾರ ನಿಗದಿತ ಅವಧಿಯೊಳಗೆ ಸಲ್ಲಿಸದ ಕಾರಣ ಆಯೋಗವು ಶೋಕಾಸ್ ನೋಟಿಸ್ ಜಾರಿಗೊಳಿಸಿದೆ ಎಂದು ಬೆಂಗಳೂರು ನಗರ ಅಪರ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಜಿ.ಜಗದೀಶ ತಿಳಿಸಿದ್ದಾರೆ.

ಭಾರತೀಯ ಡಾ.ಬಿ.ಆರ್.ಅಂಬೇಡ್ಕರ್ ಜನತಾ ಪಕ್ಷ, ಡಾ.ಅಂಬೇಡ್ಕರ್ ಪೀಪಲ್ಸ್ ಪಾರ್ಟಿ, ಕನ್ನಡ ಚಳವಳಿ ವಾಟಾಳ್ ಪಕ್ಷ, ಕನ್ನಡ ಪಕ್ಷ, ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ಕಾರ್ಮಿಕರ ಪಕ್ಷ ರಾಜಕೀಯ ಪಕ್ಷವಾಗಿ ಈಗಾಗಲೇ ರಿಜಿಸ್ಟರ್ ಮಾಡಿಕೊಂಡಿದ್ದು, ಆಯೋಗದ ದಾಖಲೆಗಳ ಪ್ರಕಾರ ಈ ಪಕ್ಷಗಳು 3 ವರ್ಷಗಳಿಂದ (2021–22, 2022–23 ಹಾಗೂ 2023–24) ತನ್ನ ವಾರ್ಷಿಕ ಲೆಕ್ಕಪರಿಶೋಧಕ ಖಾತೆಗಳ ಮಾಹಿತಿಯನ್ನು ನಿಗದಿತ ಅವಧಿಯೊಳಗೆ ನಮೂನೆ ಪತ್ರದ ಮೂಲಕ ಸಲ್ಲಿಸಿರುವುದಿಲ್ಲ.

ನೋಟಿಸ್‌ನ ಅನುಸಾರ ಪಕ್ಷದ ಅಧ್ಯಕ್ಷರು ಅಥವಾ ಪ್ರಧಾನ ಕಾರ್ಯದರ್ಶಿಯವರ ಸರಿಯಾಗಿ ಮಾಹಿತಿಯನ್ನೊಳಗೊಂಡ ಅಫಿಡವಿಟ್ಟೊಂದಿಗೆ ಹಾಗೂ ಪಕ್ಷವು ಪ್ರಸ್ತಾವಿಸುವ ಎಲ್ಲಾ ಪೋಷಕ ದಾಖಲೆಗಳನ್ನು ಅ.14ರೊಳಗೆ ಚುನಾವಣಾ ಆಯೋಗಕ್ಕೆ ತಲುಪಿಸಬೇಕು. ಹಾಗೇ ಪಕ್ಷದ ವಿಚಾರಣೆಯು ಅದೇ ದಿನದಂದು ನಿಗದಿಪಡಿಸಿದ್ದು, ಪಕ್ಷದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಮುಖಂಡರು ಕಡ್ಡಾಯವಾಗಿ ಹಾಜರಿರಬೇಕು. ಒಂದು ವೇಳೆ ನಿಗದಿತ ದಿನಾಂಕದಂದು ಹಾಜರಾಗಿ ಉತ್ತರ ನೀಡದಿದ್ದಲ್ಲಿ ಪಕ್ಷದ ಯಾವುದೇ ಹೇಳಿಕೆ ಇರುವುದಿಲ್ಲವೆಂದು ಪರಿಗಣಿಸಿ, ಪಕ್ಷವನ್ನು ಸಂಪರ್ಕಿಸದೇ ಚುನಾವಣಾ ಆಯೋಗದಿಂದ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು ಎಂದು ಜಗದೀಶ ತಿಳಿಸಿದ್ದಾರೆ.

ದಸರಾ ವಸ್ತುಪ್ರದರ್ಶನದಲ್ಲಿ ಜೈವಿಕ ಇಂಧನ ಮಳಿಗೆ ಉದ್ಘಾಟನೆ

ಮೈಸೂರು, ಅ.4(ಎಸ್‌ಪಿಎನ್)– ದಸರಾ ಮಹೋತ್ಸವ 2025ರ ಅಂಗವಾಗಿ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ವತಿಯಿಂದ ಜೈವಿಕ ಇಂಧನ ಕ್ಷೇತ್ರದಲ್ಲಿ ಸರ್ಕಾರ ಕೈಗೊಂಡಿರುವ ಯೋಜನೆಗಳು ಹಾಗೂ ಮುಂದಿನ ರೂಪುರೇಷೆಗಳ ಕುರಿತಾದ ಮಾಹಿತಿ ಹಾಗೂ ಪ್ರಾತ್ಯಕ್ಷಿಕೆಗಳ 'ಜೈವಿಕ ಇಂಧನ ಮಳಿಗೆ'ಯನ್ನು ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಶನಿವಾರ ಉದ್ಘಾಟಿಸಿದರು.



'ಜೈವಿಕ ಇಂಧನ ಮಳಿಗೆ'ಯ ಪ್ರಾತ್ಯಕ್ಷಿಕೆಗಳ ಕೈಪಿಡಿಯನ್ನು ಅಯೂಬ್ ಖಾನ್ ಶನಿವಾರ ಬಿಡುಗಡೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ರಾಜ್ಯದಲ್ಲಿ ಜೈವಿಕ ಇಂಧನ ಕ್ಷೇತ್ರದಲ್ಲಿ ನೂತನ ಕಾರ್ಯ ಯೋಜನೆಗಳನ್ನು ರೂಪಿಸುತ್ತಿದ್ದು, ಇತ್ತೀಚೆಗೆ ರಾಜ್ಯ ಸರ್ಕಾರ ರಾಜ್ಯದಲ್ಲಿ ಬಯೋ ಡೀಸೆಲ್ 100 ರೂ., ಮಾರಾಟಕ್ಕೆ ಮಂಡಳಿಯನ್ನು ನೋಡಲ್ ಏಜೆನ್ಸಿಯನ್ನಾಗಿ ಮಾಡಿರುವುದು ಹಾಗೂ ಮುಕ್ತ ಮಾರಾಟಕ್ಕಾಗಿ ರಿಟೇಲ್ ಔಟ್ಲೆಟ್‌ಗಳ ಸ್ಥಾಪನೆಗೆ ರಾಜ್ಯ ಸರ್ಕಾರ ಅನುಮತಿ ನೀಡಿರುವುದು ಸ್ವಾಗತಾರ್ಹ ಎಂದರು.

ನಂತರ ಮಂಡಳಿ ಅಧ್ಯಕ್ಷ ಎಸ್.ಈ. ಸುದೀಂದ್ರ ಮಾತನಾಡಿ, ಮೈಸೂರು ನಗರದಲ್ಲಿನ ತ್ಯಾಜ್ಯ ಸಂಗ್ರಹಣೆ, ಜೈವಿಕ ಇಂಧನ ಉತ್ಪಾದನೆ ಹಾಗೂ ವಿತರಣೆ ಕುರಿತು ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದೊಂದಿಗೆ ಒಡಂಬಡಿಕೆ ಮಾಡಿಕೊಂಡು ಮುಂದಿನ ದಿನಗಳಲ್ಲಿ ಬಯೋ ಡೀಸೆಲ್, ಕಂಪ್ರೆಸ್ಡ್ ಬಯೋಗ್ಯಾಸ್ ಉತ್ಪಾದಿಸಿ ವಿತರಣೆಗೆ ಯೋಜನೆ ರೂಪಿಸಬಹುದಾಗಿದೆ ಎಂದು ತಿಳಿಸಿದರು. ಇನ್ನು ಕೆಲವೇ ತಿಂಗಳಗಳಲ್ಲಿ ಜೈವಿಕ ಇಂಧನ ಕ್ಷೇತ್ರದಲ್ಲಿ ಸಮಗ್ರ ಬದಲಾವಣೆಯಾಗಲಿದ್ದು ಬಂಡವಾಳ ಹೂಡಿಕೆದಾರರಿಗೆ ಪೂರಕ ವಾತಾವರಣ ನಿರ್ಮಾಣ ರಚನೆಯಾಗುವುದರ ಕುರಿತು ಯಾವುದೇ ಸಂಶಯವಿಲ್ಲ ಎಂದರು.

ಈ ವೇಳೆ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಎಲ್.ಶಿವಶಂಕರ್, ಹುಣಸೂರು ಸಾಮಾಜಿಕ ಅರಣ್ಯ ವಿಭಾಗದ ಉಪಅರಣ್ಯ ಸಂರಕ್ಷಣಾಧಿಕಾರಿ ಫಯಾಜ್, ಮಂಡಳಿಯ ಉಪಅರಣ್ಯ ಸಂರಕ್ಷಣಾಧಿಕಾರಿ ಬಿ.ಆರ್.ಲೋಹಿತ್, ಯೋಜನಾ ಸಲಹೆಗಾರ ಡಾ.ಜಿ.ಎನ್.ದಯಾನಂದ, ಎನ್‌ಐಇ ಕಾಲೇಜಿನ ಬಿಆರ್‌ಐಡಿಸಿ ಕೇಂದ್ರದ ಸಂಯೋಜಕ ಡಾ.ಶ್ಯಾಮ್ ಸುಂದರ್, ಇತರೆ ಸಿಬ್ಬಂದಿಗಳಾದ ಶಿವಪ್ರಕಾಶ್, ಪ್ರಸಾದ್, ಡೀಡ್ ಸಂಸ್ಥೆಯ ಸಂಚಾಲಕರಾದ ಪ್ರಕಾಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಜಿಲ್ಲೆಗೊಂದು ಮೆಡಿಕಲ್ ಕಾಲೇಜು, ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ

- ಮುಖ್ಯಮಂತ್ರಿ ಸಿದ್ದರಾಮಯ್ಯ ವಿವರಣೆ
- ಜೊತೆಗೆ ತಜ್ಞ ವೈದ್ಯರು, ಸಿಬ್ಬಂದಿ ನೇಮಕ



ಬೆಂಗಳೂರು,ಅ.4(ಕೆಎಂಶಿ)–ಜಿಲ್ಲೆಗೊಂದು ಸರ್ಕಾರಿ ವೈದ್ಯಕೀಯ ಕಾಲೇಜು ಹಾಗೂ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸುವುದೇ ನಮ್ಮ ಗುರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಸರ್ಕಾರಿ ಆಸ್ಪತ್ರೆಗೆ ಬರುವವರೆಲ್ಲ ಬಡ, ಮಧ್ಯಮ ವರ್ಗದವರು. ಇವರಿಗೂ ಅತ್ಯುತ್ತಮ ಆರೋಗ್ಯ ಸೇವೆ ಒದಗಿಸಲು ಪ್ರತಿ ಜಿಲ್ಲೆಯಲ್ಲಿ ಈ ಕಾರ್ಯ ಕೈಗೆತ್ತಿಕೊಂಡಿದ್ದೇವೆ. ಬರೀ ಆಸ್ಪತ್ರೆ ಕಟ್ಟಿದರೆ ಸಾಲದು, ಅದಕ್ಕೆ ತಕ್ಕಂತೆ ತಜ್ಞ ವೈದ್ಯರನ್ನೂ ನೇಮಿಸುತ್ತೇವೆ. ಖಾಲಿ ಇರುವ ಹುದ್ದೆಗಳ ಭರ್ತಿಗೂ ತೀರ್ಮಾನಿಸಿದ್ದೇವೆ ಎಂದರು. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸರ್ಕಾರ ಅಸಮಾನತೆ ಅಳಿಸುವ ದಿಕ್ಕಿನಲ್ಲಿ ತಳ ಸಮುದಾಯಗಳಿಗೆ ಅವಕಾಶ ಮತ್ತು ಅನುಕೂಲಗಳನ್ನು ಕಲ್ಪಿಸುತ್ತಿದೆ. ಇವರನ್ನು ಮುಖ್ಯ ವಾಹಿನಿಗೆ ತರುವ ಉದ್ದೇಶದಿಂದ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದ್ದು, ಅವು ಯಶಸ್ವಿ ಹಾದಿ ಕಂಡಿವೆ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಆಶಯದಂತೆ ನಮ್ಮ ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ಸಮಾಜದ ಕಟ್ಟಕಡೆಯವರಿಗೆ ಅಭಿವೃದ್ಧಿ ಯೋಜನೆಗಳು ತಲುಪಿದಾಗ ಮಾತ್ರ ಸಮಗ್ರ ಮತ್ತು ದೇಶದ ಅಭಿವೃದ್ಧಿ ಸಾಧ್ಯ ಎಂದರು. ನಾನು ಮೊದಲ ಬಾರಿ ಮುಖ್ಯಮಂತ್ರಿಯಾಗಿ ಜಾರಿಗೆ ತಂದ ಭಾಗ್ಯಗಳು, ಈಗ ಜಾರಿಗೆ ತಂದಿರುವ ಗ್ಯಾರಂಟಿಗಳು ರಾಜ್ಯದ ಜನರ ಕೊಳ್ಳುವ ಶಕ್ತಿ ಹಾಗೂ ತಲಾ ಆದಾಯವನ್ನು ಹೆಚ್ಚಿಸಿ ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಲಾಗಿದೆ ಎಂದರು. ಬಡವರಿಗೆ ಆರ್ಥಿಕವಾಗಿ ಶಕ್ತಿ ಬಂದರೆ ಸಮಾಜದ ಜಾತಿ ವ್ಯವಸ್ಥೆ ಅಸಮಾನತೆ ಅಳಿಸಲು ಸಾಧ್ಯವಾಗುತ್ತದೆ ಎಂದರು.

ಬಿಜೆಪಿ ತಲೆಕೆಡಿಸಿಕೊಳ್ಳಬೇಕಿಲ್ಲ

ಮುಖ್ಯಮಂತ್ರಿ ವಿಷಯ ಕಾಂಗ್ರೆಸ್‌ನ ಆಂತರಿಕ ವಿಷಯ

ಬೆಂಗಳೂರು,ಅ.4(ಕೆಎಂಶಿ)–ಮುಖ್ಯಮಂತ್ರಿ ಹುದ್ದೆ ವಿಷಯ ಕಾಂಗ್ರೆಸ್ ಪಕ್ಷದ ಆಂತರಿಕ ವಿಚಾರವಾಗಿದ್ದು, ಬಿಜೆಪಿ ತಲೆಕೆಡಿಸಿಕೊಳ್ಳಬೇಕಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳ ಯಶಸ್ಸು ಬಿಜೆಪಿಯನ್ನು ಆತಂಕಗೊಳಿಸಿದೆ. ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದು ಗ್ಯಾರಂಟಿಗಳನ್ನು ತಪ್ಪದೇ ನೀಡುತ್ತಿದೆ ಎಂದರು. ಎನ್‌ಡಿಆರ್‌ಎಫ್ ಅನುದಾನ ಗ್ಯಾರಂಟಿಗಳಿಗೆ ಬಳಸುತ್ತಿಲ್ಲ. ಬಿಜೆಪಿಯವರು ಕಾಮಾಲೆ ಕಣ್ಣಿನಿಂದ ಎಲ್ಲವನ್ನೂ ನೋಡುತ್ತಾರೆ. ಗ್ಯಾರಂಟಿ ಯೋಜನೆಗಳ ಯಶಸ್ಸು ಅವರಲ್ಲಿ ಆತಂಕ ಉಂಟು ಮಾಡಿದೆ. ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳನ್ನು ಬಿಹಾರ, ದೆಹಲಿ, ಮಹಾರಾಷ್ಟ್ರ, ಮಧ್ಯಪ್ರದೇಶ, ಹರಿಯಾಣ ಸೇರಿದಂತೆ ಹಲವು ರಾಜ್ಯಗಳಲ್ಲಿ ಅನುಕರಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಗ್ಯಾರಂಟಿಗಳ ಅನುಷ್ಠಾನ ಸಾಧ್ಯವೇ ಇಲ್ಲ ಎಂದಿದ್ದರು. ಆದರೆ, ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದು ಗ್ಯಾರಂಟಿಗಳನ್ನು ತಪ್ಪದೇ ನೀಡುತ್ತಿದೆ ಎಂದರು.

ನಾಲ್ಕು ದಿನಗಳ ಮೈಸೂರು ಪ್ರವಾಸ ಬಳಿಕ ಬೆಳಗಾವಿಗೆ ತೆರಳಿದ ಸಿಎಂ ಸಿದ್ದರಾಮಯ್ಯ

ಮೈಸೂರು, ಅ.4(ಬಿಎಲ್ಯು)– ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ನಾಲ್ಕು ದಿನಗಳ ಮೈಸೂರು ಪ್ರವಾಸ ಕೈಗೊಂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಬೆಳಗಾವಿಗೆ ತೆರಳಿದರು. ಆಯುಧಪೂಜೆ ದಿನ ಮೈಸೂರಿಗೆ ಆಗಮಿಸಿದ್ದರು. ಅಂದಿನಿಂದ ಆಯುಧಪೂಜೆ, ವಿಜಯ ದಶಮಿ ದಿನಗಳು, ನಿನ್ನೆ ಮತ್ತು ಇಂದು ಸೇರಿದಂತೆ ನಾಲ್ಕು ದಿನ ಮೈಸೂರಿನಲ್ಲೇ ವಾಸ್ತವ್ಯ ಹೂಡಿದ್ದರು. ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಸಂಸದ ವೇಣುಗೋಪಾಲ್ ಅವರು ಬೆಂಗಳೂರಿಗೆ ಆಗಮಿಸಿದ್ದರು. ಸಿದ್ದರಾಮಯ್ಯ ಮಾತ್ರ ಬೆಂಗಳೂರಿಗೆ ಹೋಗಲಿಲ್ಲ. ಆಡಳಿತ ಒತ್ತಡ ಹಾಗೂ ರಾಜಕೀಯ ಜಂಜಾಟದಿಂದ ಸದ್ಯ ದೂರವಿದ್ದ ಸಿದ್ದರಾಮಯ್ಯ, ನಾಲ್ಕು ದಿನ ವಿಶ್ರಾಂತಿ ಪಡೆದಿದ್ದರು. ಮೈಸೂರಿನ ಅಗ್ರಹಾರದ ಮೈಲಾರಿ ಹೋಟೆಲ್‌ಗೆ ಇಂದು ಬೆಳಗ್ಗೆ ಭೇಟಿ ನೀಡಿದ ಸಿದ್ದರಾಮಯ್ಯ, ಅಲ್ಲಿ ಬೆಣ್ಣೆ ದೋಸೆ ಹಾಗೂ ಇಡ್ಲಿ ಸವಿದರು. ಬಳಿಕ ವಿಶೇಷ ವಿಮಾನದಲ್ಲಿ ಮೈಸೂರಿನಿಂದ ಬೆಳಗಾವಿಗೆ ತೆರಳಿದರು.

ಅಭಿನಂದನೆ...



ಮೈಸೂರು ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯರಾಗಿ ನೇಮಕಗೊಂಡಿರುವ ಕನ್ನಡಪರ ಹೋರಾಟಗಾರ ಕಡಕೊಳ ಕುಮಾರಸ್ವಾಮಿ ಅವರನ್ನು ಅಭಿನಂದಿಸಲಾಯಿತು. ರಾಜ್ಯ ಮೀನು ಮಾರಾಟ ಸಹಕಾರ ಸಂಘದ ನಿರ್ದೇಶಕ ಚಿನ್ನಂಕನಾಯಕ, ಮಾಜಿ ತಾ.ಪಂ ಸದಸ್ಯರಾದ ಜಯಪುರ ಜವರನಾಯಕ, ವೆಂಕಟಯ್ಯ, ಗ್ರಾಪಂ ಅಧ್ಯಕ್ಷ ಕೃಷ್ಣ ನಾಯಕ್, ಮುಖಂಡರಾದ ಚಾಮುಂಡಿಬೆಟ್ಟ ಶಂಭುನಾಯಕ್, ರಮ್ಮನಹಳ್ಳಿ ರಾಜಶೇಖರ್, ಮಾದೇಶ್ ನಾಯಕ್, ಎಲ್ಲನಾಯಕ್, ನಾಗರಾಜು, ರಂಗಸ್ವಾಮಿ, ಕೃಷ್ಣಪ್ಪ, ಮರಸೆ ಸಿದ್ದಪ್ಪ, ಗೋಳನಾಯಕ್, ವಾಜಮಂಗಲ ಅಂಕಪ್ಪ ಮತ್ತಿತರರು ಉಪಸ್ಥಿತರಿದ್ದರು.

ತೆಂಗಿನಮರದ ತಿರುಳಿನಾಸೆಗೆ ಬಂದ ಆನೆ ವಿದ್ಯುತ್ ಸ್ಪರ್ಶಿಸಿ ಸಾವು!

ರಾಮನಗರ,ಅ.4–ವಿದ್ಯುತ್ ಸ್ಪರ್ಶದಿಂದ ಕಾಡಾನೆ ಸಾವನ್ನಪ್ಪಿರುವ ಘಟನೆ ಚನ್ನಪಟ್ಟಣ ತಾಲೂಕಿನ ಚಿಕ್ಕವಿಠಲೇನಹಳ್ಳಿಯಲ್ಲಿ ನಡೆದಿದೆ. ಶುಕ್ರವಾರ ರಾತ್ರಿ ಜಮೀನೊಂದರಲ್ಲಿ ತೆಂಗಿನಮರದ ಸುಳಿಯನ್ನು ಕಿತ್ತು ತಿನ್ನಲು ಯತ್ನಿಸಿದಾಗ ತೆಂಗಿನಮರದ ಗರಿ 11ಕೆವಿ ವಿದ್ಯುತ್ ತಂತಿಗೆ ತಗುಲಿದ್ದರಿಂದ ಕಾಡಾನೆ ಸ್ಥಳದಲ್ಲೇ ಸಾವಿಗೀಡಾಗಿದೆ. ಸುಮಾರು 40 ವರ್ಷದ ಹೆಣ್ಣು ಆನೆಯಾಗಿದೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ರಾಮಕೃಷ್ಣಪ್ಪ ಸಾಗರ್ ತಿಳಿಸಿದ್ದಾರೆ. ಘಟನೆ ಹಿನ್ನೆಲೆಯಲ್ಲಿ ಸ್ಥಳಕ್ಕೆ ಅರಣ್ಯಾಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿ, ವೈದ್ಯರಿಂದ ಮೃತ ಆನೆಯ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಮಲೆಮಹದೇಶ್ವರಬೆಟ್ಟದಲ್ಲಿ ಹುಲಿ ಮೃತಪಟ್ಟ ಒಂದು ದಿನದ ನಂತರ ಈ ಘಟನೆ ಸಂಭವಿಸಿದೆ.

ಚಾಮುಂಡೇಶ್ವರಿಗೆ ವಿವಿಧ ಧಾರ್ಮಿಕ ಕಾರ್ಯಗಳು



ಮೈಸೂರು, ಅ.4(ಎಸ್‌ಪಿಎನ್)– ಶ್ರೀ ಚಾಮುಂಡೇಶ್ವರಿ ಅಮ್ಮನವರ ಮಹಾರಥೋತ್ಸವದ ಪ್ರಯುಕ್ತ 10 ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಪ್ರಕಟಣೆಯಲ್ಲಿ ತಿಳಿಸಿದೆ.

ಅ.1ರಿಂದ ವಿವಿಧ ಪೂಜಾ ಕಾರ್ಯಕ್ರಮಗಳು ಆರಂಭವಾಗಿದ್ದು, ಅ.5ರಂದು ಆಶ್ವಯುಜ ಶುಕ್ಲ ತ್ರಯೋದಶಿ ಪೂರ್ವಭಾದ್ರ ನಕ್ಷತ್ರ 'ಕಳಶಾರೋಹಣ', 'ಗಜಾರೋಹಣ'. ಅ.6 ರಂದು ಉತ್ತರಬಾದ್ರ ನಕ್ಷತ್ರ ಬೆಳಗ್ಗೆ 9.32ರಿಂದ 9.52ರವರೆಗೆ ಸಲ್ಲುವ ಶುಭ ಮಹೂರ್ತದಲ್ಲಿ 'ಶ್ರೀಮದ್ ದಿವ್ಯಾ ರಥಾ ರೋಹಣ' ಮಂಟಪೋತ್ಸವ, ಸಂಜೆ ಸಿಂಹವಾಹನೋತ್ಸವ, ಹಂಸ ವಾಹನೋತ್ಸವ, ಮಂಟಪೋತ್ಸವ ನಡೆಯಲಿದೆ. ಅ.7ರಂದು ಅಶ್ವಯುಜ ಕೃಷ್ಣ 'ಪೂರ್ಣಿಮಾ' ರೇವತಿ ನಕ್ಷತ್ರ ಅಶ್ವಾರೋಹಣ, ಆ.8ರಂದು ವಸಂತ ಪೂಜೆ, ಅವಭೃತ ತೀರ್ಥಸ್ನಾನ, ಮಂಟಪೋತ್ಸವ, ಸಂಜೆ 7ಕ್ಕೆ 'ತೆಪ್ಪೋತ್ಸವ', ಅಂದೋಳಿಕಾರೋಹಣ, ಧ್ವಜಾವರೋಹಣ. ಅ.9ರಂದು ತೃತೀಯ ಭರಣಿ ನಕ್ಷತ್ರ ಸಾಯಂಕಾಲ ಪಂಚೋಪಚಾರ ಪೂಜೆ, ಕೈಲಾಸ ವಾಹನೋತ್ಸವ 'ಶಯನೋತ್ಸವ'. ಅ.10ರಂದು ಕೃತಿಕಾ ನಕ್ಷತ್ರದ ಅಂಗವಾಗಿ 'ಮಹಾಭಿಷೇಕ' ರಾತ್ರಿ 'ಮುಡಿ ಉತ್ಸವ' ನಡೆಯಲಿದೆ ಎಂದು ತಿಳಿಸಿದೆ.

ಅ.6, ಮೈಸೂರು ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯಾವಳಿಗೆ ಚಾಲನೆ

ಮೈಸೂರು, ಅ.4(ಎಸ್‌ಪಿಎನ್)– ಮೈಸೂರು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ 2025–25ನೇ ಸಾಲಿನ ಜಿಲ್ಲಾ ಮಟ್ಟದ 14 ವರ್ಷ ಮತ್ತು 17 ವರ್ಷದೊಳಗಿನ ಬಾಲಕ, ಬಾಲಕಿಯರ ವಾಲಿಬಾಲ್ ಪಂದ್ಯಾವಳಿಯನ್ನು ಅ.6ರಂದು ಬೆಳಗ್ಗೆ 9 ಗಂಟೆಗೆ ಶಾಲಾ ಶಿಕ್ಷಣ ಇಲಾಖೆ ಡಿಡಿಪಿಐ ಕಚೇರಿ (ಆಡಳಿತ) ಹಾಗೂ ಮೈಸೂರು ಉತ್ತರ ವಲಯ ಬಿಇಓ ಕಚೇರಿ ದೈಹಿಕ ಶಿಕ್ಷಣ ವಿಭಾಗದ ಸಹಯೋಗದೊಂದಿಗೆ ನಡೆಯಲಿದೆ ಎಂದು ಉತ್ತರ ವಲಯ ಬಿಇಓ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

ಶನಿಕಾಟ ಎದುರಾಗಿರುವುದರಿಂದ ಸಿದ್ದರಾಮಯ್ಯ ರೈತರಿಗೆ ಕಾಟ ನೀಡುತ್ತಿದ್ದಾರೆ

ವಿಪಕ್ಷ ನಾಯಕ ಆರ್.ಅಶೋಕ್ ವ್ಯಂಗ್ಯ

ವಿಜಯಪುರ, ಅ.4 ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನವೆಂಬರ್‌ಗೆ ಶನಿಕಾಟ ಎದುರಾಗಿದೆ. ಒಂದು ಕಡೆ ಡಿಕೆಶಿ ಕಾಟ, ಇನ್ನೊಂದು ಕಡೆ ಪರಮೇಶ್ವರ ಕಾಟ, ಮತ್ತೊಂದು ಕಡೆ ಎಂ.ಬಿ. ಪಾಟೀಲ್ ಕಾಟ ಹೆಚ್ಚಾಗಿದೆ. ಹೀಗಾಗಿ ಮುಖ್ಯಮಂತ್ರಿ ರೈತರಿಗೆ ಕಾಟ ನೀಡುತ್ತಿದ್ದಾರೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ವ್ಯಂಗ್ಯವಾಡಿದರು.

ಭೀಮಾ ನದಿಯಿಂದ ಪ್ರವಾಹಕ್ಕೆ ತುತ್ತಾಗಿರುವ ವಿಜಯಪುರ ಜಿಲ್ಲೆಯ ಇಂಡಿ, ಆಲಮೇಲ ತಾಲ್ಲೂಕಿನ ರೈತರ ಹೊಲಗಳಿಗೆ ಶನಿವಾರ ಭೇಟಿ ನೀಡಿ, ಹಾನಿಯನ್ನು ಪರಿಶೀಲಿಸಿದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಕೇಂದ್ರದ ಬಳಿಗೆ ಸರ್ವಪಕ್ಷ ನಿಯೋಗ



ಕೊಂಡೊಯ್ಯಲು ಸಲಹೆ: ರಾಜ್ಯದಲ್ಲಿ ಮಳೆ, ಪ್ರವಾಹಕ್ಕೆ ತುತ್ತಾಗಿರುವ ರೈತರಿಗೆ ಸೂಕ್ತ ಪರಿಹಾರ, ನೆರವು ಕಲ್ಪಿಸಲು ಕೇಂದ್ರ ಸರ್ಕಾರದ ಬಳಿಗೆ ಸರ್ವಪಕ್ಷ ನಿಯೋಗ ಕೊಂಡೊಯ್ಯಲು ರಾಜ್ಯ ಸರ್ಕಾರ ಶೀಘ್ರ ಮುಂದಾಗಬೇಕು.

ಬಿಜೆಪಿ ಪ್ರವಾಹ ವೀಕ್ಷಣೆ ವರದಿಯನ್ನು ಶೀಘ್ರದಲ್ಲೇ ರಾಜ್ಯ ಸರ್ಕಾರಕ್ಕೆ ನೀಡಲಿದೆ. ನೆರೆ ಹಾನಿ ಸಂಬಂಧ ಚರ್ಚಿಸಲು ಶೀಘ್ರ ಸರ್ವ ಪಕ್ಷ ಸಭೆ ಕರೆಯಬೇಕು ಎಂದು ಅಶೋಕ್ ಆಗ್ರಹಿಸಿದರು.


ರಾಜ್ಯದಲ್ಲಿ ಮಳೆ ಮತ್ತು ಪ್ರವಾಹದಿಂದ ಆಗಿರುವ ಹಾನಿ ಕುರಿತು ಕೇಂದ್ರ ಸರ್ಕಾರಕ್ಕೆ ಇದುವರೆಗೂ ರಾಜ್ಯ ಸರ್ಕಾರ ಗಮನಕ್ಕೆ ತಂದಿಲ್ಲ. ಕೇವಲ ಕೇಂದ್ರದ ಮೇಲೆ ಗೂಬೆ ಕೂರಿಸುವ ಯತ್ನ ಮುಖ್ಯಮಂತ್ರಿ, ಸಚಿವರು ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಉತ್ತರ ಕರ್ನಾಟಕ ಹಾಗೂ ಮಲೆನಾಡಿನಲ್ಲಿ ಪ್ರವಾಹ, ಮಳೆ ಹಾನಿಯಿಂದ ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ, ಯಾರೊಬ್ಬರೂ ನವರಾತ್ರಿ ಆಚರಿಸಿಲ್ಲ, ರಾಜ್ಯ ಸರ್ಕಾರ ಕುಂಭ ಕರ್ಣ ನಿದ್ದೆಯಲ್ಲಿದೆ. ಸಚಿವರು ಪ್ರವಾಹ ಸ್ಥಳಕ್ಕೆ ಭೇಟಿ ನೀಡಿಲ್ಲ, ಸಚಿವರು ನಾಪತ್ತೆಯಾಗಿದ್ದಾರೆ ಎಂದು ಆರ್.ಅಶೋಕ್ ಆರೋಪಿಸಿದರು.

ಬಿಜೆಪಿ ಎರಡು ತಂಡಗಳಲ್ಲಿ ಪ್ರವಾಸ ಮಾಡುವ ವಿಷಯ ತಿಳಿಯುತ್ತಿದ್ದಂತೆ ಎಚ್ಚೆತ್ತ ಮುಖ್ಯಮಂತ್ರಿ ಕಾಟಾಚಾರಕ್ಕೆ ಎಂಬಂತೆ ವೈಮಾನಿಕ ಸಮೀಕ್ಷೆ ಮಾಡಿದ್ದಾರೆ ಎಂದು ದೂರಿದರು.

ಸರ್ಕಾರ ಸಂತ್ರಸ್ತರಿಗೆ ಪರಿಹಾರ ಘೋಷಣೆ ಮಾಡಿದೆ. ಆದರೆ, ಇದುವರೆಗೂ ನಯಾ ಪೈಸೆ ಪರಿಹಾರ ನೀಡಿಲ್ಲ, ಈ ಹಿಂದೆ ಯಡಿಯೂರಪ್ಪ, ಬೊಮ್ಮಾಯಿ ಸರ್ಕಾರ ಇದ್ದಾಗ ತುರ್ತು ಪರಿಹಾರ ನೀಡಿದ್ದೆವು, ಎಕರೆಗೆ 25 ಸಾವಿರ ಪರಿಹಾರ ನೀಡಲಾಗಿತ್ತು, ಮಳೆ, ಪ್ರವಾಹದಿಂದ ಬಿದ್ದ ಮನೆಗಳಿಗೆ 5 ಲಕ್ಷ ನೀಡಿದ್ದೇವೆ. ರಾಜ್ಯ ಸರ್ಕಾರ ಬದುಕಿದ್ದರೆ ಸರಿಯಾದ ಪರಿಹಾರ ನೀಡಲಿ ಎಂದು ಆಗ್ರಹಿಸಿದರು.

ಟಿಜೆಎಸ್ ಜಾರ್ಜ್ ನಿಧನಕ್ಕೆ ಸುತ್ತೂರು ಶ್ರೀಗಳ ಸಂತಾಪ





ಮೈಸೂರು, ಅ.4(ಎಸ್‌ಪಿಎನ್)– ಪ್ರಖರ ಚಿಂತನೆ, ನೇರ ಮಾತು, ನಿಷ್ಠುರ ನಿಲುವು ಮತ್ತು ಪ್ರಜಾಪ್ರಭುತ್ವದ ಮೇಲೆ ಗಾಢ ನಂಬಿಕೆ ಹೊಂದಿದ್ದ ಪತ್ರಕರ್ತ, ಲೇಖಕರಾದ ಟಿ.ಜೆ.ಎಸ್. ಜಾರ್ಜ್ ಅವರ ನಿಧನ ಭಾರತೀಯ ಪತ್ರಿಕೋದ್ಯಮಕ್ಕೆ ತುಂಬಲಾರದ ನಷ್ಟ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಂತಾಪ ಸೂಚಿಸಿದ್ದಾರೆ.

ಟಿಜೆಎಸ್ ಜಾರ್ಜ್‌ರವರು ಮೊದಲಿಗೆ ಫ್ರೀ ಪ್ರೆಸ್ ಜರ್ನಲ್ ಪತ್ರಿಕೆಯಲ್ಲಿ ಕೆಲಸ ಪ್ರಾರಂಭಿಸಿದ್ದರು. ನಂತರ 'ಇಂಟರ್ ನ್ಯಾಷನಲ್ ಪ್ರೆಸ್ ಇನ್‌ಸ್ಟಿಟ್ಯೂಟ್' ಹಾಗೂ 'ದಿ ಸರ್ಚ್‌ಲೈಟ್ ಫಾರ್ ಈಸ್ಟರ್ನ್ ಎಕನಾಮಿಕ್ಸ್ ರಿವ್ಯೂ' ಪತ್ರಿಕೆಗಳಲ್ಲಿ ಕೆಲಸ ಮಾಡಿ, ಮುಂದೆ ಹಾಂಗ್ ಕಾಂಗ್‌ನಲ್ಲಿ 'ಏಷಿಯಾ ವೀಕ್' ಪತ್ರಿಕೆಯ ಸಂಸ್ಥಾಪಕ ಸಂಪಾದಕರಾಗಿದ್ದರು. ಆಧುನಿಕ ಪತ್ರಿಕೋದ್ಯಮದ ಹರಿಕಾರ ಎಂದೇ ಹೆಸರಾಗಿದ್ದ ಅವರ 'ಪಾಯಿಂಟ್ ಆಫ್ ವ್ಯೂ' ಅಂಕಣ ಅಪಾರ ಜನಪ್ರಿಯವಾಗಿತ್ತು.

ಆ ದಿನಮಾನದ ಬಹುಮುಖ್ಯ ರಾಜಕೀಯ ವಿಶ್ಲೇಷಕರು ಎಂದು ಪ್ರಸಿದ್ಧರಾಗಿದ್ದರು. 'ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯ ಸಂಪಾದಕೀಯ ಸಲಹೆಗಾರರಾಗಿದ್ದರು. ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಅವರು ಭಾರತದ ಸಾಕ್ಷಿ ಪ್ರಜ್ಞೆಯಂತಿದ್ದರು. ಪತ್ರಕರ್ತರಿಗೆ ಇರಬೇಕಾದ ಶಿಸ್ತು, ಸಂಯಮವನ್ನು ನಡೆನುಡಿಯ ಮೂಲಕ ತೋರಿಸಿಕೊಟ್ಟವರು.

ಪತ್ರಿಕೋದ್ಯಮ ಜೀವನದಲ್ಲಿ ಅವರು 1,300ಕ್ಕೂ ಹೆಚ್ಚು ಅಂಕಣಗಳನ್ನು ನಿರಂತರವಾಗಿ ಬರೆದು, ವಿಶಿಷ್ಟ ಸಾಧನೆಯನ್ನೇ ನಿರ್ಮಿಸಿದ್ದವರು. ಭ್ರಷ್ಟ ರಾಜಕಾರಣಿಗಳ ಪಾಲಿಗೆ ಸಿಂಹಸ್ವಪ್ನವಾಗಿದ್ದ ಅವರು, ನಿರ್ಭೀತ ಪತ್ರಿಕೋದ್ಯಮಕ್ಕೆ ಉದಾಹರಣೆಯಂತಿದ್ದರು. ರಾಷ್ಟ್ರದ ಉನ್ನತ ನಾಗರಿಕ ಸೇವಾಪ್ರಶಸ್ತಿಯಾದ ಪದ್ಮ ಭೂಷಣ ಪುರಸ್ಕಾರವಲ್ಲದೆ, ಸ್ವದೇಶಾಭಿಮಾನಿ ಕೇಸರಿ ಪ್ರಶಸ್ತಿ, ಬಶೀರ್ ಪ್ರಶಸ್ತಿ, ಕಮಲಾ ಸೂರ್ಯ ಪ್ರಶಸ್ತಿ ಕೇಸರಿ ಮೀಡಿಯಾ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಟಿಜೆಎಸ್ ಜಾರ್ಜ್‌ರವರ ಅಗಲುವಿಕೆಯಿಂದ ದೇಶದ ಪತ್ರಿಕೋದ್ಯಮ ಮಂಕಾಗಿದೆ ಎಂದರೆ ಅತಿಶಯೋಕ್ತಿ ಯಲ್ಲ. ಅವರ ಆತ್ಮಕ್ಕೆ ಶಾಂತಿಯನ್ನು, ಅವರ ಕುಟುಂಬವರ್ಗದವರು ಮತ್ತು ಲಕ್ಷಾಂತರ ಅಭಿಮಾನಿಗಳಿಗೆ ಈ ಅಗಲುವಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಸುತ್ತೂರು ಶ್ರೀಗಳು ಸಂತಾಪ ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

ಭಾರತ ನನ್ನ ಮಾತೃಭೂಮಿ: ಪಾಕ್ ಮಾಜಿ ಕ್ರಿಕೆಟಿಗ ಹೇಳಿಕೆ



ಡ್ಯಾನಿಶ್

ಇಸ್ಲಮಾಬಾದ್: ಭಾರತದ ಆಂತರಿಕ ವಿಚಾರಗಳ ಕುರಿತು ಆಗಾಗ್ಗೆ ಮಾತನಾಡುವ ಪಾಕಿಸ್ತಾನದ ಮಾಜಿ ಕ್ರಿಕೆಟಿಗ ಡ್ಯಾನಿಶ್ ಕನೇರಿಯಾ, ಇದೀಗ ಮಾತೃಭೂಮಿ ವಿಚಾರದಲ್ಲಿ ಸಂಚಲನದ ಹೇಳಿಕೆ ನೀಡಿದ್ದಾರೆ. ಪಾಕಿಸ್ತಾನ ನನ್ನ ಜನ್ಮಭೂಮಿ ಆಗಿರಬಹುದು ಆದರೆ, ನನ್ನ ಪೂರ್ವಿಕರ ನೆಲೆಯಾಗಿರುವ ಭಾರತವೇ ನನ್ನ ಮಾತೃಭೂಮಿ ಎಂದಿದ್ದಾರೆ. ನನಗೆ ಭಾರತ ದೇವಾಲಯ ಇದ್ದಂತೆ. ಪ್ರಸ್ತುತ, ಭಾರತೀಯ ಪೌರತ್ವ ಪಡೆಯುವ ಬಗ್ಗೆ ಯಾವುದೇ ಯೋಜನೆ ಹೊಂದಿಲ್ಲ. ಭವಿಷ್ಯದಲ್ಲಿ ನನ್ನಂತಹ ಯಾರಾದರೂ ಹಾಗೆ ಮಾಡಲು ನಿರ್ಧರಿಸಿದರೆ, ನಮ್ಮಂತಹ ಜನರಿಗೆ ಸಿಎಎ ಈಗಾಗಲೇ ಜಾರಿಯಲ್ಲಿದೆ ಎಂದು ಅವರು ಹೇಳಿದ್ದಾರೆ. ಹಿಂದೂ ಆಗಿರುವ ಮಾಜಿ ಲೆಗ್ ಬ್ರೇಕ್ ಬೌಲರ್, ಪಾಕಿಸ್ತಾನ ಅಧಿಕಾರಿಗಳು ಮತ್ತು ಕ್ರಿಕೆಟ್ ಮಂಡಳಿಯಿಂದ ತೀವ್ರ ತಾರತಮ್ಯಕ್ಕೊಳಗಾಗಿದ್ದರೂ, ಪಾಕಿಸ್ತಾನವು ತನ್ನ ಜನ್ಮಭೂಮಿ" ಎಂದು ಒತ್ತಿಹೇಳಿದರು.

ಜಾತಿಗಣತಿ ವೇಳೆ ಮರಣ ಹೊಂದಿದ ಸಿಬ್ಬಂದಿ ಕುಟುಂಬಕ್ಕೆ ವಿಶೇಷ ಪರಿಹಾರ ಘೋಷಣೆಗೆ ಆಗ್ರಹ


ಮೈಸೂರು,ಅ.4(ಎಸ್‌ಪಿಎನ್)– ಸಾಮಾಜಿಕ ಮತ್ತು ಶೈಕ್ಷಣಿಕ ಗಣತಿಯಲ್ಲಿ ಕರ್ತವ್ಯದ ವೇಳೆ ಮರಣ ಹೊಂದಿದ ಸರ್ಕಾರಿ ಅಧಿಕಾರಿ, ನೌಕರರಿಗೆ ವಿಶೇಷ ಪರಿಹಾರ ಘೋಷಣೆ ಮಾಡಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಮುಖ್ಯಮಂತ್ರಿ ಸಿದ್ದರಾಮಯ್ಯರಲ್ಲಿ ಮನವಿ ಮಾಡಿದೆ. ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ–2025ರ ಗಣತಿ ಕಾರ್ಯದಲ್ಲಿ ರಾಜ್ಯಾದ್ಯಂತ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಗಣತಿಯಲ್ಲಿ ಕಾರ್ಯನಿರ್ವಹಿಸುವ ವೇಳೆ ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಮುಖ್ಯಶಿಕ್ಷಕ ವೈ.ವಿ.ರಾಮಕೃಷ್ಣ, ಬಾಗಲಕೋಟೆಯ ದಾನಮ್ಮ ನಂದರಗಿ ಮೃತಪಟ್ಟಿದ್ದಾರೆ. ಈ ಹಿಂದೆ ಕೋವಿಡ್ ಕರ್ತವ್ಯ ನಿರ್ವಹಣೆ, ಭಾರತೀಯ ಚುನಾವಣಾ ಆಯೋಗದ ಮಾರ್ಗಸೂಚಿಗಳಂತೆ ಸಾರ್ವತ್ರಿಕ ಚುನಾವಣೆ ಕರ್ತವ್ಯ ನಿರ್ವಹಣೆ ಸಂದರ್ಭದಲ್ಲಿ ಆಕಸ್ಮಿಕ ಮರಣ ಹೊಂದಿದ ಸರ್ಕಾರಿ ನೌಕರರಿಗೆ ರಾಜ್ಯ ಸರ್ಕಾ ರವು ವಿಶೇಷ ಪರಿಹಾರವನ್ನು ನೀಡುತ್ತಾ ಬಂದಿರುತ್ತದೆ. ನಿವೃತ್ತ ನ್ಯಾಯಮೂರ್ತಿ ಡಾ. ಎಚ್.ಎಸ್.ನಾಗಮೋಹನ ದಾಸ್ ನೇತೃತ್ವದ ಏಕಸದಸ್ಯ ವಿಚಾರಣಾ ಆಯೋಗದಿಂದ ಹಮ್ಮಿಕೊಂಡಿದ್ದ ಪರಿಶಿಷ್ಟ ಜಾತಿಗಳ ವಿವಿಧ ಅಂಶಗಳ ಬಗ್ಗೆ ದತ್ತಾಂಶಗಳನ್ನು ಶೇಖರಿಸಲು ಕೈಗೊಳ್ಳಲಾಗಿದ್ದ ಸಮೀಕ್ಷಾ ಕಾರ್ಯದ ಅವಧಿಯಲ್ಲಿ ಅಕಾಲಿಕ ಮರಣ ಹೊಂದಿದ ಸರ್ಕಾರಿ ನೌಕರರಿಗೆ ಉಲ್ಲೇಖಿತ ಆದೇಶದಂತೆ 15 ಲಕ್ಷ ವಿಶೇಷ ಪರಿಹಾರಧನ ಮಂಜೂರು ಮಾಡಿದ್ದ ಪ್ರಸಂಗವನ್ನು ನೌಕರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ ಉಲ್ಲೇಖಿಸಿದ್ದಾರೆ.

ಕರ್ನಾಟಕ ಲೋಕಾಯುಕ್ತ: ದೂರು ಸ್ವೀಕಾರ

ಮೈಸೂರು: ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗ ಅಧಿಕಾರಿಗಳಿಂದ ಅ.8ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ನಂಜನಗೂಡು ತಾಲೂಕಿನ ಪಂಚಾಯತ್ ಸಭಾಂಗಣದಲ್ಲಿ ದೂರು ಸ್ವೀಕರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಸಾರ್ವಜನಿಕ, ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಅಗತ್ಯ ದಾಖಲಾತಿಗಳೊಡನೆ ಸಾರ್ವಜನಿಕರು ದೂರು ನೀಡಬಹುದು ಎಂದು ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಉದೇಶ ತಿಳಿಸಿದ್ದಾರೆ.

ಅ.7ಕ್ಕೆ ಮೈಸೂರಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ



ಮೈಸೂರು,ಅ.4–ಕರ್ನಾಟಕ ಸರ್ಕಾರ, ಜಿಲ್ಲಾ ಆಡಳಿತ ಮತ್ತು ಜಿಲ್ಲಾ ಪಂಚಾಯತ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಮೈಸೂರು ನಗರ ಮತ್ತು ತಾಲೂಕು ನಾಯಕ ಜನಾಂಗದ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆಯನ್ನು ಅ.7 ರಂದು ಬೆಳಗ್ಗೆ 12.30 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದು, ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಪಶು ಸಂಗೋಪನೆ ಸಚಿವ ಕೆ.ವೆಂಕ ಟೇಶ್, ಶಾಸಕ ಅನಿಲ್‌ಕುಮಾರ್, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯ ಮಿತದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿ ಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಗೌರವ ಉಪಸ್ಥಿತರಿರಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಒಡೆಯರ್ ಹಾಗೂ ಸುನೀಲ್ ಬೋಸ್ ಆಗಮಿಸಲಿದ್ದಾರೆ. ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್ ಡಿ., ಟಿ.ಎಸ್.ಶ್ರೀವತ್ಸ, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ. ಮಾದೇ ಗೌಡ, ಡಾ.ಯತಿಂದ್ರ ಎಸ್, ಕೆ. ವಿವೇಕಾನಂದ ಮತ್ತು ಕೆ. ಶಿವಕುಮಾರ್ ಸಮಾರಂಭದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ಹಾಗೂ ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಹಿರಿಯ ಕಾನೂನು ಸಹಾಯಕ ಪ್ರಾಧ್ಯಾಪಕ ಡಾ.ರಂಗಸ್ವಾಮಿ ಮುಖ್ಯ ಭಾಷಣ ಮಾಡಲಿದ್ದಾರೆ.

ಬೆಂಗಳೂರು ಕಳಪೆ ರಸ್ತೆ ಅವಾಂತರ: ಸಹೋದರಿಯರು ದುರ್ಮರಣ!



ಬೆಂಗಳೂರು,ಅ.4–ಆಲನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ರಸ್ತೆ ಕಳಪೆ ನಿರ್ವಹಣೆಯಿಂದಾಗಿ 22 ವರ್ಷದ ವಿದ್ಯಾರ್ಥಿನಿ ಧನುಶ್ರೀ ಸಾವನ್ನಪ್ಪಿದ ಘಟನೆ ಬೆನ್ನಲ್ಲೇ ಹೊಸಕೋಟೆ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲೂ ಇದೇ ರೀತಿಯ ಮತ್ತೊಂದು ಘಟನೆ ವರದಿಯಾಗಿದ್ದು, ಇಬ್ಬರು ಸಹೋದರಿಯರು ಸಾವನ್ನಪ್ಪಿರುವುದಾಗಿ ತಿಳಿದುಬಂದಿದೆ.

ಮೃತರನ್ನು ಶೈಲಾ(25) ಮತ್ತು ಆಕೆಯ ಸಹೋದರಿ ಶ್ವೇತಾ(22) ಎಂದು ಗುರುತಿಸಲಾಗಿದೆ. ಶುಕ್ರವಾರ ಮಧ್ಯಾಹ್ನ 1.45ರ ಸುಮಾರಿಗೆ ಕೈವಾರ ತಾತಯ್ಯ ದೇವಸ್ಥಾನದಿಂದ ಹೊಸಕೋಟೆಯಲ್ಲಿರುವ ತಮ್ಮ ಮನೆಗೆ ಹಿಂತಿರುಗುತ್ತಿದ್ದಾಗ ದುರ್ಘಟನೆ ಸಂಭವಿಸಿದೆ.


ರಸ್ತೆ ಕಾಮಗಾರಿ ನಡೆಯುತ್ತಿದ್ದ ಪ್ರದೇಶದಲ್ಲಿ ರಸ್ತೆಯ ಮೇಲೆ ಜಲ್ಲಿಕಲ್ಲುಗಳು ಬಿದ್ದಿದ್ದವು. ಯುವತಿಯರು ಪ್ರಯಾಣಿಸುತ್ತಿದ್ದ ದ್ವಿಚಕ್ರ ವಾಹನವು ಜಲ್ಲಿಕಲ್ಲುಗಳ ಮೇಲೆ ಹರಿದು ನಿಯಂತ್ರಣ ಕಳೆದುಕೊಂಡು ಸ್ಕಿಡ್ ಆಗಿ ಕೆಳಗೆ ಬಿದ್ದಿದೆ. ಅದೇ ಸಮಯದಲ್ಲಿ ಹಿಂಬದಿಯಿಂದ ಬರುತ್ತಿದ್ದ ಕ್ಯಾಂಟರ್ (ಸರಕು ಸಾಗಣೆ ವಾಹನ) ಕೆಳಗೆ ಬಿದ್ದಿದ್ದ ಯುವತಿಯರ ಮೇಲೆ ಹರಿದಿದೆ. ಈ ವೇಳೆ ಕ್ಯಾಂಟರ್ ಚಕ್ರಕ್ಕೆ ಸಿಲುಕಿದ್ದ ಇಬ್ಬರೂ ಯುವತಿಯರು ಸ್ಥಳದಲ್ಲೇ ದುರ್ಮರಣವನ್ನಪ್ಪಿದ್ದಾರೆ.

ಮೃತ ಯುವತಿ ಶೈಲಾ ನರ್ಸ್ ಆಗಿ ಕೆಲಸ ಮಾಡತ್ತಿದ್ದರು. ಈಕೆಯ ಸಹೋದರಿ ಶ್ವೇತಾ ನರ್ಸಿಂಗ್ ವಿದ್ಯಾರ್ಥಿನಿಯಾಗಿದ್ದರು ಎಂದು ತಿಳಿದುಬಂದಿದೆ.

ಹೊಸಕೋಟೆ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆಯ ನಂತರ ಸಂಜೆ ಮೃತದೇಹಗಳನ್ನು ಕುಟುಂಬ ಸದಸ್ಯರಿಗೆ ಹಸ್ತಾಂತರಿಸಲಾಗಿದೆ. ಏತನ್ಮಧ್ಯೆ ಘಟನೆಗೆ ಕಳಪೆ ರಸ್ತೆಯೇ ಕಾರಣ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಸ್ತೆ ಕಾಮಗಾರಿ ನಡೆಯುತ್ತಿದ್ದರೂ, ವಾಹನ ಸವಾರರ ಸುರಕ್ಷತೆಗಾಗಿ ಯಾವುದೇ ಕ್ರಮ ಕೈಗೊಂಡಿಲ್ಲ. ರಸ್ತೆಯಲ್ಲಿ ಹರಡಿದ್ದ ಜಲ್ಲಿಕಲ್ಲು ಗಳೇ ವಾಹನಗಳು ಸ್ಕಿಡ್ ಆಗಲು ಕಾರಣ. ಸಂಬಂಧಪಟ್ಟ ಅಧಿಕಾರಿಗಳು ಗುತ್ತಿಗೆದಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ದೇಶ - ವಿದೇಶ

ವಿನಾಶಕಾರಿ ವಾಯು ರಕ್ಷಣಾ ಅಸ್ತ್ರ ಸದ್ಯದಲ್ಲೇ ಪಾಕ್ ಗಡಿಗೆ ನಿಯೋಜನೆ



ನವದೆಹಲಿ: ಪಾಕಿಸ್ತಾನ ಗಡಿಯಲ್ಲಿ ಭಾರತೀಯ ಸೇನೆಯ ರಕ್ಷಣಾ ಸಾಮರ್ಥ್ಯವನ್ನು ಮತ್ತಷ್ಟು ಬಲಗೊಳಿಸಲು, ಮಿಷನ್ ಸುದರ್ಶನ ಚಕ್ರದಡಿಯಲ್ಲಿ ಎಕೆ 630 ವಾಯು ರಕ್ಷಣಾ ಗನ್ ವ್ಯವಸ್ಥೆಗಳನ್ನು ಖರೀದಿಸಲು ಭಾರತೀಯ ಸೇನೆಯು ಸರ್ಕಾರಿ ಸ್ವಾಮ್ಯದ ಅಡ್ವಾನ್ಸ್ಡ್ ವೆಪನ್ಸ್ ಅಂಡ್ ಎಕ್ವಿಪ್ಮೆಂಟ್ ಇಂಡಿಯಾ ಲಿಮಿಟೆಡ್‌ಗೆ ಟೆಂಡರ್ ನೀಡಿದೆ. ಈ ವಿನಾಶಕಾರಿ 30ಎಂಎಂ ಮಲ್ಟಿ–ಬ್ಯಾರೆಲ್ ಗನ್ ವ್ಯವಸ್ಥೆಯು ನಿಮಿಷಕ್ಕೆ 3000 ಸುತ್ತುಗಳನ್ನು ಹಾರಿಸುವ ಸಾಮರ್ಥ್ಯ ಹೊಂದಿದ್ದು, ಯುಎವಿಗಳು, ರಾಕೆಟ್‌ಗಳು ಮತ್ತು ಫಿರಂಗಿಗಳ ದಾಳಿಗಳಿಂದ ರಕ್ಷಣೆ ನೀಡಲಿದೆ.

ಏನಿದು ಮಿಷನ್ ಸುದರ್ಶನ ಚಕ್ರ?: ಆರು ಎಕೆ 630 ವಾಯು ರಕ್ಷಣಾ ಗನ್ ವ್ಯವಸ್ಥೆಗಳ ಖರೀದಿಗೆ ಸೇನೆಯು ಆರ್‌ಎಫ್‌ಪಿ (ಪ್ರಸ್ತಾಪಕ್ಕಾಗಿ ವಿನಂತಿ) ನೀಡಿದೆ.

ಈ ಗನ್ ವ್ಯವಸ್ಥೆಯನ್ನು ಟ್ರೇಲರ್‌ನಲ್ಲಿ ಅಳವಡಿಸಿ, ಹೈ–ಮೊಬಿಲಿಟಿ ವಾಹನದಿಂದ ಎಳೆಯಲಾಗುವುದು. 4 ಕಿಮೀ ವ್ಯಾಪ್ತಿಯೊಂದಿಗೆ, ಎಲ್ಲಾ ಹವಾಮಾನದಲ್ಲಿ ಕಾರ್ಯನಿರ್ವಹಿಸುವ ಎಲೆಕ್ಟ್ರೋ–ಆಪ್ಟಿಕಲ್ ಫೈರ್ ಕಂಟ್ರೋಲ್ ಸಿಸ್ಟಮ್‌ನಿಂದ ಗುರಿಗಳನ್ನು ಪತ್ತೆ ಹಚ್ಚಿ ದಾಳಿ ಮಾಡಲಿದೆ.

ಇಟಲಿಯಲ್ಲಿ ಅಪಘಾತ: ಭಾರತದ ಉದ್ಯಮಿ ದಂಪತಿ ಸಾವು



ರೋಮ್: ಇಟಲಿಯಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಭಾರತೀಯ ಮೂಲದ ಉದ್ಯಮಿ ಮತ್ತು ಆತನ ಪತ್ನಿ ಬಲಿಯಾಗಿದ್ದಾರೆ. ನಾಗ್ಪುರ ಮೂಲದ ಹೋಟೆಲಿಯರ್ ಜಾವೇದ್ ಅಖ್ತರ್ (55) ಮತ್ತು ಅವರ ಪತ್ನಿ ನಾಡಿರಾ ಗುಲ್ಶನ್ (47) ಮೃತಪಟ್ಟಿದ್ದಾರೆ. ಇವರು ತಮ್ಮ ಮೂವರು ಮಕ್ಕಳೊಂದಿಗೆ (ಅರ್ಜೂ ಅಖ್ತರ್, ಶಿಫಾ ಅಖ್ತರ್ ಹಾಗೂ ಮಗ ಜಾಝೀಲ್ ಅಖ್ತರ್) ಪ್ರಯಾಣಿಸುತ್ತಿದ್ದರು. ಗ್ರೊಸೆಟೊ ಬಳಿಯ ಔರೆಲಿಯಾ ಹೆದ್ದಾರಿಯಲ್ಲಿ ಅಪಘಾತ ಸಂಭವಿಸಿದೆ.

ಕುಟುಂಬವು ನಾಗ್ಪುರದ ಸೀತಾಬುಲ್ಡಿ ಫ್ಲೈಓವರ್ ಬಳಿಯ ಗುಲ್ಶನ್ ಪ್ಲಾಜಾ ಹೋಟೆಲ್ ಹೊಂದಿದೆ. ಇಟಲಿ ತಲುಪುವ ಮೊದಲು ಸೆ.22ರಂದು ಫ್ರಾನ್ಸ್‌ನಲ್ಲಿ ರಜಾ ದಿನಗಳನ್ನು ಕಳೆದಿದ್ದರು. ಏಷ್ಯನ್ ಮೂಲದ ಪ್ರವಾಸಿಗರನ್ನು ಹೊತ್ತ ವ್ಯಾನ್ ಮತ್ತು ಮಿನಿ ಬಸ್ ಅಪಘಾತದಲ್ಲಿ ಸಾವನ್ನಪ್ಪಿದ ಮೂವರಲ್ಲಿ ನಾಗ್ಪುರ ದಂಪತಿ ಸೇರಿದ್ದಾರೆ. ಮಿನಿಬಸ್ ಚಾಲಕ ಮತ್ತು ಭಾರತದ ದಂಪತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ದಂಪತಿ ಮಗಳು ಅರ್ಜೂ ಅಪಘಾತದಲ್ಲಿ ತಲೆಗೆ ತೀವ್ರ ಪೆಟ್ಟು ಬಿದ್ದು ಗಾಯಗೊಂಡಿದ್ದಾಳೆ. ಆಕೆಯನ್ನು ಸಿಯೆನಾದ ಲೀ ಸ್ಕಾಟ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸಂಭಾಲ್ ಮಸೀದಿ ನೆಲಸಮಕ್ಕೆ ತಡೆ ನೀಡಲು ಅಲಹಾಬಾದ್ ಹೈಕೋರ್ಟ್ ನಕಾರ



ಲಖನೌ: ಉತ್ತರಪ್ರದೇಶದ ಸಂಭಾಲ್‌ನಲ್ಲಿ ಸರ್ಕಾರಿ ಭೂಮಿಯಲ್ಲಿ ನಿರ್ಮಿಸಲಾಗಿದೆ ಎನ್ನಲಾದ ಮಸೀದಿ, ಮದುವೆ ಸಭಾಂಗಣ ಮತ್ತು ಆಸ್ಪತ್ರೆಯನ್ನು ಬುಲ್ಡೋಜರ್ ಮೂಲಕ ನೆಲಸಮ ಮಾಡುವುದಕ್ಕೆ ತಡೆ ನೀಡಲು ಅಲಹಾಬಾದ್ ಹೈಕೋರ್ಟ್ ಶನಿವಾರ ನಿರಾಕರಿಸಿದ್ದು, ಮುಸ್ಲಿಂ ಪಕ್ಷ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದೆ. ಕೆರೆ ಒತ್ತುವರಿ ಮಾಡಿಕೊಂಡು ನಿರ್ಮಿಸಲಾದ ಮಸೀದಿ, ಮದುವೆ ಮಂಟಪ ಮತ್ತು ಆಸ್ಪತ್ರೆ ನೆಲಸಮ ಆದೇಶಕ್ಕೆ ತಡೆ ನೀಡುವಂತೆ ಕೋರಿ, ಮಸೀದಿ ಷರೀಫ್ ಗೌಸುಲ್ ವಾರಾ ರಾವಾ ಬುಜುರ್ಗ್ ಮತ್ತು ಮಸೀದಿಯ ಮುತವಲ್ಲಿ ಮಿಂಜಾರ್ ಪರವಾಗಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಜಿಲ್ಲಾಡಳಿತದ ಮೂಲಗಳ ಪ್ರಕಾರ, ಸಂಭಾಲ್ ಜಿಲ್ಲಾ ಕೇಂದ್ರದಿಂದ 30 ಕಿ.ಮೀ ದೂರದಲ್ಲಿರುವ ಅಸ್ಮೋಲಿ ಪ್ರದೇಶದ ರಾಯನ್ ಬುಜುರ್ಗ್ ಗ್ರಾಮದಲ್ಲಿ ಈ ಮಸೀದಿ ಯನ್ನು ನಿರ್ಮಿಸಲಾಗಿದೆ. ಎರಡೂ ಕಡೆಯ ವಾದಗಳನ್ನು ಆಲಿಸಿದ ನಂತರ, ನ್ಯಾಯಾಲಯವು ಅರ್ಜಿಯನ್ನು ವಿಲೇವಾರಿ ಮಾಡಿದ್ದು, ಮಸೀದಿ ಸಮಿತಿಗೆ ವಿಚಾರಣಾ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವಂತೆ ನಿರ್ದೇಶಿಸಿತು.

ಅಮೆರಿಕದಲ್ಲಿ ಮತ್ತೊಬ್ಬ ಭಾರತೀಯ ಡೆಂಟಲ್ ವಿದ್ಯಾರ್ಥಿಗೆ ಗುಂಡಿಟ್ಟು ಹತ್ಯೆ



ಟೆಕ್ಸಾಸ್: ಅಮೆರಿಕದಲ್ಲಿ ಭಾರತೀಯರ ಮೇಲಿನ ದಾಳಿ ಮುಂದುವರಿದಿದೆ. ಇತ್ತೀಚೆಗೆ ಕರ್ನಾಟಕ ಮೂಲದ ಚಂದ್ರಮೌಳಿ ನಾಗಮಲ್ಲಯ್ಯನ ಹತ್ಯೆ ಪ್ರಕರಣದ ಬೆನ್ನಲ್ಲೇ ಇದೀಗ ಹೈದರಾಬಾದ್ ಮೂಲದ ಡೆಂಟಲ್ ವಿದ್ಯಾರ್ಥಿಗೆ ಗುಂಡಿಟ್ಟು ಹತ್ಯೆ ಮಾಡಿದ ಘಟನೆ ಟೆಕ್ಸಾಸ್‌ನ ಡಲ್ಲಾಸ್ ಬಳಿ ನಡೆದಿದೆ. ನಾರ್ತ್ ಟೆಕ್ಸಾಸ್ ವಿಶ್ವವಿದ್ಯಾಲಯದಲ್ಲಿ ಡೆಂಟಲ್ ಸರ್ಜರಿ ಪದವಿ ಓದುತ್ತಿದ್ದ ಹೈದರಾಬಾದ್ ಮೂಲದ ಚಂದ್ರಶೇಖರ್ ಪೋಲೆ ಹತ್ಯೆಯಾಗಿದ್ದಾನೆ. ಅಪರಿಚಿತ ವ್ಯಕ್ತಿಯ ಗುಂಡಿನ ದಾಳಿಗೆ ಚಂದ್ರಶೇಖರ್ ಬಲಿಯಾಗಿದ್ದಾನೆ. ಚಂದ್ರಶೇಖರ್ ಪೋಲೆ 2023ರಿಂದ ಅಮೆರಿಕದ ಟೆಕ್ಸಾಸ್‌ನಲ್ಲಿ ಡೆಂಟಲ್ ಸರ್ಜರಿ ಪದವಿ ಓದುತ್ತಿದ್ದರು. 6 ತಿಂಗಳ ಹಿಂದೆ ಡೆಂಟಲ್ ಪದವಿ ಪೂರ್ಣಗೊಂಡಿತ್ತು. ಇದರ ನಡುವೆ ಗ್ಯಾಸ್ ಸ್ಟೇಶನ್‌ನಲ್ಲಿ ಪಾರ್ಟ್ ಟೈಮ್ ಕೆಲಸ ಮಾಡಿಕೊಂಡಿದ್ದ ಚಂದ್ರಶೇಖರ್ ಅಮೆರಿಕದಲ್ಲಿ ಡೆಂಟಲ್ ಸರ್ಜನ್ ಆಗಿ ಕೆಲಸ ಹುಡುಕುತ್ತಿದ್ದರು. ಇದರ ನಡುವೆ ಈಗ ಹತ್ಯೆಯಾಗಿದ್ದಾನೆ.

ಅಮೆರಿಕ ಮಾಧ್ಯಮಗಳ ಪ್ರಕಾರ ಆಫ್ರಿಕಾ–ಅಮೆರಿಕನ್ ಮೂಲದ ವ್ಯಕ್ತಿಯಿಂದ ಗುಂಡಿನ ದಾಳಿಯಾಗಿದೆ. ಗ್ಯಾಸ್ ಸ್ಟೇಶನ್‌ನಲ್ಲಿ ಅವರು ಕರ್ತವ್ಯದಲ್ಲಿದ್ದ ವೇಳೆ ಈ ಗುಂಡಿನ ದಾಳಿಯಾಗಿದ್ದು, ಸ್ಥಳದಲ್ಲೇ ಚಂದ್ರಶೇಖರ್ ಮೃತಪಟ್ಟಿದ್ದಾನೆ.

ಒತ್ತೆಯಾಳುಗಳ ಬಿಡುಗಡೆಗೆ ಹಮಾಸ್ ಒಪ್ಪಿಗೆ; ಟ್ರಂಪ್ ಸ್ವಾಗತ



ನವದೆಹಲಿ: ಎರಡು ವರ್ಷಗಳ ಇಸ್ರೇಲ್–ಹಮಾಸ್ ಯುದ್ಧ ಇದೀಗ ಅಂತಿಮ ಹಂತ ತಲುಪಿದ್ದು, ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ 20 ಅಂಶಗಳ ಗಾಜಾ ಶಾಂತಿ ಒಪ್ಪಂದವನ್ನು ಇಸ್ರೇಲ್ ಒಪ್ಪಿಕೊಂಡ ಬಳಿಕ ಹಮಾಸ್ ಉಗ್ರ ಸಂಘಟನೆ ಕೂಡ ಭಾಗಶಃ ಒಪ್ಪಿಕೊಂಡಿರುವ ಬೆಳವಣಿಗೆಗಳು ಕಂಡು ಬಂದಿದೆ.

ಟ್ರಂಪ್ ಶಾಂತಿ ಒಪ್ಪಂದದ ಬಗ್ಗೆ ಪ್ರತಿಕ್ರಿಯೆ ನೀಡಿರುವ ಹಮಾಸ್, ತಮ್ಮ ಹಿಡಿತದಲ್ಲಿರುವ ಇಸ್ರೇಲಿ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲು ಒಪ್ಪಿಗೆ ನೀಡಿದೆ. ಹಾಗೆಯೇ ಅಧಿಕಾರವನ್ನು ಪ್ಯಾಲೆಸ್ಟೈನ್‌ಗೆ ಹಸ್ತಾಂತರಿಸಲು ಸಿದ್ಧವಾಗಿದೆ. ಆದರೆ, ಮಾತುಕತೆಯ ಷರತ್ತನ್ನು ವಿಧಿಸಿದೆ. ಈ ನಡುವೆ ಹಮಾಸ್ ಹೇಳಿಕೆಯನ್ನು ಸ್ವಾಗತಿಸಿರುವ ಡೊನಾಲ್ಡ್ ಟ್ರಂಪ್, ಶಾಶ್ವತ ಶಾಂತಿಗೆ ಸಿದ್ಧರಾಗಿದ್ದಾರೆಂದು ನಾನು ನಂಬುತ್ತೇನೆ. ಇಸ್ರೇಲ್ ಗಾಜಾದ ಮೇಲೆ ನಡೆಸುತ್ತಿರುವ ಬಾಂಬ್ ದಾಳಿಯನ್ನು ತಕ್ಷಣವೇ ನಿಲ್ಲಿಸಬೇಕು. ಇದರಿಂದ ನಾವು ಒತ್ತೆಯಾಳುಗಳನ್ನು ಸುರಕ್ಷಿತವಾಗಿ ಮತ್ತು ತ್ವರಿತವಾಗಿ ಹೊರತರಬಹುದು. ಇದೀಗ, ಹಾಗೆ ಮಾಡುವುದು ತುಂಬಾ ಅಪಾಯಕಾರಿ. ನಾವು ಈಗಾಗಲೇ ವಿವರಗಳ ಕುರಿತು ಚರ್ಚೆಯಲ್ಲಿದ್ದೇವೆ. ಇದು ಗಾಜಾ ಬಗ್ಗೆ ಮಾತ್ರವಲ್ಲ, ಮಧ್ಯಪ್ರಾಚ್ಯದಲ್ಲಿ ಬಹುಕಾಲದಿಂದ ಬಯಸುತ್ತಿರುವ ಶಾಂತಿಯ ಬಗ್ಗೆ ಎಂದು ಹೇಳಿದ್ದಾರೆ.

ಮೈಸೂರು ಮಿತ್ರ

ಕೆ.ಆರ್.ಪೇಟೆಯಲ್ಲಿ ಶೋಭಾಯಾತ್ರೆ ಮೂಲಕ ಮಹಾಗಣಪತಿ ವಿಸರ್ಜನೆ

ದಸರಾ ಮೆರವಣಿಗೆ ನೆನಪಿಸಿದ, ಸ್ತಬ್ದ ಚಿತ್ರಗಳು, ಕಲಾತಂಡಗಳು, ಡಿಜೆ ನೃತ್ಯ

ಕೆ.ಆರ್.ಪೇಟೆ, ಅ.4– ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳ ಸಹಯೋಗದೊಂದಿಗೆ ಪಟ್ಟಣದ ಬಸ್ ನಿಲ್ದಾಣದ ಬಳಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಭವ್ಯ ಮಂಟಪದಲ್ಲಿ ಪ್ರತಿಷ್ಠಾಪಿಸಿದ್ದ 12ನೇ ವರ್ಷದ ಹಿಂದೂ ಮಹಾ ಗಣಪತಿಯ ವಿಸರ್ಜನಾ ಕಾರ್ಯಕ್ರಮ ಮತ್ತು ಶೋಭಾಯಾತ್ರೆಯು ದಸರಾ ಮೆರವಣಿಗೆಯ ಮಾದರಿಯಲ್ಲಿ ಕೆ.ಆರ್.ಪೇಟೆ ಪಟ್ಟಣದಲ್ಲಿ ಶನಿವಾರ ವಿಜೃಂಭಣೆಯಿಂದ ನಡೆಯಿತು.

ಶಾಸಕ ಹೆಚ್.ಟಿ.ಮಂಜು ಅವರು ತೆಂಡೇಕೆರೆ ಬಾಳೆಹೊನ್ನೂರು ಶಾಖಾ ಮಠದ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮೀಜಿಯವರ ಸಮ್ಮುಖದಲ್ಲಿ ಗಣೇಶೋತ್ಸವಕ್ಕೆ ಹಾಗೂ ಶೋಭಾಯಾತ್ರೆಗೆ ಗಣೇಶನಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್, ಮನ್‌ಮುಲ್ ನಿರ್ದೇಶಕ ಡಾಲು ರವಿ, ಸೇರಿದಂತೆ ಹಲವು ಗಣ್ಯರು ಗಣೇಶೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಪಟ್ಟಣದ ಪ್ರಮುಖ ರಾಜಬೀದಿಗಳಲ್ಲಿ ನಡೆದ ಶೋಭಾಯಾತ್ರೆಯಲ್ಲಿ ಮಂಗಳವಾದ್ಯ, ವಿವಿಧ ಸಾಂಸ್ಕೃತಿಕ ಕಲಾ ತಂಡಗಳು, ಐಡ್ರಾಲಿಕ್ ಡಿಜೆ, ನಾಸಿಕ್ ಡೋಲು ನಾದ, ಡೊಳ್ಳು ಕುಣಿತ, ಪೂಜಾ ಕುಣಿತ, ಗೊಂಬೆಗಳ ಕುಣಿತ ಇತ್ಯಾದಿ ವಿವಿಧ ಪ್ರಾಕಾರದ ಜಾನಪದ ಕಲಾ ತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದವು.

ಭಾರತಾಂಭೆ, ಶ್ರೀರಾಮ, ಶ್ರೀ ಆಂಜನೇಯಸ್ವಾಮಿ, ಛತ್ರಪತಿ ಶಿವಾಜಿ ಮಹಾರಾಜ್, ಡಾ.ಬಿ.ಆರ್.ಅಂಬೇಡ್ಕರ್, ನಾಡಪ್ರಭು ಕೆಂಪೇಗೌಡ, ಸಂಗೊಳ್ಳಿ ರಾಯಣ್ಣ, ವೀರಮದಕರಿ ನಾಯಕ ಸೇರಿದಂತೆ ವಿವಿಧ ಮಹನೀಯರ ಸ್ತಬ್ದ ಚಿತ್ರಗಳು ಮೆರವಣಿಗೆಯಲ್ಲಿ ಸಾಗಿದ್ದು ದಸರಾ ಸಡಗರವನ್ನು ನೆನಪಿಸುವಂತಿತ್ತು. ಶೋಭಾಯಾತ್ರೆಯಲ್ಲಿ ಯುವತಿಯರಿಗೆ ಮತ್ತು ಯುವಕರಿಗೆ ಪ್ರತ್ಯೇಕ ಐಡ್ರಾಲಿಕ್ ಡಿಜೆ ವ್ಯವಸ್ಥೆ ಮಾಡಲಾಗಿತ್ತು.


ಮಹಾಗಣಪತಿಯ ವಿಸರ್ಜನಾ ಕಾರ್ಯಕ್ರಮದಲ್ಲಿ ಶೋಭಾಯಾತ್ರೆ ವಿಜೃಂಭಣೆಯಿಂದ ನಡೆಯಿತು.

ಯುವಕರು ಮತ್ತು ಯುವತಿಯರು ಡಿಜೆ ಸದ್ದಿಗೆ ಹೆಜ್ಜೆ ಹಾಕುವ ಮೂಲಕ ಗಣೇಶೋತ್ಸವದ ಸಂಭ್ರಮದಲ್ಲಿ ಭಾಗಿಯಾಗಿ ನೃತ್ಯದಲ್ಲಿ ಮಾಡಿ ಸಂಭ್ರಮಿಸಿದರು.

ಶೋಭಾಯಾತ್ರೆಯು ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಆರಂಭವಾಗಿ ಪ್ರವಾಸಿ ಮಂದಿರ ವೃತ್ತ, ತಾಲೂಕು ಆಸ್ಪತ್ರೆ ರಸ್ತೆಯ ಮೂಲಕ ಸಾಗಿ, ಪುನಃ ಅದೇ ಮಾರ್ಗದಲ್ಲಿ ಸಾಗಿದ ಮೆರವಣಿಗೆಯು ಪೊಲೀಸ್ ಠಾಣೆ ರಸ್ತೆ, ಹಳೆ ಪುರಸಭಾ ಕಚೇರಿ, ಬೋರಲಿಂಗೇಗೌಡ ವೃತ್ತ, ಅಂಬೇಡ್ಕರ್ ನಗರ, ಬಸವೇಶ್ವರನಗರ, ದುರ್ಗಾಭವನ್ ಸರ್ಕಲ್, ಮುಕ್ಕಟ್ಟೆ ಚೌಕ, ಮೂಡಲ ಆಂಜನೇಯಸ್ವಾಮಿ ದೇವಸ್ಥಾನದ ಮೂಲಕ ಸಾಗಿ ದೇವಿರಮ್ಮಣ್ಣಿ ಕೆರೆಯವರೆಗೆ ಕಲಾತಂಡಗಳು ಮೆರವಣಿಗೆಯಲ್ಲಿ ಸಾಗಿ ಸಾರ್ವಜನಿಕರ ಮೆಚ್ಚುಗೆಗಳಿಸಿದವು. ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ್ದ ಭಕ್ತಾಧಿಗಳು ಶೋಭಾ ಯಾತ್ರೆಯಲ್ಲಿ ಭಾಗವಹಿಸಿ, ಗಣೇಶನ ದರ್ಶನ ಪಡೆದು, ಕಲಾತಂಡಗಳ ಪ್ರದರ್ಶನವನ್ನು ವೀಕ್ಷಣೆ ಮಾಡಿ ಸಂಭ್ರಮಿಸಿದರು.

ಭಜರಂಗದಳ, ವಿಶ್ವಹಿಂದೂಪರಿಷತ್ ಸೇರಿದಂತೆ ವಿವಿಧ ಹಿಂದೂಪರ ಸಂಘಟನೆಗಳ ಮುಖಂಡರಾದ ಆರ್.ಬಾಲಸುಬ್ರಹ್ಮಣ್ಯಂ, ಮುರುಗೇಶ್, ನಟರಾಜ್, ಭಾಸ್ಕರ್ ರಾಜೇ ಅರಸ್, ಅಗ್ರಹಾರಬಾಚಹಳ್ಳಿ ಗ್ರಾಪಂ ಅಧ್ಯಕ್ಷ ಎ.ಸಿ.ದಿವಿಕುಮಾರ್, ಮಹೇಂದ್ರ, ಕುಮಾರ್ ಸೇರದಂತೆ ಹಲವು ಮುಖಂಡರು ಗಣೇಶೋತ್ಸವ ಹಾಗೂ ಶೋಭಾಯಾತ್ರೆಯ ಉಸ್ತುವಾರಿ ವಹಿಸಿದ್ದರು.

ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ್ ಬಾಲದಂಡಿ, ನಾಗಮಂಗಲ ಡಿವೈಎಸ್‌ಪಿ ಚೆಲುವರಾಜು ಅವರ ನೇತೃತ್ವದಲ್ಲಿ ಮೆರವಣಿಗೆಗೆ ಸುಮಾರು 500ಕ್ಕೂ ಹೆಚ್ಚು ಪೊಲೀಸರ ತಂಡವು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪಟ್ಟಣದಲ್ಲಿ ಬಿಗಿ ವ್ಯಾಪಕ ಬಂದೋಬಸ್ತ್ ಮಾಡಿತ್ತು.

ನಂದಿನಿ ಪಾರ್ಲರ್ ಉದ್ಘಾಟನೆ


ಚಿನಕುರಳಿಯಲ್ಲಿ ನಂದಿನಿ ಬೂತನ್ನು ಸಿ.ಎಸ್.ಪುಟ್ಟರಾಜು ಉದ್ಘಾಟಿಸಿದರು.

ಚಿನಕುರಳಿ, ಅ.4– ಚಿನಕುರಳಿ ಗ್ರಾಮದಲ್ಲಿ ನೂತನವಾಗಿ ಆರಂಭ ಗೊಂಡ ಮನ್‌ಮುಲ್ ಉತ್ಪನ್ನಗಳ ಮಾರಾಟ ಕೇಂದ್ರವಾದ ನಂದಿನಿ ಪಾರ್ಲರ್‌ನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಮನ್‌ಮುಲ್ ಒಕ್ಕೂಟದ ವತಿಯಿಂದ ಆರಂಭಗೊಂಡ ನಂದಿನಿ ಪಾರ್ಲರ್‌ನ್ನು ಚಿನಕುರಳಿ ಗ್ರಾಮದಲ್ಲಿ ಆರಂಭಿಸಲಾಗಿದೆ. ಮನ್‌ಮಲ್ ಒಕ್ಕೂಟವು ಮಾದರಿಯಾಗಿ ಕೆಲಸ ಮಾಡುತ್ತಿದ್ದು ಸಾವಿರಾರೂ ರೈತರ ಬದುಕಿನ ಆರ್ಥಿಕ ಸಬಲೀಕರಣಕ್ಕೆ ಸಹಕಾರಿಯಾಗಿದ್ದಾರೆ. ಮುಂದಿನ ದಿನಗಳಲ್ಲಿ ನಂದಿನಿ ಪಾರ್ಲರ್‌ಗಳನ್ನು ತಾಲೂಕಿನ ವಿವಿಧೆಡೆ ಆರಂಭಿಸುವ ಕೆಲಸ ಮಾಡಲಿ ಎಂದು ಶುಭಹಾರೈಸಿದರು.

ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಮಾತನಾಡಿ, ನಂದಿನಿ ಹಾಲಿನ ಉತ್ಪನ್ನಗಳ ಸಿಹಿತಿಂಡಿಗಳನ್ನು ಮಾರಾಟ ಮಾಡುವ ನಂದಿನಿ ಪಾರ್ಲರ್‌ನ್ನು ಚಿನಕುರಳಿಯಲ್ಲಿ ಆರಂಭಿಸಲಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಜನ ಸಂದಣಿ ಹೊಂದಿರುವ ರೈಲ್ವೇನಿಲ್ದಾಣ, ಟೌನ್ ಸೇರಿದಂತೆ ವಿವಿಧೆಡೆ ಆರಂಭಿಸಲಾಗುವುದು ಎಂದು ಭರವಸೆ ನೀಡಿದರು.

ಇದೇ ವೇಳೆ ರಾಷ್ಟ್ರಪಿತಿ ಮಹಾತ್ಮ ಗಾಂಧಿ ಜಯಂತಿ ಅಂಗವಾಗಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಮಹಾತ್ಮ ಗಾಂಧೀಜೀ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಶುಭಕೋರಿದರು.

ಚಿನಕುರಳಿ ಸೊಸೈಟಿ ಅಧ್ಯಕ್ಷ ಸಿ.ಎಸ್.ಗೋಪಾಲಗೌಡ, ಮನ್‌ಮಲ್ ವ್ಯವಸ್ಥಾಪಕ ನಿರ್ದೇಶಕ ಮಂಜೇಶ್, ಉಪವ್ಯವಸ್ಥಾಪಕ ಆರ್.ಪ್ರಸಾದ್, ಪಾರ್ಲರ್ ಮಾಲೀಕರಾದ ಗಜೇಂದ್ರ ಮಂಜುನಾಥ್ ಸೇರಿದಂತೆ ಅಧಿಕಾರಿ ವರ್ಗ, ಸಿಬ್ಬಂದಿಗಳು ಹಾಜರಿದ್ದರು.

ಶ್ರೀರಂಗಪಟ್ಟಣ ಟಿಎಪಿಸಿಎಂಎಸ್ ಚುನಾವಣೆ

ಎಲ್ಲಾ ಸ್ಥಾನಗಳಲ್ಲೂ ಗೆದ್ದು ಅಧಿಕಾರ ಹಿಡಿದ ಕಾಂಗ್ರೆಸ್


ಟಿಎಪಿಸಿಎಂಎಸ್ ಚುನಾವಣೆಯಲ್ಲಿ ಜಯಭೇರಿ ಭಾರಿಸಿದ ಕಾಂಗ್ರೆಸ್ ಪಕ್ಷದ ನಿರ್ದೇಶಕರನ್ನು ಅಭಿನಂದಿಸಲಾಯಿತು.

ಶ್ರೀರಂಗಪಟ್ಟಣ: ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ (ಟಿಎಪಿಸಿಎಂಎಸ್)ದ 5 ವರ್ಷಗಳ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಗಳಿಗೆ ಶನಿವಾರ ನಡೆದ ಚುನಾವಣೆಯಲ್ಲಿ ಎಲ್ಲ 12 ಸ್ಥಾನಗಳಲ್ಲೂ ಕಾಂಗ್ರೆಸ್ ಬೆಂಬಲಿಗರು ಜಯಗಳಿಸುವ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿದಿದ್ದಾರೆ.

'ಬಿ' ತರಗತಿ ಮತ ಕ್ಷೇತ್ರದ 8 ಸ್ಥಾನಗಳಲ್ಲೂ ಕಾಂಗ್ರೆಸ್ ಬೆಂಬಲಿಗರು ಜಯ ಸಾಧಿಸಿದ್ದಾರೆ. ಸಾಮಾನ್ಯ ಕ್ಷೇತ್ರಗಳಿಂದ ಬಿ.ಎಸ್.ಸಂದೇಶ್ (1122), ಎಂ. ನಂದೀಶ್ (1191), ಬಿಸಿಎಂ ಬಿ ಕ್ಷೇತ್ರದಿಂದ ಬಿ.ಎಸ್.ಚಂದ್ರಶೇಖರ್ (1080), ಮಹಿಳಾ ಮೀಸಲು ಕ್ಷೇತ್ರದಿಂದ ಸುಚಿತ್ರ ಎಚ್.ಸಿ.(939), ಪದ್ಮಮ್ಮ (899), ಬಿಸಿಎಂ ಎ ಕ್ಷೇತ್ರದಿಂದ ಎಲ್. ನಾಗರಾಜು (1007), ಪರಿಶಿಷ್ಟ ಪಂಗಡ ಕ್ಷೇತ್ರದಿಂದ ನಾಗರಾಜು (809), ಪರಿಶಿಷ್ಟ ಜಾತಿ ಕ್ಷೇತ್ರದಿಂದ ಶಿವಯ್ಯ (906) ಆಯ್ಕೆಯಾಗಿದ್ದಾರೆ.

'ಎ' ತರಗತಿಯ ಮತ ಕ್ಷೇತ್ರಗಳಿಂದ ಸ್ಪರ್ಧಿಸಿದ್ದ ಕಾಂಗ್ರೆಸ್ ಬೆಂಬಲಿಗರಾದ ಕೆ.ಜೆ. ರವಿಶಂಕರ್ (16), ಎಸ್.ಎಂ.ನಾಗರಾಜು (13), ಟಿ.ಕೆ. ಯತೀಶ್ (13) ಹಾಗೂ ಎಸ್. ಜೆ. ವೆಂಕಟರಾಮು (13) ಜಯ ಸಾಧಿಸಿದ್ದಾರೆ.

ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಸರ್ಕಾರಿ ಜೂನಿಯರ್ ಕಾಲೇಜಿನ ಮತ ಎಣಿಕೆ ಕೇಂದ್ರದ ಮುಂದೆ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು. ಸೆಸ್ಕ್ ಅಧ್ಯಕ್ಷ ಹಾಗೂ ಶಾಸಕ ರಮೇಶ ಬಂಡಿಸಿದ್ದೇಗೌಡ ಅವರ ಪರ ಘೋಷಣೆ ಕೂಗಿದರು.

'ಟಿಎಪಿಸಿಎಂಎಸ್ ತಾಲೂಕಿನ ದೊಡ್ಡ ಸಹಕಾರಿ ಕ್ಷೇತ್ರದ ಸಂಸ್ಥೆ. ಸಹಸ್ರಾರು ಮಂದಿ ಸದಸ್ಯರಿದ್ದು, 12 ಸ್ಥಾನಗಳಲ್ಲೂ ಕಾಂಗ್ರೆಸ್ ಬೆಂಬಲಿಗರನ್ನು ಗೆಲ್ಲಿಸಿಕೊಟ್ಟಿದ್ದಾರೆ. ಸದಸ್ಯರ ನಿರೀಕ್ಷೆಗೆ ತಕ್ಕಂತೆ ಸಂಘವನ್ನು ಪ್ರಗತಿಪಥದಲ್ಲಿ ಕೊಂಡೊಯ್ಯಲಾಗುವುದು' ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ತಿಳಿಸಿದರು.

ಡಿಕೆಶಿ ಸಿಎಂ ಆಗಬೇಕೆಂದು ಬಯಸುತ್ತೇನೆ: ಸಚಿವ ಜಮೀರ್



ಮಂಡ್ಯ, ಅ.4– ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಬೇಕೆಂದು ಬಯಸುತ್ತೇನೆ. ಅವರು ಸಿಎಂ ಆಗಬೇಕೆಂಬ ಆಸೆ ನನಗೂ ಇದೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಖುರ್ಚಿ ಖಾಲಿ ಇಲ್ಲ. ಈ ನಿಟ್ಟಿನಲ್ಲಿ ಸಿದ್ದರಾಮಯ್ಯ ಅವರೇ ಈ ಅವಧಿ ಪೂರೈಸಲಿದ್ದು ನವೆಂಬರ್ ನಲ್ಲಿ ಸಚಿವ ಸಂಪುಟ ಪುನರ್ ರಚನೆ ಆಗಲಿದೆ ಎಂದು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ತಿಳಿಸಿದರು.

ಶನಿವಾರ ಮಂಡ್ಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿಯಾಗಬೇಕೆಂದು ಎಲ್ಲರಿಗೂ ಆಸೆ ಇದೆ. ನಮಗೂ ಅವಕಾಶ ಸಿಗಬೇಕು ಅನ್ನೋದು ತಪ್ಪಲ್ಲ. ಇದರ ತೀರ್ಮಾನ ಹೈಕಾಮಂಡ್‌ಗೆ ಬಿಟ್ಟ ವಿಚಾರವಾಗಿದ್ದು, ನವೆಂಬರ್‌ನಲ್ಲಿ ಕೆಲವರು ಹೇಳಿದಂತೆ ಯಾವ ಕ್ರಾಂತಿ ಸಹ ಆಗುವುದಿಲ್ಲ. ಈ ಅವಧಿಯಲ್ಲಿ ಸಿದ್ದರಾಮಯ್ಯ 5 ವರ್ಷ ಪೂರೈಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನವೆಂಬರ್‌ಗೆ ಯಾವ ಕ್ರಾಂತಿ ಇಲ್ಲ, ಮುಖ್ಯಮಂತ್ರಿ ಖುರ್ಚಿಯಲ್ಲಿ ಸಿದ್ದರಾಮಯ್ಯ ಕೂರಲಿದ್ದಾರೆಂದು ಸ್ವತ: ಡಿ.ಕೆ.ಶಿವಕುಮಾರ್ ಕೂಡ ಹೇಳಿದ್ದಾರೆ. ಸಿದ್ದರಾಮಯ್ಯ ಸಹ ಮೊನ್ನೆ ಮೈಸೂರಿನಲ್ಲಿ ಐದು ವರ್ಷ ನಾನೇ ಸಿಎಂ ಎಂದಿದ್ದಾರೆ. ನಮ್ಮದು ಹೈಕಮಾಂಡ್ ಪಕ್ಷ. ತೀರ್ಮಾನ ಎಲ್ಲ ಹೈಕಮಾಂಡ್ ಮಾಡುತ್ತದೆ. ಹೈಕಮಾಂಡ್ ತೀರ್ಮಾನಕ್ಕೆ ನಾವು ಬದ್ದ ಎಂದರು.

ಅವರವರ ಬೆಂಬಲಿಗರಿಗೆ ಮುಖ್ಯಮಂತ್ರಿ ಆಗಬೇಕು ಅನ್ನೋದು ಆಸೆ ಇರುತ್ತದೆ. ನಮ್ಮ ಅಧ್ಯಕ್ಷರೇ ಯಾರ ಬಗ್ಗೆ ಮಾತನಾಡಬಾರದು ಅಂತ ಸೂಚನೆ ಕೊಟ್ಟಿದ್ದಾರೆ. ವ್ಯಕ್ತಿಗಿಂತ ಪಕ್ಷ ಮುಖ್ಯ. ಯಾರಾದರೂ ಮಾತನಾಡಿದರೆ ಕ್ರಮಕ್ಕೆ ಸೂಚನೆ ಕೊಟ್ಟಿದ್ದಾರೆ. ಈಗಾಗಲೇ ಹಲವರಿಗೆ ನೋಟೀಸ್ ಕೊಟ್ಟಿದ್ದಾರೆ ಎಂದು ತಿಳಿಸಿದರು.

ಈ ಬಾರಿ ದಸರಾ ಜಂಬೂ ಸವಾರಿ ವೇಳೆ ಯಾವುದೇ ಲೋಪಗಳಾಗಿಲ್ಲ ಎಂದು ಅವರು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅ.17 ರಂದು ಬೃಹತ್ ಉದ್ಯೋಗ ಮೇಳ

ಮಂಡ್ಯ, ಅ.4– ಬೆಂಗಳೂರು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ ಹಾಗೂ ಜಿಲ್ಲಾಡಳಿತ, ಜಿಪಂ ಮತ್ತು ಮೈಸೂರು ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಅ.17 ರಂದು ಬೆಳಿಗ್ಗೆ 9 ಗಂಟೆಗೆ ಬೃಹತ್ ಉದ್ಯೋಗಮೇಳ, ಯುವ ಸಮೃದ್ಧಿ ಸಮ್ಮೇಳನವನ್ನು ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದೆ.

ಆಸಕ್ತಿ ಇರುವ ಅಭ್ಯರ್ಥಿಗಳು ಮೇಲ್ಕಂಡ ದಿನಾಂಕದಂದು ತಮ್ಮ ಎಲ್ಲಾ ಸ್ವ–ವಿವರ (Resume) ಪತ್ರಗಳ ಜೆರಾಕ್ಸ್ ಮತ್ತು ಆಧಾರ್ ಕಾರ್ಡ್ ನಕಲು ಪ್ರತಿಯೊಂದಿಗೆ ಬಂದು ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ಲಿಂಕ್ https://udyogamela.ksdckarnataka.com ಬಳಸಿಕೊಂಡು ಉದ್ಯೋಗಮೇಳದಲ್ಲಿ ಭಾಗವಹಿಸಲು ಇಚ್ಚಿಸುವ ಆಸಕ್ತರು ತಮ್ಮ ಸ್ವ–ವಿವರವನ್ನು ನೊಂದಯಿಸಿಕೊಳ್ಳಬಹುದಾಗಿದೆ.

ಒಂದನೇ ಪುಟದಿಂದ

ಡಿಸಿಎಂ ಡಿಕೆಶಿ ಸಿಡಿಮಿಡಿ

ಹಿಂದುಳಿದ ವರ್ಗಗಳ ಆಯೋಗ ಅನಗತ್ಯವಾಗಿ ಪ್ರಶ್ನೆಗಳನ್ನು ತುಂಬಿರುವುದಕ್ಕೆ ಸಮೀಕ್ಷೆದಾರರು ಮತ್ತು ಹಿರಿಯ ಅಧಿಕಾರಿಗಳ ಮುಂದೆಯೇ ಶಿವಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು. ನಾನು ಹಿಂದೂ ಒಕ್ಕಲಿಗ ಸಮುದಾಯಕ್ಕೆ ಸೇರಿದವನು, ಉಪಜಾತಿ ಬಗ್ಗೆ ಮಾಹಿತಿ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಒಂದರ ನಂತರ ಒಂದರಂತೆ ಗಣತಿದಾರರು ಪ್ರಶ್ನೆ ಕೇಳುತ್ತಿರುವುದಕ್ಕೆ ಸ್ವಲ್ಪ ಆವೇಶಕ್ಕೂ ಒಳಗಾದರು. ಒಂದು ಹಂತದಲ್ಲಿ ನ್ಯಾಯಾಲಯವೇ ಹೇಳಿದೆ. ಅಗತ್ಯ ಮಾಹಿತಿಯನ್ನಷ್ಟೇ ನೀಡುತ್ತೇನೆ. ನಮ್ಮ ಮನೆಯಲ್ಲಿರುವ ಚಿನ್ನಾಭರಣ, ಆಸ್ತಿ ಬಗ್ಗೆ ಮಾಹಿತಿ ನೀಡುವುದಿಲ್ಲ. ನಾನು ಇದುವರೆಗೂ ಯಾವುದೇ ಮೀಸಲಾತಿ ಸೌಲಭ್ಯ ಪಡೆದಿಲ್ಲ. ಅಷ್ಟೇ ಅಲ್ಲ ವಸತಿ ಶಾಲೆಗಳಲ್ಲಿ ಶಿಕ್ಷಣವನ್ನೂ ಪಡೆದಿಲ್ಲ. ಶಿಕ್ಷಣಕ್ಕಾಗಿ ಯಾವುದೇ ಸರ್ಕಾರಿ ಸವಲತ್ತು ಪಡೆದಿಲ್ಲ ಎಂದು ಪ್ರಶ್ನೆಗಳಿಗೆ ಉತ್ತರಿಸಿದರು. ಉದ್ಯೋಗ ಏನು ಎಂಬ ಪ್ರಶ್ನೆಗೆ ರಾಜಕೀಯ ಮತ್ತು ಉದ್ಯಮಿಯಾಗಿ ತೊಡಗಿಸಿಕೊಂಡಿದ್ದೇನೆ ಎಂದರು.

ಅರವತ್ತು ಪ್ರಶ್ನೆಗಳ ಸರಮಾಲೆ ಆಲಿಸಿದ ನಂತರ ಅಲ್ಲಿಯೇ ಇದ್ದ ರಾಜ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಾರ್ಯದರ್ಶಿ ತುಳಸಿ ಮದಿನೇನಿ, ಜಿಬಿಎ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್, ನಗರ ಕೇಂದ್ರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಹಾಗೂ ರಾಜೇಂದ್ರನ್ ಅವರನ್ನು ಉದ್ದೇಶಿಸಿ, ಇಷ್ಟೆಲ್ಲಾ ಮಾಹಿತಿ ಕೇಳುವ ಅಗತ್ಯ ವಿದೆಯೇ ಎಂದು ಸಲಹೆ ನೀಡಿದರು. ಸಮೀಕ್ಷೆದಾರರಿಗೆ ಮಾಹಿತಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ಮಕ್ಕಳ ಭವಿಷ್ಯದ ದೃಷ್ಟಿಯಿಂದ ಸಾರ್ವಜನಿಕರು ಗಣತಿದಾರರಿಗೆ ಮಾಹಿತಿ ನೀಡಬೇಕು ಎಂದರು. ತಾಳ್ಮೆ ಕಳೆದುಕೊಳ್ಳುವಷ್ಟು ದೀರ್ಘ ಪ್ರಶ್ನೆಗಳನ್ನು ಕೇಳುತ್ತಾರೆ. ಇದರ ಅಗತ್ಯವಿಲ್ಲ. ಗ್ರಾಮೀಣ ಭಾಗದಲ್ಲಾದರೆ ವಿವರಣೆ ನೀಡುತ್ತಾರೆ. ನಗರ ಪ್ರದೇಶಗಳಲ್ಲಿ ಎಲ್ಲರೂ ಒತ್ತಡದಲ್ಲಿ ಇರುವುದರಿಂದ ಎಲ್ಲಾ ಪ್ರಶ್ನೆಗಳಿಗೂ ಉತ್ತರ ನೀಡಲು ಸಾಧ್ಯವಿಲ್ಲ. ಆದಷ್ಟು ಕಡಿಮೆ ಪ್ರಶ್ನೆಗಳನ್ನು ಕೇಳಿ ಎಂಬುದಾಗಿ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಯಾರಿಗೂ ಬಲವಂತ ಮಾಡಿ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆಯಬೇಡಿ ಎಂದಿದ್ದೇನೆ ಎಂದರು.

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗೆ ಅಡ್ಡಿ!

ಅನಾರೋಗ್ಯದ ಕುಟುಂಬ ಸದಸ್ಯರನ್ನು ನೋಡಿಕೊಳ್ಳುವುದು ಮತ್ತು ಆರೋಗ್ಯದ ತೊಂದರೆಗಳು ಸೇರಿದಂತೆ ವೈಯಕ್ತಿಕ ಸವಾಲುಗಳನ್ನು ಉಲ್ಲೇಖಿಸಿದ್ದಾರೆ ಎನ್ನಲಾಗಿದೆ.

ಮಹಿಳೆಯೊಬ್ಬರು ತನ್ನ ವಿಶೇಷ ಮಗುವನ್ನು ಪ್ರತಿಭಟನಾ ಸ್ಥಳಕ್ಕೆ ಕರೆತಂದಿದ್ದು ಏಕೆ ಸಮೀಕ್ಷೆ ಕಾರ್ಯದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ ಎಂಬುದನ್ನು ತೋರಿಸಿದ್ದಾರೆ. ನಂತರ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪ್ರತಿಭಟನಾಕಾರರನ್ನು ಭೇಟಿಯಾದರು. ಅವರಲ್ಲಿ ಬಹುತೇಕರು ಸರ್ಕಾರಿ ಶಿಕ್ಷಕರಾಗಿದ್ದಾರೆ. ಸಮೀಕ್ಷೆಯಲ್ಲಿ ಪಾಲ್ಗೊಳ್ಳುವಂತೆ ಜನರಲ್ಲಿ ಮನವಿ ಮಾಡುತ್ತೇನೆ ಎಂದು ಸುದ್ದಿಗಾರರಿಗೆ ತಿಳಿಸಿದರು. ರಾಜ್ಯ ಸರಕಾರ ಅಂದಾಜು ರೂ. 420 ಕೋಟಿ ವೆಚ್ಚದಲ್ಲಿ ಈ ಸಮೀಕ್ಷೆ ನಡೆಸುತ್ತಿದೆ.

ಬರೀ ಶೇ.49ರಷ್ಟು ಸಮೀಕ್ಷೆ

ಗಡುವಿನಲ್ಲಿ ಗುರಿ ತಲುಪಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಅಗತ್ಯಬಿದ್ದರೆ ಪರಿಸ್ಥಿತಿ ನೋಡಿಕೊಂಡು ಗಣತಿಗೆ ಮತ್ತಷ್ಟು ಕಾಲಾವಕಾಶ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರಿನಲ್ಲಿ ನಿನ್ನೆ ಸ್ಪಷ್ಟಪಡಿಸಿದ್ದರು. ತಾಲೂಕುವಾರು ಸಮೀಕ್ಷೆ ಪ್ರಕಾರ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆಯಲ್ಲಿ ಶೇ.72, ಸರಗೂರಿನಲ್ಲಿ ಶೇ.76, ಸಾಲಿಗ್ರಾಮದಲ್ಲಿ ಶೇ.73, ಕೆ.ಆರ್.ನಗರದಲ್ಲಿ ಶೇ.49, ಹುಣಸೂರಿನಲ್ಲಿ ಶೇ.64, ಮೈಸೂರಲ್ಲಿ ಶೇ.33, ಪಿರಿಯಾಪಟ್ಟಣದಲ್ಲಿ ಶೇ.59ರಷ್ಟು, ಮೈಸೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ಶೇ.33ರಷ್ಟು ಸಮೀಕ್ಷೆ ನಡೆಸಲಾಗಿದೆ. ಸಮೀಕ್ಷೆಗೆ ಇನ್ನು 3 ದಿನ ಬಾಕಿ ಇದೆ. ಅಷ್ಟರಲ್ಲಿ ಇನ್ನು ಶೇ.51ರಷ್ಟು ಗಣತಿ ಮುಗಿಸುವುದು ಅಧಿಕಾರಿಗಳು, ಸಿಬ್ಬಂದಿಗೆ ದೊಡ್ಡ ಸವಾಲಾಗಿದೆ. ಮೈಸೂರು ಮಾತ್ರವಲ್ಲದೆ ರಾಜ್ಯದ ಇತರೆಡೆ ಕೂಡ ಇದೇ ಸ್ಥಿತಿ ಇದ್ದು, ಸರ್ಕಾರ ಗಣತಿಗೆ ಮತ್ತಷ್ಟು ಕಾಲಾವಕಾಶ ನೀಡುವ ಸಾಧ್ಯತೆ ಹೆಚ್ಚಾಗಿದೆ.

ಇನ್ನು ದುಪ್ಪಟ್ಟು ಹಣ ಪಾವತಿಸಬೇಕಿಲ್ಲ

ಮಾಡಿಕೊಂಡರೆ ಟೋಲ್ ಶುಲ್ಕವನ್ನು ದುಪ್ಪಟ್ಟು ಪಾವತಿಸಬೇಕಾಗುತ್ತದೆ. ಆದರೆ UPI ಮೂಲಕ ಪಾವತಿ ಮಾಡಿದರೆ ಶುಲ್ಕದ 1.25 ಪಟ್ಟು ಟೋಲ್ ಪಾವತಿಸಬೇಕಾಗುತ್ತದೆ. ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ, ರಾಷ್ಟ್ರೀಯ ಹೆದ್ದಾರಿ ಶುಲ್ಕ(ದರಗಳು ಮತ್ತು ಸಂಗ್ರಹದ ನಿರ್ಣಯ) ನಿಯಮಗಳು, 2008 ಅನ್ನು ತಿದ್ದುಪಡಿ ಮಾಡಿದ್ದು, FASTag ಇಲ್ಲದ ಬಳಕೆದಾರರಿಗೆ ಅವರ ಪಾವತಿ ವಿಧಾನ ಆಧರಿಸಿ ವಿಭಿನ್ನ ಶುಲ್ಕ ಪರಿಚಯಿಸಿದೆ. ಈ ಕ್ರಮವು ಡಿಜಿಟಲ್ ವಹಿವಾಟುಗಳನ್ನು ಉತ್ತೇಜಿಸುವ ಮತ್ತು ಟೋಲ್ ಪ್ಲಾಜಾಗಳಲ್ಲಿ ನಗದು ಬಳಕೆಯನ್ನು ಕಡಿಮೆ ಮಾಡುವ ಗುರಿ ಹೊಂದಿದೆ. ಹೊಸ ನಿಯಮದ ಪ್ರಕಾರ, ಫಾಸ್ಟ್‌ಟ್ಯಾಗ್ ಇಲ್ಲದ ಅಥವಾ ದೋಷಯುಕ್ತ ಫಾಸ್ಟ್‌ಟ್ಯಾಗ್ ಹೊಂದಿರುವ ವಾಹನಗಳು ಈಗ UPI ಬಳಸಿ ಪಾವತಿಸಿದರೆ ಟೋಲ್ ಪ್ಲಾಜಾಗಳಲ್ಲಿ ದುಪ್ಪಟ್ಟು ಬದಲು 1.25 ಪಟ್ಟು ಟೋಲ್ ಪಾವತಿಸಬೇಕಾಗುತ್ತದೆ.

ಭಕ್ತರು, ಪ್ರವಾಸಿಗರು ಭೇಟಿ

ಹರಿದುಬಂದಿದೆ. ಹಾಗಾಗಿ ವಿವಿಧ ಪ್ರವಾಸಿತಾಣಗಳಿಗೆ ಭೇಟಿ ನೀಡಿರುವ ಪ್ರವಾಸಿಗರ ಸಂಖ್ಯೆಯೂ ಹೆಚ್ಚಾಗಿದೆ. ಅರಮನೆ, ಮೈಸೂರು ಮೃಗಾಲಯ, ಚಾಮುಂಡಿಬೆಟ್ಟ, ನಂಜನಗೂಡು, ಕೆಆರ್‌ಎಸ್ ಜಲಾಶಯ, ಶ್ರೀರಂಗಪಟ್ಟಣ, ನಿಮಿಷಾಂಬ ದೇವಸ್ಥಾನ ಸೇರಿದಂತೆ ವಿವಿಧ ಪ್ರವಾಸಿ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ದಸರಾ ವೇಳೆ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಭೇಟಿ ನೀಡಿದ್ದಾರೆ.

ಚಾಮುಂಡಿಬೆಟ್ಟಕ್ಕೆ 6 ಲಕ್ಷ ಪ್ರವಾಸಿಗರ ಭೇಟಿ: ನವರಾತ್ರಿ ವೇಳೆ ನಾಡಿನ ಅಧಿದೇವತೆ ಚಾಮುಂಡೇಶ್ವರಿಗೆ ದಿನಕ್ಕೊಂದು ಅಲಂಕಾರ ಮಾಡಲಾಗಿದ್ದು, ಈ ವೇಳೆ ದೇವಿ ದರ್ಶನ ಪಡೆದರೆ ಶುಭವಾಗಲಿದೆ ಎಂಬ ಪ್ರತೀತಿ ಇರುವುದರಿಂದ ದಸರಾ ವೇಳೆ ಚಾಮುಂಡಿಬೆಟ್ಟಕ್ಕೆ ಬಂದ ಭಕ್ತರ ಸಂಖ್ಯೆ ಹೆಚ್ಚಾಗಿತ್ತು. ದಿನಕ್ಕೆ 50 ಸಾವಿರಕ್ಕೂ ಹೆಚ್ಚು ಮಂದಿ ಬೆಟ್ಟಕ್ಕೆ ಭೇಟಿ ನೀಡಿದ್ದಾರೆ. ಅಲ್ಲದೆ, ವಿಜಯದಶಮಿಯಂದು (ಅ.2) ಬೆಟ್ಟಕ್ಕೆ 75 ಸಾವಿರಕ್ಕೂ ಹೆಚ್ಚು ಮಂದಿ ಭೇಟಿ ನೀಡಿ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದ್ದಾರೆ.

ನಂಜನಗೂಡು ದೇವಾಲಯ: ದಕ್ಷಿಣ ಕಾಶಿ ಎಂದೇ ಕರೆಯಲ್ಪಡುವ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಸೆಪ್ಟೆಂಬರ್ 22ರಿಂದ ಅಕ್ಟೋಬರ್ 2ರವರೆಗೆ ನಡೆದ ದಸರಾ ಮಹೋತ್ಸವದ ವೇಳೆ ಪ್ರತಿದಿನ ಸರಾಸರಿ 20 ಸಾವಿರ ಮಂದಿಯಂತೆ 11 ದಿನದಲ್ಲಿ ಎರಡು ಲಕ್ಷಕ್ಕೂ ಅಧಿಕ ಮಂದಿ ಭೇಟಿ ನೀಡಿದ್ದಾರೆ ಎಂದು ತಿಳಿದು ಬಂದಿದೆ.

ಕೆಆರ್‌ಎಸ್‌ಗೆ 2.50 ಲಕ್ಷ ಪ್ರವಾಸಿಗರು: ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್‌ಗೆ ದಸರಾ ವೇಳೆ ದಾಖಲೆಯ 2.50 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದಾರೆ. ಕೆಆರ್‌ಎಸ್‌ನಲ್ಲಿ ಇದೇ ಮೊದಲ ಬಾರಿಗೆ ವಾರಣಾಸಿಯ ಗಂಗಾರತಿ ಮಾದರಿ ಸೆ.26ರಿಂದ 30ರವರೆಗೆ ಕಾವೇರಿ ಆರತಿ ವ್ಯವಸ್ಥೆ ಮಾಡಲಾಗಿತ್ತು. ವರ್ಣರಂಜಿತ ಕಾವೇರಿ ಆರತಿ ವೀಕ್ಷಣೆಗೆ ಅಪಾರ ಸಂಖ್ಯೆಯ ಪ್ರವಾಸಿಗರು ಆಗಮಿಸಿದ್ದರು. ಇದಲ್ಲದೆ, ನಿಮಿಷಾಂಬ, ರಂಗನತಿಟ್ಟು, ಟಿ.ನರಸೀಪುರದ ಗುಂಜಾನರಸಿಂಹಸ್ವಾಮಿ ದೇವಾಲಯ, ತಲಕಾಡು, ಸೋಮನಾಥಪುರ, ಮೇಲುಕೋಟೆ, ಕೆರೆತೊಣ್ಣೂರು, ನಾಗರಹೊಳೆ, ಬಂಡೀಪುರ, ಮಲೆ ಮಹದೇಶ್ವರಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ಬಿಳಿಗಿರಿರಂಗನಬೆಟ್ಟ ಸೇರಿದಂತೆ ವಿವಿಧೆಡೆ ಇರುವ ಪ್ರಮುಖ ಪ್ರವಾಸಿ ತಾಣ, ದೇವಾಲಯಗಳಿಗೆ ನವರಾತ್ರಿ ವೇಳೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡಿದ್ದಾರೆ.

5905 ಕೆಜಿ ತೂಗಿದ್ದಾನೆ

ಯಾರ್‍ಯಾರು ಎಷ್ಟು ಕೆಜಿ: ಗಜಪಡೆಯಲ್ಲಿ ಕಿರಿಯ ಗಂಡಾನೆ ಭೀಮನ ತೂಕದಲ್ಲಿ 440 ಕೆಜಿ ತೂಕ ಹೆಚ್ಚಳವಾಗಿದ್ದು, 5905(ಬಂದಾಗ 5465) ಕೆಜಿ ತೂಗಿ ಮೊದಲ ಸ್ಥಾನದಲ್ಲಿದ್ದರೆ, ಸುಗ್ರೀವ 350 ಕೆಜಿ ಹೆಚ್ಚಿಸಿಕೊಂಡು 5895(5545) ಕೆಜಿಯೊಂದಿಗೆ 2ನೇ ಸ್ಥಾನ, ಪಟ್ಟದ ಆನೆ ಶ್ರೀಕಂಠ 320 ಕೆಜಿ ತೂಕ ಹೆಚ್ಚಳದೊಂದಿಗೆ 5860(5540) ಕೆಜಿ ತೂಗಿ, 3ನೇ ಸ್ಥಾನ ಪಡೆದಿದ್ದಾನೆ. ಪಟ್ಟದ ನಿಶಾನೆ ಆನೆ ಏಕಲವ್ಯ 390 ಕೆಜಿ ಹೆಚ್ಚಳವಾಗಿದ್ದು, ಒಟ್ಟಾರೆ 5695(5305) ಕೆಜಿ ತೂಗಿದ್ದಾನೆ. ಮಹೇಂದ್ರ 245 ಕೆಜಿ ಹೆಚ್ಚಳದೊಂದಿಗೆ 5365(5120) ಕೆಜಿ ತೂಗಿದರೆ, ಧನಂಜಯ 300 ಕೆಜಿಯೊಂದಿಗೆ 5650(5310) ಕೆಜಿ, ಕ್ಯಾಪ್ಟನ್ ಅಭಿಮನ್ಯು 275 ಕೆಜಿ ಹೆಚ್ಚಳವಾಗಿ 5635(5360) ಕೆಜಿ, ಗೋಪಿ 255 ಕೆಜಿ ಹೆಚ್ಚಳದೊಂದಿಗೆ 5245(4990) ಕೆಜಿ ತೂಗಿದ್ದಾನೆ. ಹಾಗೆಯೇ ಕಂಜನ್ ತೂಕದಲ್ಲಿ 345 ಕೆಜಿ ಹೆಚ್ಚಾಗಿದ್ದು, ಇದೀಗ 5225(4880) ಕೆಜಿ ತೂಕ ಹೊಂದಿದ್ದಾನೆ. ಪ್ರಶಾಂತ ಕೇವಲ 50 ಕೆಜಿ ಹೆಚ್ಚಳವಾಗಿದ್ದು, 5160(5110) ತೂಕ ಹೊಂದಿದ್ದಾನೆ. ಹೆಣ್ಣಾನೆಗಳಲ್ಲಿ ಬಳ್ಳೆ ಲಕ್ಷ್ಮಿಯ ತೂಕ 230 ಕೆಜಿ ಹೆಚ್ಚಾಗಿ 3960(3730) ಕೆಜಿ ಹೊಂದಿದ್ದರೆ, ರೂಪ ತೂಕದಲ್ಲಿ ಕೇವಲ 40 ಕೆಜಿ ಹೆಚ್ಚಳವಾಗಿ 3360(3320) ಕೆಜಿ, ಕಾವೇರಿ ತೂಕದಲ್ಲಿ 225 ಕೆಜಿ ಹೆಚ್ಚಳವಾಗಿ 3235(3010) ಕೆಜಿ ಹಾಗೂ ಕಿರಿಯ ಹೆಣ್ಣಾನೆ ಹೇಮಾವತಿ ತೂಕದಲ್ಲಿ 255 ಕೆಜಿ ಹೆಚ್ಚಾಗಿ 2674(2440) ಕೆಜಿ ತೂಕ ಹೊಂದಿದೆ.

ಅಭಿಮನ್ಯು, ಪ್ರಶಾಂತನ ಆರೋಗ್ಯದ ಆತಂಕ!

ಅರಮನೆ ಆವರಣದಲ್ಲಿ ನೀಡಿದ ಪೌಷ್ಟಿಕ ಆಹಾರಕ್ಕೆ ಹೊಂದಿಕೊಳ್ಳುವಲ್ಲಿ ಅಭಿಮನ್ಯು ಹಾಗೂ ಪ್ರಶಾಂತ ಪ್ರಯಾಸಪಟ್ಟವು. ಆರಂಭದಲ್ಲಿ ಐದಾರು ಬಾರಿ ತೀವ್ರ ಭೇದಿಯಿಂದ ಬಳಲಿದ್ದ ಈ ಎರಡು ಆನೆಗಳ ಆರೋಗ್ಯ ಕಾಪಾಡುವುದು ಸವಾಲಾಗಿತ್ತು. ತೀವ್ರ ನಿಗಾ ವಹಿಸಿದ ಪರಿಣಾಮ ಅವು ಚೇತರಿಸಿಕೊಂಡವು. ಆದರೆ, ತೂಕದಲ್ಲಿ ಸುಧಾರಣೆ ಆಗಲಿಲ್ಲ. ಅವುಗಳನ್ನ ಜಂಬೂಸವಾರಿಗೆ ಅಣಿಗೊಳಿಸುವಲ್ಲಿ ಪಶು ವೈದ್ಯರು ಯಶಸ್ವಿಯಾದರು. ಅಂತಿಮವಾಗಿ ಮೆರವಣಿಗೆಯಲ್ಲಿ ಸಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿವೆ.

ಮೃಗಾಲಯಕ್ಕೆ 1.56 ಲಕ್ಷ ಮಂದಿ ಭೇಟಿ; 191.37 ಲಕ್ಷ ಆದಾಯ ಸಂಗ್ರಹ

75 ಸಾವಿರ ಪ್ರವಾಸಿಗರು ಭೇಟಿ ನೀಡಿದ್ದರಿಂದ 77.63 ಲಕ್ಷ ಆದಾಯ ಸಂಗ್ರಹವಾಗಿದ್ದು. ಆ ವರ್ಷ ಆಯುಧ ಪೂಜೆ ದಿನ 9,033 ಮಂದಿ ಭೇಟಿಯೊಂದಿಗೆ 9.29 ಲಕ್ಷ ರೂ., ವಿಜಯದಶಮಿ ದಿನ 27,093 ಪ್ರವಾಸಿಗರಿಂದ 26,67 ಲಕ್ಷ ರೂ. ಆದಾಯ ಬಂದಿತ್ತು. 2022ರಲ್ಲಿ 10ದಿನದಲ್ಲಿ 1.55 ಲಕ್ಷ ಪ್ರವಾಸಿಗರಿಂದ 1,53,51,000 ರೂ., ಆಯುಧ ಪೂಜೆ ದಿನ 22,909 ಪ್ರವಾಸಿಗರಿಂದ 23,05 ಲಕ್ಷ ರೂ, ವಿಜಯದಶಮಿಯಂದು 36,013 ಪ್ರವಾಸಿಗರಿಂದ 35,83 ಲಕ್ಷ ರೂ. ಸಂಗ್ರಹವಾಗಿತ್ತು. 2023ರಲ್ಲಿ 10 ದಿನದಲ್ಲಿ 1.65 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದು, 1,67,10,000 ರೂ. ಸಂಗ್ರಹವಾಗಿತ್ತು. ಆ ವರ್ಷ ಆಯುಧ ಪೂಜೆ ದಿನ 28,287 ಪ್ರವಾಸಿಗರಿಂದ 28,23 ಲಕ್ಷ ರೂ., ವಿಜಯದಶಮಿ ದಿನ 23,890 ಪ್ರವಾಸಿಗರಿಂದ 24.58 ಲಕ್ಷ ರೂ. ಸಂಗ್ರಹವಾಗಿತ್ತು. 2024ರಲ್ಲಿ 10 ದಿನದಲ್ಲಿ 1.65 ಲಕ್ಷ ಪ್ರವಾಸಿಗರಿಂದ 1,71,29,000 ರೂ. ಆದಾಯ, ಆಯುಧಪೂಜೆ ದಿನ 21,996 ಪ್ರವಾಸಿಗರಿಂದ 23.07 ಲಕ್ಷ ರೂ., ವಿಜಯದಶಮಿ ದಿನ 34,659 ಪ್ರವಾಸಿಗರ ಭೇಟಿಯಿಂದ 35.54 ಲಕ್ಷ ರೂ. ಸಂಗ್ರಹವಾಗಿತ್ತು. ಪ್ರಸಕ್ತ ಸಾಲಿನ ದಸರಾ ಮಹೋತ್ಸವದ ಮೊದಲ 10 ದಿನ 1.56 ಲಕ್ಷ ಪ್ರವಾಸಿಗರು ಮೈಸೂರು ಮೃಗಾಲಯಕ್ಕೆ ಭೇಟಿ ನೀಡಿದ್ದು, 1,91,37,000 ರೂ. ಆದಾಯ ಸಂಗ್ರಹವಾಗಿದೆ. ಅಲ್ಲದೆ, ಆಯುಧ ಪೂಜೆ ದಿನ 27,033 ಪ್ರವಾಸಿಗರಿಂದ 33.21 ಲಕ್ಷ ರೂ ಹಾಗೂ ವಿಜಯದಶಮಿ ದಿನ 27,272 ಪ್ರವಾಸಿಗರ ಭೇಟಿಯಿಂದ ಮೃಗಾಲಯಕ್ಕೆ 34.07 ಲಕ್ಷ ರೂ. ಸಂಗ್ರಹವಾಗಿದೆ.

ಗಾಂಧೀಜಿಯವರ ಕನಸಿನ ರಾಮರಾಜ್ಯವಾಗಬೇಕಾದರೆ ಹಳ್ಳಿಗಳಿಗೆ ಮೂಲಸೌಕರ್ಯ, ದುಡಿಯುವ ಕೈಗೆ ಉದ್ಯೋಗ ನೀಡಬೇಕು

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅಭಿಮತ


ಮೈಸೂರು ತಾಲೂಕಿನ ದೊಡ್ಡಮಾರಗೌಡನಹಳ್ಳಿಯಲ್ಲಿ ಆಯೋಜಿಸಿದ್ದ 'ಯೂತ್ ಫಾರ್ ಮೈ ಭಾರತ್' ವಾರ್ಷಿಕ ವಿಶೇಷ ಶಿಬಿರವನ್ನು ಹಿರಿಯ ಶಾಸಕ ಜಿ.ಟಿ.ದೇವೇಗೌಡರು ಶನಿವಾರ ಉದ್ಘಾಟಿಸಿದರು.

ಮೈಸೂರು, ಅ.4– ದೇಶದ ಪ್ರಗತಿ ಹಳ್ಳಿಗಳ ಅಭಿವೃದ್ಧಿಯನ್ನು ಅವಲಂಭಿಸಿದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಹೇಳಿದರು.

ಮೈಸೂರು ತಾಲೂಕು ದೊಡ್ಡಮಾರಗೌಡನಹಳ್ಳಿ ಗ್ರಾಮದಲ್ಲಿ ಮೈಸೂರು ವಿಶ್ವ ವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ವತಿಯಿಂದ ಆಯೋಜಿಸಿದ್ದ 'ಯೂತ್ ಫಾರ್ ಮೈ ಭಾರತ್' ವಾರ್ಷಿಕ ವಿಶೇಷ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಳ್ಳಿಗಳ ಅಭಿವೃದ್ಧಿ ದೇಶದ ಪ್ರಗತಿಗೆ ಸಹಕಾರಿ. ಮಹಾತ್ಮ ಗಾಂಧೀಜಿ ಕನಸು ನನಸಾಗಬೇಕಾದರೆ ಪ್ರತಿ ಹಳ್ಳಿಯಲ್ಲೂ ಸಮರ್ಪಕ ಮೂಲ ಸೌಕರ್ಯದ ಜೊತೆಗೆ ದುಡಿಯುವ ಕೈಗಳಿಗೆ ಉದ್ಯೋಗ ಕಲ್ಪಿಸಬೇಕು. ನೈರ್ಮಲ್ಯ, ಉತ್ತಮ ಪರಿಸರ ಕಾಪಾಡಿಕೊಳ್ಳಬೇಕು. ಹಳ್ಳಿಗೊಂದು ಗ್ರಾಮ ಪಂಚಾಯ್ತಿ, ಶಾಲೆ, ಸಹಕಾರ ಸಂಘ ಇರಬೇಕು. ಈ ಮೂಲಕ ಹಳ್ಳಿಗಳ ಸರ್ವತೋಮುಖ ಅಭಿವೃದ್ಧಿಯೊಂದಿಗೆ ನಮ್ಮ ದೇಶ ರಾಮರಾಜ್ಯವಾಗುತ್ತದೆ ಎಂದು ಹೇಳಿದರು.

ಶಿಬಿರದಲ್ಲಿ ಭಾಗವಹಿಸಿರುವ ವಿದ್ಯಾರ್ಥಿಗಳಲ್ಲಿ ಬಹುತೇಕರು ಗ್ರಾಮೀಣ ಪ್ರದೇಶದ ಹಿನ್ನೆಲೆಯುಳ್ಳವರಾಗಿದ್ದು ಹಳ್ಳಿಗಳ ಜನ ಜೀವನದ ಬಗ್ಗೆ ಅರಿವಿರುತ್ತದೆ. ಎಲ್ಲಾ ವಿದ್ಯಾರ್ಥಿಗಳೂ ಬೋಧನೆ ಮೂಲಕ ಮಾತ್ರವಲ್ಲದೆ ಪ್ರಾಯೋಗಿಕವಾಗಿ ವಿಷಯಗಳನ್ನು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ. ನಿಜವಾಗಿ ಹಳ್ಳಿಗಳಲ್ಲಿ ನಿಮ್ಮನ್ನು ಯಾವ ಜಾತಿ ಎಂದು ಕೇಳುವುದಿಲ್ಲ. ಕಾಲೇಜು ಮಕ್ಕಳು ಬಂದಿದ್ದಾರೆ ಎಂದು ಪ್ರೀತಿಯಿಂದ ನೋಡಿಕೊಳ್ಳುತ್ತಾರೆ. ಹಳ್ಳಿಗಳು ಅಭಿವೃದ್ಧಿಯಾಗಬೇಕಾದರೆ ನೀವೆಲ್ಲಾ ವಿದ್ಯಾಭ್ಯಾಸ ಮುಗಿಸಿ, ಅಧಿಕಾರಿಗಳು, ರಾಜಕಾರಣಿಗಳು ಇನ್ನಿತರ ಉನ್ನತ ಹುದ್ದೆ ಪಡೆದಾಗ ಗ್ರಾಮೀಣ ಜನರ ಸೇವೆ ಮಾಡಬೇಕು ಎಂದು ಸಲಹೆ ನೀಡಿದರು.


ಹಲವು ವರ್ಷಗಳ ಹಿಂದೆ ಹಳ್ಳಿಗಳಲ್ಲಿ ಜನರೇ ರಸ್ತೆ, ಚರಂಡಿಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಈಗ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನೂ ಸರ್ಕಾರವೇ ಮಾಡಬೇಕು ಎನ್ನುವಂತಾಗಿದೆ. ಸ್ವಚ್ಛತೆ ಮಹತ್ವ ಸಾರಿದ ಮಹಾತ್ಮ ಗಾಂಧೀಜಿಯವರೇ ಸ್ವತಃ ಕಸ ಗುಡಿಸಿ, ಪ್ರೇರಣೆಯಾದರು. ಇದೀಗ ಶಿಬಿರದ ಮೂಲಕ ವಿದ್ಯಾರ್ಥಿಗಳು ಸ್ವಚ್ಛತೆಯ ಅರಿವು ಮೂಡಿಸಿದ್ದಾರೆ. ಇದನ್ನು ಕಾಪಾಡಿಕೊಂಡು ಹೋಗುವ ಜವಾಬ್ದಾರಿ ಪ್ರತಿಯೊಬ್ಬರದ್ದಾಗಿದೆ ಎಂದು ಗ್ರಾಮಸ್ಥರಿಗೆ ಕಿವಿಮಾತು ಹೇಳಿದರು.

ವಿದ್ಯಾರ್ಥಿಗಳು ದೇವರನ್ನು ಪೂಜಿಸುವ ಮೊದಲು ತಂದೆ–ತಾಯಿಯನ್ನು ಗೌರವಿಸಬೇಕು. ಗುರುಗಳ ಮಾರ್ಗದರ್ಶನದಲ್ಲಿ ನಿಮ್ಮ ಗುರಿ ಮುಟ್ಟಬೇಕು. ಹೆತ್ತವರ ಕನಸನ್ನು ನನಸು ಮಾಡಬೇಕು. ಗಾಂಧೀಜಿ, ಅಂಬೇಡ್ಕರ್, ಬಸವಣ್ಣ ಸೇರಿದಂತೆ ಎಲ್ಲಾ ಮಹನೀಯರ ಆಶಯದಂತೆ ಎಲ್ಲರೂ ಒಂದೇ ಎಂಬ ಭಾವನೆಯೊಂದಿಗೆ ಸಮಾಜದ ಒಳಿತಿಗೆ ಶ್ರಮಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ವಿದ್ಯಾವರ್ಧಕ ಸಂಘದ ಗೌರವ ಕೋಶಾಧ್ಯಕ್ಷ ಶ್ರೀಶೈಲ ರಾಮಣ್ಣವರ್, ಪ್ರಾಂಶುಪಾಲ ಡಾ.ಎಸ್. ಮರೀಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಶಿವನಂಜೇಗೌಡ, ಸದಸ್ಯರಾದ ಭಗವಂತ ಸ್ವಾಮಿ, ಪುಟ್ಟಲಕ್ಷ್ಮಮ್ಮ, ದೊಡ್ಡೇಗೌಡ, ಶಿವಮ್ಮ ಪುಟ್ಟೇಗೌಡ, ದ್ರಾಕ್ಷಾಯಿಣಿ ಸೋಮೇಶ್, ದಾರಿಪುರ ಬಸವಣ್ಣ, ಕೆಂಡಗಣ್ಣ, ರಾಮಾಚಾರಿ, ಮಾದೇಗೌಡ, ಸತ್ತಿಗೌಡ ಮತ್ತಿತರರು ಉಪಸ್ಥಿತರಿದ್ದರು.

ಆನೆಗಳು, ಜನರ ಸುರಕ್ಷತೆ ಸವಾಲಾಗಿತ್ತು

●ನಿಟ್ಟುಸಿರು ಬಿಟ್ಟ ಡಿಸಿಎಫ್ ಡಾ. ಪ್ರಭುಗೌಡ ●ಭಾರೀ ಜನರ ನಡುವೆ ಆನೆಗಳ ನಡಿಗೆ ತಲೆನೋವು!



ಮೈಸೂರು, ಅ.4(ಎಂಟಿವೈ)– ಈ ಬಾರಿ ಆನೆ ತಾಲೀಮು ವೇಳೆ ಹೊರ ರಾಜ್ಯದವರು ಸೇರಿದಂತೆ ಅಪಾರ ಸಂಖ್ಯೆಯ ಜನ ಸೇರಿದ್ದರಿಂದ ಆನೆಗಳ ಜೊತೆಗೆ ಸಾರ್ವಜನಿಕರ ಸುರಕ್ಷತೆ ಅರಣ್ಯ ಇಲಾಖೆಗೆ ದೊಡ್ಡ ಸವಾಲಾಗಿತ್ತು ಎಂದು ಡಿಸಿಎಫ್ ಡಾ. ಐ.ಬಿ.ಪ್ರಭುಗೌಡ ತಿಳಿಸಿದ್ದಾರೆ.

ಅರಮನೆ ಆವರಣದಲ್ಲಿ ದಸರಾ ಗಜಪಡೆಯ ಯೋಗಕ್ಷೇಮ ಪರಿಶೀಲನೆ ಬಳಿಕ ಮಾತನಾಡಿದ ಅವರು, ಈ ಬಾರಿ ದಸರಾ ಮಹೋತ್ಸವದ ವೇಳೆ ಅರಣ್ಯ ಇಲಾಖೆ ಮುಂದೆ ಹಲವು ಸವಾಲುಗಳು ಎದುರಾಗಿದ್ದವು. ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ತಾಲೀಮಿಗೆ ಹೊರಟ ದಸರಾ ಗಜಪಡೆಯನ್ನು ನೋಡಲು ಮಾರ್ಗದುದ್ದಕ್ಕೂ ಅಪಾರ ಸಂಖ್ಯೆಯ ಜನ ಸೇರುತ್ತಿದ್ದರು. ಈ ಜನಜಂಗುಳಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿತ್ತು. ಹಾಗಾಗಿ ಆನೆಗಳ ಸುರಕ್ಷಿತವಾಗಿ ಕರೆತರುವುದರೊಂದಿಗೆ ಸಾರ್ವಜನಿಕರ ರಕ್ಷಣೆಯೂ ನಮಗೆ ಸವಾಲಾಗಿತ್ತು ಎಂದರು.

ದಸರಾ ಗಜಪಡೆಯೊಂದಿಗೆ ಅವುಗಳ ಮಾವುತರು, ಕಾವಾಡಿಗಳು ಸೇರಿದಂತೆ ಕುಟುಂಬದ 200ಕ್ಕೂ ಹೆಚ್ಚು ಸದಸ್ಯರು ಅರಮನೆಯಲ್ಲಿ ಬೀಡು ಬಿಟ್ಟಿದ್ದು, ಅವರನ್ನು ನೋಡಿಕೊಳ್ಳುವ ಜವಬ್ದಾರಿ ಅರಣ್ಯ ಇಲಾಖೆಯದ್ದಾಗಿತ್ತು. ಇದರೊಂದಿಗೆ ವಿವಿಧ ಇಲಾಖೆಗಳೊಂದಿಗೆ ಸಮನ್ವಯತೆ ಕಾಯ್ದುಕೊಳ್ಳಬೇಕಾಗಿತ್ತು. ಪೊಲೀಸ್ ಸೇರಿದಂತೆ ವಿವಿಧ ಇಲಾಖೆಗಳು ಅರಣ್ಯ ಇಲಾಖೆಗೆ ಸಹಕಾರ ನೀಡಿದ್ದರಿಂದ ಈ ಬಾರಿಯ ದಸರಾ ಮಹೋತ್ಸವ ಯಶಸ್ವಿಯಾಗಿ ಮುಗಿದಿದೆ. ಭಾರೀ ಜನಸ್ತೋಮ ಸೇರಿದ್ದರೂ ಗಜಪಡೆ ವಿಚಲಿತಗೊಳ್ಳದೆ ಮೆರವಣಿಗೆಯಲ್ಲಿ ಸಾಗಿದೆ ಎಂದರು.

ಆರೋಗ್ಯದ ಆತಂಕ: ದಸರಾ ಗಜಪಡೆಯ ನಾಯಕ ಅಭಿಮನ್ಯು ಹಾಗೂ ಪ್ರಶಾಂತ ಆರೋಗ್ಯದಲ್ಲಿನ ವ್ಯತ್ಯಯದಿಂದಾಗಿ ಅವುಗಳ ತೂಕ ನಿರೀಕ್ಷಿತ ಪ್ರಮಾಣದಲ್ಲಿ ಹೆಚ್ಚಳವಾಗಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಕಾಡಿನಿಂದ ನಾಡಿಗೆ ಬಂದ ದಸರಾ ಗಜಪಡೆಗೆ ಪೌಷ್ಟಿಕ ಆಹಾರ ನೀಡಲಾರಂಭಿಸಿದಾಗ ಆರಂಭದಲ್ಲಿ ಸಣ್ಣಪುಟ್ಟ ಆರೋಗ್ಯ ಸಮಸ್ಯೆ ಉಂಟಾಗುವುದು ಸಹಜ. ಅದಕ್ಕೆ ಚಿಕಿತ್ಸೆ ನೀಡಿದ್ದರಿಂದ ಅವುಗಳ ಆರೋಗ್ಯ ಸ್ಥಿತಿ ಸುಧಾರಿಸಿತು. ಪ್ರಶಾಂತನಿಗೆ 10 ದಿನದಿಂದ ಭೇದಿ, ಜೊತೆಗೆ ಜ್ವರ. ಸರಿಯಾಗಿ ಆಹಾರ ಸೇವಿಸಲಿಲ್ಲ. ಕ್ಯಾಪ್ಟನ್ ಅಭಿಮನ್ಯುವಿಗೂ ಭೇದಿ, ಜ್ವರ, ನಾನಾ ನೋವಿನಿಂದ ಬಳಲಿತ್ತು. ಈ ಎರಡೂ ಆನೆಗೆ ಸಕಾಲಕ್ಕೆ ಸೂಕ್ತ ರೀತಿ ಪಶುವೈದ್ಯರು ಚಿಕಿತ್ಸೆ ನೀಡಿದ್ದರು. ಆ ಕಾರಣದಿಂದ ಅಭಿಮನ್ಯು ಮತ್ತು ಪ್ರಶಾಂತನ ಆರೋಗ್ಯದಲ್ಲಿ ಚೇತರಿಕೆ ಕಂಡಿತ್ತು ಅಭಿಮನ್ಯು ಅಂಬಾರಿ ಹೊತ್ತು ಕಳೆದ ವರ್ಷಕ್ಕಿಂತ ಈ ಬಾರಿ ಸರಾಗವಾಗಿ ಶೀಘ್ರ ಬನ್ನಿಮಂಟಪದ ಪಂಜಿನ ಕವಾಯತು ಮೈದಾನ ತಲುಪಿದ ಎಂದು ತಿಳಿಸಿದರು.

ಇಂದು ದಸರಾ ಗಜಪಡೆ ಸ್ವಸ್ಥಾನಕ್ಕೆ

ಮೈಸೂರು, ಅ.4(ಎಂಟಿವೈ)– ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆಯಲ್ಲಿ ಯಶಸ್ವಿಯಾಗಿ ಪಾಲ್ಗೊಂಡು ಅರಮನೆ ಆವರಣದಲ್ಲಿ ವಿಶ್ರಾಂತಿ ಪಡೆಯುತ್ತಿರುವ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆಗೆ ಭಾನುವಾರ(ಅ.5) ಸಾಂಪ್ರದಾಯಿಕ ಪೂಜೆ ಸಲ್ಲಿಸಿ, ಗೌರವಪೂರ್ವಕವಾಗಿ ಬೀಳ್ಕೊಡಲಾಗುತ್ತಿದೆ.

ಕಳೆದ 50 ದಿನಗಳಿಂದ ಅರಮನೆ ಆವರಣದಲ್ಲಿ ಬೀಡುಬಿಟ್ಟಿರುವ ದಸರಾ ಗಜಪಡೆ ಹಾಗೂ ಮಾವುತರು, ಕಾವಾಡಿಗಳ ಕುಟುಂಬ ಸದಸ್ಯರು ಸ್ವಸ್ಥಾನಕ್ಕೆ ಮರಳುವ ತವಕದಲ್ಲಿದ್ದಾರೆ. ಹಾಗಾಗಿ ಭಾನುವಾರ ಜಿಲ್ಲಾಡಳಿತ, ಅರಮನೆ ಮಂಡಳಿಯಿಂದ ಸಾಂಪ್ರದಾಯಿಕ ಪೂಜೆ ಸಲ್ಲಿಸಿ, ಮಾವುತರು, ಕಾವಾಡಿಗಳಿಗೆ ಗೌರವ ಧನ ನೀಡುವ ಮೂಲಕ ಬೀಳ್ಕೊಡಲಾಗುತ್ತಿದೆ. ಮಧ್ಯಾಹ್ನ 11.52ರಿಂದ 12.20ರವರೆಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ ಅರ್ಚಕ ಎಸ್.ವಿ.ಪ್ರಹ್ಲಾದ್ ರಾವ್ ಅವರಿಂದ ಆನೆಗಳ ಪಾದಪೂಜೆ ಮಾಡಿ ಪಂಚಫಲ ಅರ್ಪಿಸಲಾಗುತ್ತದೆ. ನಂತರ, ಪ್ರತ್ಯೇಕವಾಗಿ ಲಾರಿಗಳಲ್ಲಿ ಬೆಂಗಾವಲು ವಾಹನದೊಂದಿಗೆ ಸ್ವಸ್ಥಾನಕ್ಕೆ ಕಳುಹಿಸಿಕೊಡಲಾಗುತ್ತದೆ.


ಆನೆಗೆ ಅಪಾಯ ತಂದೊಡ್ಡಬಹುದಾದ 25 ಕೆಜಿ ಕಬ್ಬಿಣದ ಮೊಳೆ, ಇತರೆ ವಸ್ತುಗಳ ಸಂಗ್ರಹ

ಮೈಸೂರು, ಅ.4(ಎಂಟಿವೈ)– ದಸರಾ ಗಜಪಡೆ ತಾಲೀಮಿಗೂ ಮುನ್ನ ಮುಂದೆ ಸಾಗುತ್ತಿದ್ದ ಮ್ಯಾಗ್ನೆಟ್ ಟ್ರ್ಯಾಲಿಯಲ್ಲಿ ಪ್ರತಿದಿನ ಆನೆಗಳಿಗೆ ಅಪಾಯಕಾರಿಯಾಗಿದ್ದ ಅರ್ಧ ಕೆಜಿಯಷ್ಟು ಕಬ್ಬಿಣದ ಚೂರು ಸಂಗ್ರಹವಾಗುತ್ತಿದ್ದು, ಇದುವರೆಗೂ 25 ಕೆಜಿಗೂ ಹೆಚ್ಚು ಮೊನಚಾದ ಕಬ್ಬಿಣ ಚೂರುಗಳು ಸಂಗ್ರಹವಾಗಿವೆ ಎಂದು ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ತಿಳಿಸಿದ್ದಾರೆ.

ಅರಮನೆ ಆವರಣದಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ತಾಲೀಮಿನಲ್ಲಿ ಗಜಪಡೆ ತೆರಳುವ ಮುನ್ನ ಇಲಾಖೆಯ ವಾಹನ ಮ್ಯಾಗ್ನೆಟ್ ಟ್ರ್ಯಾಲಿ ಎಳೆದುಕೊಂಡು ಹೋಗುತ್ತಿತ್ತು. ಅದರಲ್ಲಿ ದಿನಕ್ಕೆ ಅರ್ಧ ಕೆಜಿಯಷ್ಟು ಕಬ್ಬಿಣದ ಚೂರು, ನಟ್ಟು, ಬೋಲ್ಟ್, ಮೊಳೆ ಸೇರಿದಂತೆ ಅಪಾಯಕಾರಿ ಪದಾರ್ಥಗಳು ಸಂಗ್ರಹವಾಗುತ್ತಿದ್ದವು. ಮ್ಯಾಗ್ನೆಟ್ ಟ್ರ್ಯಾಲಿ ಆನೆಗಳ ಪಾದ ರಕ್ಷಣೆಗೆ ಸಹಕಾರಿಯಾಗಿದೆ. ಈ ಬಾರಿ ದಸರಾ ಮಹೋತ್ಸವದಲ್ಲಿ ಆನೆಗಳ ತಾಲೀಮಿನ ವೇಳೆ ಮ್ಯಾಗ್ನೆಟ್ ಟ್ರ್ಯಾಲಿಯಿಂದ 25 ಕೆಜಿಯಷ್ಟು ಕಬ್ಬಿಣದ ಚೂರು ಸಂಗ್ರಹವಾಗಿದೆ ಎಂದರು.

ಮೆಟಲ್ ಡಿಟೆಕ್ಟರ್‌ನಿಂದ ಪಾದ ಪರೀಕ್ಷೆ: ದಸರಾ ಗಜಪಡೆ ಸ್ವಸ್ಥಾನಕ್ಕೆ ತೆರಳುವ ಮುನ್ನ ಪ್ರತಿ ಆನೆಯ ಪಾದವನ್ನು ಮೆಟಲ್ ಡಿಟೆಕ್ಟರ್ ಮೂಲಕ ಪರೀಕ್ಷೆ ನಡೆಸಲಾಗಿದ್ದು, ಅದರಲ್ಲಿ ಪ್ರಶಾಂತನ ಪಾದದಲ್ಲಿ ಚಿಕ್ಕ ಮೊಳೆ ಚುಚ್ಚಿಕೊಂಡಿರುವುದು ಪತ್ತೆಯಾಗಿದೆ. ಅದನ್ನು ಹೊರಗೆ ತೆಗೆಯಲಾಗಿದೆ. ತಾಲೀಮಿನ ವೇಳೆ ಒಮ್ಮೆ ಭೀಮನ ಪಾದಕ್ಕೂ ಚಿಕ್ಕ ಹರಳೊಂದು ಚುಚ್ಚಿಕೊಂಡಿತ್ತು. ಅದನ್ನು ಸಹ ಹೊರ ತೆಗೆಯಲಾಗಿತ್ತು ಎಂದು ಡಿಸಿಎಫ್ ಸ್ಪಷ್ಟಪಡಿಸಿದ್ದಾರೆ.

ಆಹಾರ ಮೇಳಕ್ಕೆ ಸಚಿವ ಮಹದೇವಪ್ಪ ಭೇಟಿ



ದಸರಾ ಆಹಾರ ಮೇಳಕ್ಕೆ ಭೇಟಿ ನೀಡಿದ್ದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರನ್ನು ಆಹಾರ ಮೇಳದ ಉಪಸಮಿತಿ ಅಧ್ಯಕ್ಷ ಮಧುಕುಮಾರ್ ಸನ್ಮಾನಿಸಿದರು.

ಮೈಸೂರು, ಅ.4– ನಗರದ ಮಹಾರಾಜ ಕಾಲೇಜು ಮೈದಾನದಲ್ಲಿನ ದಸರಾ ಆಹಾರ ಮೇಳಕ್ಕೆ ಶುಕ್ರವಾರ ಸಮಾಜ ಕಲ್ಯಾಣ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭೇಟಿ ನೀಡಿ, ನಾನಾ ತಿಂಡಿ–ತಿನಿಸು ಸವಿದರು.

ಎಲ್ಲಾ ಮಳಿಗೆಗಳನ್ನು ವೀಕ್ಷಿಸಿದ ಅವರು, ಆಹಾರ ಗುಣಮಟ್ಟ ಹಾಗೂ ಸ್ವಚ್ಛತೆ ನಿರ್ವಹಣೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ವೇಳೆ ಅವರನ್ನು ಆಹಾರ ಮೇಳದ ಅಧ್ಯಕ್ಷ ಹಾಗೂ ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಕಗ್ಗಲೀಪುರ ಕೆ.ಎಂ.ಮಧುಕುಮಾರ್, ಸನ್ಮಾನಿಸಿದರು.

ಸಚಿವರೊಂದಿಗೆ ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಕೆ.ಶಿವಕುಮಾರ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಸಿಇಒ ಎಸ್. ಯುಕೇಶ್ ಕುಮಾರ್, ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಡಿಸಿಪಿಗಳಾದ ಬಿಂದುಮಣಿ, ಸುಂದರ್ ರಾಜು ಮತ್ತಿತರರಿದ್ದರು.

ಕಡೇ ದಿನ: ಈ ಬಾರಿ ದಸರಾ ಅಹಾರ ಮೇಳದಲ್ಲಿ 160ಕ್ಕೂ ಹೆಚ್ಚು ಮಳಿಗೆಗಳಿದ್ದು, ಆದಿವಾಸಿಗಳ ಬೊಂಬು ಬಿರಿಯಾನಿ, ದಾವಣಗೆರೆ ಬೆಣ್ಣೆದೋಸೆ, ಜೋಳದ ರೊಟ್ಟಿ ಎಣ್ಣೆಗಾಯಿ, ಮಲ್ಲಿಗೆ ಇಡ್ಲಿ, ಬಂಗಾರಪೇಟೆ ಚುರುಮುರಿ, ಮೇಲುಕೋಟೆ ಪುಳಿಯೊಗರೆ, ಮುಳಬಾಗಿಲು ತುಪ್ಪದ ದೋಸೆ ಸೇರಿದಂತೆ ರಾಜ್ಯದ ವಿವಿಧೆಡೆಯ ವಿಶೇಷ ಖಾದ್ಯಗಳನ್ನು ಸವಿಯಬಹುದಾಗಿದೆ. ಮೂರು ದಿನ ಮುಂದೂಡಲ್ಪಟ್ಟಿದ್ದ ಆಹಾರ ಮೇಳಕ್ಕೆ ಭಾನುವಾರ ತೆರೆ ಬೀಳಲಿದೆ.

ಇಂದು ಗುರು–ಶಿಷ್ಯರ ಕೊಳಲು ವಾದನ



ವಿದ್ವಾನ್ ರಾಕೇಶ್ ಮತ್ತು ಸುಮೇರು

ಮೈಸೂರು,ಅ.4– ನಗರದ ಬ್ಯಾಂಬೂ ಮೆಲೋಡಿ ರಾಗಾಸ್ ಸಂಸ್ಥೆ ವತಿಯಿಂದ ಭಾನುವಾರ(ಅ.5) ಸಂಜೆ 6ಕ್ಕೆ ಕೃಷ್ಣಾರ್ಪಣಂ ಸರಣಿ ಕಛೇರಿ ಹಮ್ಮಿಕೊಳ್ಳಲಾಗಿದೆ.

ವಿಜಯನಗರ 3ನೇ ಹಂತ, ಮೊದಲ ಘಟ್ಟದ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಗುರು ವಿದ್ವಾನ್ ರಾಕೇಶ್ ಸುಧೀರ್ ಮತ್ತು ಶಿಷ್ಯ ಸುಮೇರು ವಿ.ಸಕಲೇಶಪುರ ಅವರು ಕೊಳಲು ವಾದನ ಕಛೇರಿ ನಡೆಸಿಕೊಡಲಿದ್ದಾರೆ. ಕರ್ನಾಟಕ ಶಾಸ್ತ್ರೀಯ ಸಂಗೀತದ ಪ್ರಖ್ಯಾತ ವಿದ್ವಾನ್ ಶೃಂಗೇರಿ ಹೆಚ್.ಎಸ್.ನಾಗರಾಜ್ ಮತ್ತು ಕಲಾಸೌರಭ ಸಂಸ್ಥೆ ಸಂಸ್ಥಾಪಕಿ ಮೀರಾ ಮಂಜುನಾಥ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಜುಬೀನ್ ಗರ್ಗ್ ಸಾವು ಪ್ರಕರಣಕ್ಕೆ 'ಬಿಗ್ ಟ್ವಿಸ್ಟ್'

ಸ್ಫೋಟಕ ಮಾಹಿತಿ ಹೊರಹಾಕಿದ ಬ್ಯಾಂಡ್ ಮ್ಯಾಟ್ ಶೇಖರ್ ಜ್ಯೋತಿ ಗೋ ಸ್ವಾಮಿ!



ಜುಬೀನ್ ಗರ್ಗ್

ಗುವಾಹಟಿ, ಅ.4– ಜುಬೀನ್ ಗರ್ಗ್ ಅವರ ಸಾವಿನ ಪ್ರಕರಣಕ್ಕೆ ಬಿಗ್ ಟ್ವಿಸ್ಟ್ ಸಿಕ್ಕಿದೆ. ಸಿಂಗಾಪುರದಲ್ಲಿ ಅವರಿಗೆ ವಿಷ ನೀಡಲಾಗಿದೆ ಎಂದು ಅವರ ಬ್ಯಾಂಡ್ ಮೇಟ್ ಶೇಖರ್ ಜ್ಯೋತಿ ಗೋಸ್ವಾಮಿ ಸ್ಫೋಟಕ ಮಾಹಿತಿ ಹೊರಹಾಕಿದ್ದಾರೆ.

ಸಿಂಗಾಪುರದಲ್ಲಿ ಅವರ ಮ್ಯಾನೇಜರ್ ಸಿದ್ಧಾರ್ಥ್ ಶರ್ಮಾ ಮತ್ತು ಕಾರ್ಯಕ್ರಮ ಆಯೋಜಕ ಶ್ಯಾಮಕಾನು ಮಹಂತ ಅವರು ಗರ್ಗ್ ಅವರಿಗೆ ವಿಷ ನೀಡಿದ್ದಾರೆ ಎಂದು ಬಂಧಿತ ಆರೋಪಿ ಪೊಲೀಸರಿಗೆ ಹೇಳಿರುವುದಾಗಿ ಪಿಟಿಐ ಸುದ್ದಿಸಂಸ್ಥೆ ವರದಿ ಮಾಡಿದೆ.


ಈ ಪ್ರಕರಣದಲ್ಲಿ ಕಾರ್ಯಕ್ರಮದ ಆಯೋಜಕ ಮತ್ತು ಇಬ್ಬರು ಬ್ಯಾಂಡ್ ಸದಸ್ಯ ಅಮೃತಪ್ರಭ ಮಹಂತ ಅವರನ್ನು ಬಂಧಿಸಿ 14 ದಿನಗಳ ಪೊಲೀಸ್ ಕಸ್ಟಡಿಗೆ ಕಳುಹಿಸಲಾಗಿದೆ. ಗರ್ಗ್ ಅವರು ಸಿಂಗಾಪುರದಲ್ಲಿ ಸಮುದ್ರದಲ್ಲಿ ಈಜುತ್ತಿದ್ದಾಗ ನಿಗೂಢವಾಗಿ ಸಾವನ್ನಪ್ಪಿದ್ದರು. ಶ್ಯಾಮಕಾನು ಮಹಾಂತ ಮತ್ತು ಅವರ ಕಂಪನಿಯು ಆಯೋಜಿಸಿದ್ದ ಈಶಾನ್ಯ ಭಾರತ ಉತ್ಸವದ 4ನೇ ಆವೃತ್ತಿಯಲ್ಲಿ ಪಾಲ್ಗೊಳ್ಳಲು ಅವರು ಆಗ್ನೇಯ ಏಷ್ಯಾದ ರಾಷ್ಟ್ರಕ್ಕೆ ಹೋಗಿದ್ದಾಗ ಈ ಘಟನೆ ನಡೆದಿತ್ತು.

ಜುಬೀನ್ ಗರ್ಗ್ ಅವರು ಉಸಿರಾಡಲು ಏದುಸಿರು ಬಿಡುತ್ತಿರುವಾಗ, ಬಹುತೇಕ ಮುಳುಗುತ್ತಿರುವಾಗ, 'ಜಬೋ ದೇ, ಜಬೋ ದೇ' (ಅವರನ್ನು ಹೋಗಲಿ, ಹೋಗಲಿ) ಎಂದು ಸಿದ್ಧಾರ್ಥ್ ಶರ್ಮಾ ಕೂಗುವುದು ಕೇಳಿಸಿತ್ತು. ಜುಬೀನ್ ಗರ್ಗ್ ಅವರಿಗೆ ಈಜು ಬರುತಿತ್ತು. ಹೀಗಾಗಿ ಅವರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿಲ್ಲ ಎಂದು ಸಾಕ್ಷಿದಾರರು ಹೇಳಿದ್ದರು. ಶರ್ಮಾ ಮತ್ತು ಶ್ಯಾಮಕಾನು ಮಹಂತ ಅವರು ವಿಷಪ್ರಾಶನ ಮಾಡಿದ್ದಾರೆ. ಉದ್ದೇಶಪೂರ್ವಕವಾಗಿ ತಮ್ಮ ಪಿತೂರಿ ನಡೆಸಲು ಸಿಂಗಾಪುರ ಆಯ್ಕೆ ಮಾಡಿದ್ದಾರೆ ಎಂದು ಗೋ ಸ್ವಾಮಿ ತಿಳಿಸಿದ್ದಾರೆ.

CIDಯ ಒಂಬತ್ತು ಸದಸ್ಯರ ವಿಶೇಷ ತನಿಖಾ ತಂಡ ಪ್ರಸ್ತುತ ಸಿಂಗಾಪುರದಲ್ಲಿ ಗರ್ಗ್ ಸಾವಿನ ತನಿಖೆ ನಡೆಸುತ್ತಿದೆ. ಅಸ್ಸಾಂ ಸರ್ಕಾರವು ಪ್ರಕರಣದ ತನಿಖೆಗಾಗಿ ಏಕ ಸದಸ್ಯ ನ್ಯಾಯಾಂಗ ಆಯೋಗವನ್ನು ಸ್ಥಾಪಿಸಿದೆ. ರಿಮಾಂಡ್ ನೋಟಿನಲ್ಲಿ ಸತ್ಯಾಸತ್ಯತೆಯನ್ನು ಸಿಐಡಿ ಮೂಲಗಳು ಖಚಿತಪಡಿಸಿವೆ. ಶ್ಯಾಮಕಾನು ಮಹಂತ ಅವರು ಪ್ರಸ್ತುತ ಅಸ್ಸಾಂ ರಾಜ್ಯ ಮಾಹಿತಿ ಆಯೋಗದ ಮುಖ್ಯ ಮಾಹಿತಿ ಆಯುಕ್ತರಾಗಿರುವ ಮಾಜಿ ಡಿಜಿಪಿ ಭಾಸ್ಕರ್ ಜ್ಯೋತಿ ಮಹಂತ ಅವರ ಕಿರಿಯ ಸಹೋದರರಾಗಿದ್ದಾರೆ.

ಕಾರ್ಯಕ್ರಮ ಆಯೋಜಕರ ಇನ್ನೊಬ್ಬ ಸಹೋದರ ನಾನಿ ಗೋಪಾಲ್ ಮಹಂತ, ಅವರು ಗೌಹಾಟಿ ವಿಶ್ವವಿದ್ಯಾಲಯದ ಉಪಕುಲಪತಿಯಾಗುವ ಮೊದಲು ಸಿಎಂಗೆ ಶಿಕ್ಷಣ ಸಲಹೆಗಾರರಾಗಿದ್ದರು. ಪ್ರತ್ಯಕ್ಷದರ್ಶಿಯಾಗಿರುವ ಶೇಖರ್ ಜ್ಯೋತಿ ಗೋಸ್ವಾಮಿ ಅವರ ಹೇಳಿಕೆಯು ಜುಬೀನ್ ಗರ್ಗ್ ಅವರ ಸಾವನ್ನು ಆಕಸ್ಮಿಕ ಎಂದು ಬಿಂಬಿಸಲು ಸಂಚು ರೂಪಿಸಲಾಗಿದೆ ಎಂದು ಬಹಿರಂಗಪಡಿಸಿದೆ ಸಿಂಗಾಪುರದಲ್ಲಿ ತಮ್ಮೊಂದಿಗೆ ಉಳಿದುಕೊಂಡಿದ್ದ ಸಿದ್ಧಾರ್ಥ್ ಅನು ಮಾನಾಸ್ಪದ ರೀತಿಯಲ್ಲಿ ವರ್ತಿಸಿದ್ದಾರೆ ಎಂದು ಹೇಳಿದ್ದಾರೆ.

ಹುಟ್ಟುಹಬ್ಬದ ಶುಭಾಶಯ



ನರಸಿಂಹರಾಜ ಕ್ಷೇತ್ರದ ಶಾಸಕರೂ ಆದ ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಯುವ ಕಾಂಗ್ರೆಸ್ ವತಿಯಿಂದ ಸನ್ಮಾನಿಸಿ, ಶುಭಾಶಯ ಕೋರಲಾಯಿತು. ಈ ವೇಳೆ ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದೀಪಕ್ ಶಿವಣ್ಣ, ಮೈಸೂರು ನಗರ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರತಾಪ್, ಚಾಮರಾಜ ಕ್ಷೇತ್ರದ ಅಧ್ಯಕ್ಷ ನಿಶಾಂತ್ ಪಟೇಲ್, ಪ್ರಧಾನ ಕಾರ್ಯದರ್ಶಿ ಎನ್.ಚಂದ್ರು, ಕೃಷ್ಣರಾಜ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಮಲ್ಲೇಶ್, ಅಜೀಜ್ ಸೇಠ್ ಬ್ಲಾಕ್ ಯುವ ಕಾಂಗ್ರೆಸ್ ಉಪಾಧ್ಯಕ್ಷ ರಾಕೇಶ್, ಚೇತನ್, ಪ್ರಖ್ಯಾತ, ವಿಕ್ರಂ ಇನ್ನಿತರ ಯುವ ಮುಖಂಡರು ಉಪಸ್ಥಿತರಿದ್ದರು.

ಹತ್ತು ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ

ಮೈಸೂರು, ಅ.4– ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಬೆಂಗಳೂರು ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ (ಸಿಡಾಕ್), ಧಾರವಾಡ ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರ, ಮೈಸೂರು ಇವರ ಸಂಯುಕ್ತ ಆಶ್ರಯದಲ್ಲಿ ಮೈಸೂರು ಜಿಲ್ಲೆಯಲ್ಲಿ ಸ್ವಂತ ಉದ್ಯಮವನ್ನು ಸ್ಥಾಪಿಸಲು ಬಯಸುವ ಅಭ್ಯರ್ಥಿಗಳಿಗೆ ಹತ್ತು ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸ್ವಂತ ಉದ್ಯಮವನ್ನು ಸ್ಥಾಪಿಸ ಬಯಸುವ ಅಭ್ಯರ್ಥಿಗಳಿಗೆ ಉದ್ಯಮಶೀಲತಾ ಪ್ರೇರಣೆ, ಸ್ವಂತ ಉದ್ಯಮ ಸ್ಥಾಪನೆಗಾಗಿ ಸರ್ಕಾರ ಹಾಗೂ ಹಣಕಾಸು ಸಂಸ್ಥೆಗಳಿಂದ ದೊರೆಯುವ ನೆರವು/ಪ್ರೋತ್ಸಾಹ, ಉದ್ಯಮದಾರರಿಗೆ ದೊರೆಯುವ ಸೌಲಭ್ಯಗಳು ಮಾರುಕಟ್ಟೆ ಮುಂತಾದ ವಿಷಯಗಳ ಹಾಗೂ ಇತರೆ ಕೈಗಾರಿಕಾ ವಿಷಯಗಳ ಕುರಿತು ತರಬೇತಿಯಲ್ಲಿ ಮಾಹಿತಿಯನ್ನು ನೀಡಲಾಗುವುದು.

ಕಾರ್ಯಕ್ರಮದಲ್ಲಿ ಭಾಗವಹಿಸುವವರು ಕನಿಷ್ಠ 21 ವರ್ಷಗಳ ವಯಸ್ಸಿನವರಾಗಿರಬೇಕು ಹಾಗೂ ಕನಿಷ್ಠ ವಿದ್ಯಾರ್ಹತೆ 10ನೇ ತರಗತಿ ಉತ್ತೀರ್ಣರಾಗಿರಬೇಕು, ಆಸಕ್ತ ಅಭ್ಯರ್ಥಿಗಳು ಅಕ್ಟೋಬರ್ 09 ರೊಳಗೆ ಅರ್ಜಿಯನ್ನು ಜಂಟಿ ನಿರ್ದೇಶಕರು, ಸಿಡಾಕ್ ಜಿಲ್ಲಾ ಕೈಗಾರಿಕಾ ಕೇಂದ್ರ ಮೈಸೂರು ಇಲ್ಲಿಗೆ ಸಲ್ಲಿಸಬೇಕಾಗಿದೆ. ಅಥವಾ ದೂರವಾಣಿ ಕರೆ ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರು ಕಚೇರಿಯ ದೂ. ಸಂ: 6361611136/ 8310738819/ 7760145784 ನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಕೈಗಾರಿಕಾ ಕೇಂದ್ರ ಸಿಡಾಕ್ ನ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ದಿನಾಂಕ ವಿಸ್ತರಣೆ

ಮೈಸೂರು, ಅ.4– ಮೈಸೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ(ವೃತ್ತಿಪರ ಪದವಿ ಹಾಗೂ ಸ್ನಾತಕೋತ್ತರ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳಿಗೆ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ 2025–26ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಅಕ್ಟೋಬರ್ 14 ಕೊನೆಯ ವಿಸ್ತರಿಸಲಾಗಿದೆ.

ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ: ಪ್ರವರ್ಗ–1, ಎಸ್.ಸಿ & ಎಸ್.ಟಿ. ರೂ. 2.50 ಲಕ್ಷ ಪ್ರವರ್ಗ–2ಎ, 2ಬಿ, 3ಎ, 3ಬಿ, ಇತರೆ ಹಿಂದುಳಿದ, ವರ್ಗ ಹಾಗೂ ಇತರೆ ರೂ. 1.00 ಲಕ್ಷ ಇಲಾಖೆಯ ವೆಬ್‌ಸೈಟ್ https://shp.karnataka.gov.in/bcwdನ್ನು ಸಂಪರ್ಕಿಸಿ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬೆಸೈಟ್ https://bcwd.karnataka.gov.in/ನ್ನು ನೋಡಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.com ಮುಖಾಂತರ ಅಥವಾ ಜಿಲ್ಲಾ, ತಾಲ್ಲೂಕು ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸುವುದು.

ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ 8050770004 ಮತ್ತು 8050770005 ಸಂಪರ್ಕಿಸಬಹುದು ಎಂದು ಮೈಸೂರು ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿನಂದನೆ...



ಆಲ್ ಇಂಡಿಯಾ ರೈಲ್ವೆ ಎಂಪ್ಲಾಯೀಸ್ ಎಸ್‌ಸಿ/ಎಸ್‌ಟಿ ಅಸೋಸಿಯೇಷನ್‌ನ ನೈರುತ್ಯ ರೈಲ್ವೆ ಘಟಕದ ವತಿಯಿಂದ ಅಸೋಸಿಯೇಷನ್‌ನ ಕೇಂದ್ರ ಕಾರ್ಯಕಾರಿ ಸಮಿತಿಯ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ ಹಾಗೂ ನೈರುತ್ಯ ರೈಲ್ವೆ ಘಟಕದ ಪ್ರಧಾನ ಕಾರ್ಯದರ್ಶಿ ಎಂ.ಮೋಹನ್ ನೇತೃತ್ವದಲ್ಲಿ ವಿಧಾನ ಪರಿಷತ್ ನೂತನ ಸದಸ್ಯ ಡಾ.ಕೆ.ಶಿವಕುಮಾರ್ ಅವರನ್ನು ಅವರ ನಿವಾಸದಲ್ಲಿ ಶನಿವಾರ ಅಭಿನಂದಿಸಲಾಯಿತು. ಈ ವೇಳೆ ಅಸೋಸಿಯೇಷನ್‌ನ ವಲಯ ಕಾರ್ಯಾಧ್ಯಕ್ಷ ಹಾಗೂ ಮೈಸೂರು ವಿಭಾಗೀಯ ಕಾರ್ಯದರ್ಶಿ ವಿ.ನಂದಕುಮಾರ್, ಮೆಕ್ಯಾನಿಕಲ್ ಶಾಖೆಯ ಕಾರ್ಯದರ್ಶಿ ಸ್ವಾಮಿ, ಸದಸ್ಯ ವೆಂಕಟರಾಜು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಹೆಚ್.ಕೆ. ಸಿದ್ದರಾಜುಗೆ ಪಿಹೆಚ್.ಡಿ



ಮೈಸೂರು, ಅ.4– ಡಾ. ಹೆಚ್.ಎನ್. ನಾಗೇಂದ್ರ ಅವರ ಮಾರ್ಗದರ್ಶನದಲ್ಲಿ ಹೆಚ್.ಕೆ. ಸಿದ್ದರಾಜು ಅವರು ಅಭಿವೃದ್ಧಿ ಅಧ್ಯಯನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವಿದ್ಯುತ್ ದೀಪಾಲಂಕಾರ ಸವಿಯಲು ಮುಗಿ ಬೀಳುತ್ತಿರುವ ಜನ

ಮೈಸೂರಲ್ಲಿ ಮುಂದುವರೆದ ವಾಹನ, ಜನದಟ್ಟಣೆ





ಶನಿವಾರ ಸಂಜೆ ಆಲ್ಬರ್ಟ್ ವಿಕ್ಟರ್ ರಸ್ತೆಯಲ್ಲಿ ವಾಹನ ದಟ್ಟಣೆ ಸಾಮಾನ್ಯವಾಗಿ ಕಂಡು ಬಂದಿತು. ಮತ್ತೊಂದು ಚಿತ್ರದಲ್ಲಿ ದೇವರಾಜ ಅರಸು ರಸ್ತೆಯಲ್ಲಿ ತೆರೆದ ಗೂಡ್ಸ್ ಆಟೋದಲ್ಲಿ ದೀಪಾಲಂಕಾರ ವೀಕ್ಷಿಸುತ್ತಿರುವ ಜನ.

ಮೈಸೂರು,ಅ.4(ಪಿಎಂ)– ದಸರಾ ದೀಪಾಲಂಕಾರ ಕಣ್ತುಂಬಿಕೊಳ್ಳಲು ಜನರ ಹಿಂಡು ಬರುತ್ತಿರುವುದರಿಂದ ಮೈಸೂರು ನಗರದಲ್ಲಿ ವಾಹನ ಹಾಗೂ ಜನದಟ್ಟಣೆ ದಸರಾ ಬಳಿಕವೂ ಹೆಚ್ಚಾಗುತ್ತಿದೆ.

ದಸರಾದ ಮುಖ್ಯ ಆಕರ್ಷಣೆಯಾದ ಜಂಬೂ ಸವಾರಿ ಮೆರವಣಿಗೆ ಗುರುವಾರ ಸಂಪನ್ನಗೊಂಡಿದ್ದರೂ ನಗರದಲ್ಲಿನ ದೀಪಾಲಂಕಾರವನ್ನು ಅ.12ರವರೆಗೆ ಮುಂದುವರೆಸಲಾಗಿದೆ. ಹೀಗಾಗಿ ಸಂಜೆಯಾಗುತ್ತಿದ್ದಂತೆ ವಿದ್ಯುತ್ ದೀಪಗಳಲ್ಲಿ ಮೂಡಿರುವ ಬೆಳಕಿನ ಚಿತ್ತಾರ ನೋಡಿ ಸಂಭ್ರಮಿಸಲು ಕಾರು, ಬೈಕ್‌ಗಳಲ್ಲಿ ಜನರ ಸುತ್ತಾಟ ಜೋರಾಗುತ್ತಿದೆ.

ವಿಶೇಷವಾಗಿ ಓಪನ್ ಜೀಪ್, ಸನ್ ರೂಫ್ ಹೊಂದಿರುವ ಕಾರುಗಳಲ್ಲಿ ನಗರದ ಬೆಳಕಿನ ವಯ್ಯಾರ ಕಣ್ತುಂಬಿಕೊಳ್ಳುವುದು ಸಾಮಾನ್ಯವಾಗಿದೆ. ಅದಕ್ಕೂ ವಿಶೇಷವೆಂದರೆ ಸಾಕಷ್ಟು ಜನರು, ಗೂಡ್ಸ್ ಆಟೋಗಳಲ್ಲಿ ನಗರ ಸಂಚಾರ ನಡೆಸಿ ದೀಪಾಲಂಕಾರದ ಅಂದ ಸವಿಯುತ್ತಿದ್ದಾರೆ. ಅಲ್ಲದೆ, ಅಂಬಾರಿ ಓಪನ್ ಬಸ್ ಸಂಚಾರವೂ ಇದ್ದು, ಹೀಗಾಗಿ ಶನಿವಾರ ಸಂಜೆ ಸಹ ನಗರದಲ್ಲಿ ವಾಹನ ಸಂಚಾರ ಸುಗಮವಾಗಿರದೇ ಮೂರ್‍ನಾಲ್ಕು ತಾಸುಗಳ ಕಾಲ ದಟ್ಟಣೆಯಿಂದ ಕೂಡಿತ್ತು.

ಪ್ರತಿ ಸಿಗ್ನಲ್‌ನಲ್ಲೂ ಸವಾರರು ಮುಂದೆ ಸಾಗಲು ಕಾದು ಕಾದು ಸಾಕಾಗುತ್ತಿದ್ದರೆ, ಮತ್ತೊಂದೆಡೆ ಸಂಚಾರ ವ್ಯವಸ್ಥೆ ಸುಗಮಗೊಳಿಸಲು ಸಂಚಾರ ಪೊಲೀಸರು ಹರಸಾಹಸಪಡುತ್ತಿದ್ದರು. ಕೆಆರ್ ವೃತ್ತ, ಚಾಮರಾಜ ಒಡೆಯರ್ ವೃತ್ತ, ಜಯಚಾಮರಾಜ ಒಡೆಯರ್ ವೃತ್ತ, ಡಿ.ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ಚಾಮರಾಜ ಜೋಡಿ ರಸ್ತೆ, ಸಯ್ಯಾಜಿರಾವ್ ರಸ್ತೆಗಳಲ್ಲಿ ದೀಪಾಲಂಕಾರಕ್ಕೆ ಮನಸೋತು ಸೆಲ್ಫಿ ತೆಗೆದುಕೊಳ್ಳುವವರು, ಫೋಟೋ ಶೂಟ್ ಮಾಡುವವರು ರಸ್ತೆಗಿಳಿದಿದ್ದರೆ, ಮತ್ತೊಂದೆಡೆ ವಾಹನಗಳು ಸುಗಮವಾಗಿ ಸಾಗದ ಸನ್ನಿವೇಶ ನಿರ್ಮಾಣವಾಗಿತ್ತು.

ದೀಪಾಲಂಕಾರದ ಬೆಳಕಲ್ಲಿ ನಿಂತು ಸೆಲ್ಫಿ ತೆಗೆದುಕೊಳ್ಳುವುದು, ಗುಂಪುಗುಂಪಾಗಿ ಫೋಟೋ ತೆಗೆದುಕೊಳ್ಳುವುದು ಸಾಮಾನ್ಯವಾಗಿತ್ತು ಇನ್ನು ಸನ್‌ರೂಫ್ ಕಾರಿನಲ್ಲಿ ನಿಂತು ದೀಪಾಲಂಕಾರ ಚಿತ್ರೀಕರಿಸುವುದು ಕಂಡು ಬಂದಿತು. ಈ ನಡುವೆ ಬೆಳಕಿನ ಚಿತ್ತಾರ ನೋಡಲು ಗೂಡ್ಸ್ ಆಟೋಗಳ ಬಳಕೆ ಸಹ ವಿಶೇಷವಾಗಿ ಕಂಡುಬಂದಿತು. ಪಾನಿಪುರಿ, ಮಸಾಲೆ ಪುರಿ ಸೇರಿದಂತೆ ವಿವಿಧ ತಿನಿಸುಗಳ ವ್ಯಾಪಾರವೂ ರಸ್ತೆಬದಿಗಳಲ್ಲಿ ಜೋರಾಗಿತ್ತು

ದಶಮಂಟಪಗಳ ಬಹುಮಾನ ವಿತರಣ ವೇದಿಕೆಯಲ್ಲಿ ದಾಂಧಲೆ : ಮೂವರ ವಿರುದ್ಧ ಪ್ರಕರಣ ದಾಖಲು

ಮಡಿಕೇರಿ,ಅ.4– ವಿಜಯ ದಶಮಿಯ ಮರು ದಿನ ಮುಂಜಾನೆ ನಗರದ ಗಾಂಧಿ



ಮೈದಾನದಲಿರುವ ಕಲಾಸಂಭ್ರಮ ವೇದಿಕೆಯಲ್ಲಿ ದಶಮಂಟಪಗಳ ಬಹುಮಾನ ವಿತರಣಾ ಕಾರ್ಯಕ್ರಮದ ವೇದಿಕೆಯಲ್ಲಿ ದಾಂಧಲೆ ನಡೆಸಿದ ಮೂರು ಮಂದಿಯ ವಿರುದ್ಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ತೀರ್ಪುಗಾರರು ನೀಡಿದ ದಶಮಂಟಪಗಳ ಬಹುಮಾನ ತೀರ್ಪನ್ನು ವಿರೋಧಿಸಿ ಕರವಲೆ ಭಗವತಿ ದಸರಾ ಸಮಿತಿಯ 30ರಿಂದ 40 ಜನರು ಸೇರಿಕೊಂಡು ತೀರ್ಪುಗಾರಿಕೆಯಲಿ ಅನ್ಯಾಯವಾಗಿದೆ, ಮೋಸ, ಮೋಸ ಎಂದು ಧಿಕ್ಕಾರ ಕೂಗಿದ್ದರು. ಈ ವೇಳೆ ಪವನ್ ಕುಮಾರ್ ಕೆ.ಆರ್. ಕರವಲೆ ಭಗವತಿ ದಸರಾ ಸಮಿತಿಯ ಅಧ್ಯಕ್ಷ ವಿನೋದ್ ಕಾರ್ಯಪ್ಪ, ಸುಹಾಸ್ ಶೆಟ್ಟಿ ಮತ್ತು ಇತರರು ಕಲಾ ಸಂಭ್ರಮದ ವೇದಿಕೆಯ ಮೇಲೆ ಏಕಾಏಕಿ ಹತ್ತಿ ದಾಂದಲೆ ನಡೆಸಿದ್ದರು.

ವೇದಿಕೆಯ ಮೇಲಿದ್ದ ದಶಮಂಟಪದ ಬಹುಮಾನ ವಿಜೇತರಿಗೆ ನೀಡಲು ಇಟ್ಟಿದ್ದ ಚಿನ್ನ ಮತ್ತು ಬೆಳ್ಳಿಯ ಬಹುಮಾನಗಳನ್ನು ವೇದಿಕೆಯಿಂದ ಕೆಳಗೆ ಬಿಸಾಡಿ ನಷ್ಟ ಪಡಿಸಿದ್ದರು. ಅಲ್ಲಿದ್ದ ಮೈಕ್, ಪೋಡಿಯಂ, ಎಲ್.ಇ.ಡಿ ಸ್ಕ್ರೀನ್, ಪೇಪರ್ ಬ್ಲೋವರ್, ಧ್ವನಿವರ್ಧಕ, ಲೈಟ್ ಗಳನ್ನು ಒಡೆದು ಹಾನಿ ಮಾಡಿದ್ದರು. ವೇದಿಕೆಯ ಕೆಳಗೆ ಇದ್ದವರು ಸುಮಾರು 150 ಫೈಬರ್ ಕುರ್ಚಿಗಳನ್ನು ಒಡೆದು ಹಾಕಿ ಒಟ್ಟು ಸುಮಾರು 2 ಲಕ್ಷ ರೂ.ಗಳಷ್ಟು ನಷ್ಟಪಡಿಸಿರುವುದಾಗಿ ನಗರ ಪೊಲೀಸರು ಸುಮೋಟೋ ಕೇಸ್ ದಾಖಲಿಸಿಕೊಂಡಿದ್ದಾರೆ.

ಪ್ರಕರಣದಲ್ಲಿ ಭಾಗಿಯಾಗಿರುವ ಇತರ ಆರೋಪಿಗಳಿಗಾಗಿ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಇಲಾಖೆ ಮಾಹಿತಿ ನೀಡಿದೆ.

ಮಡಿಕೇರಿ ದಸರಾ ಜನೋತ್ಸವದಲ್ಲಿ ದಾಂಧಲೆ: ದಶಮಂಟಪಗಳ ಸಮಿತಿಯಿಂದ ಕ್ಷಮೆಯಾಚನೆ

ಮಡಿಕೇರಿ,ಅ.4– ಮಡಿಕೇರಿ ದಸರಾ



ಜನೋತ್ಸವದ ಪ್ರಮುಖ ಆಕರ್ಷಣೆಯಾದ ದಶಮಂಟಪಗಳಿಗೆ ಬಹುಮಾನ ವಿತರಿಸುವ ಸಂದರ್ಭ ಉಂಟಾದ ಕಹಿ ಘಟನೆಗೆ ವಿಷಾದ ವ್ಯಕ್ತಪಡಿಸುವುದಲ್ಲದೆ ಸರ್ವರಲ್ಲಿ ಕ್ಷಮೆಯಾಚಿಸುವುದಾಗಿ ಮಡಿಕೇರಿ ದಸರಾ ದಶಮಂಟಪ ಸಮಿತಿ ತಿಳಿಸಿದೆ.

ಪತ್ರಿಕಾ ಹೇಳಿಕೆ ನೀಡಿರುವ ದಶಮಂಟಪ ಸಮಿತಿಯ ಅಧ್ಯಕ್ಷ ಬಿ.ಎಂ.ಹರೀಶ್ ಅಣ್ವೇಕರ್ ಸಾರ್ವಜನಿಕರು, ಜನಪ್ರತಿನಿಧಿಗಳು, ದೇವಾಲಯ ಸಮಿತಿಗಳು ಹಾಗೂ ಸರ್ವ ಅಧಿಕಾರಿ ವರ್ಗದ ಸಹಕಾರದಿಂದ ಈ ಬಾರಿಯ ಮಡಿಕೇರಿ ದಸರಾ ಜನೋತ್ಸವವನ್ನು ಅತ್ಯಂತ ಯಶಸ್ವಿಯಾಗಿ ನಡೆಸಲಾಗಿದೆ. ಆದರೆ ಕೊನೆಯ ದಿನ ವಿಜಯದಶಮಿಯಂದು ಬಹುಮಾನ ಘೋಷಿಸುವ ಸಂದರ್ಭ ಉಂಟಾದ ಘಟನೆ ಕುರಿತು ಸಮಿತಿಯ ಪದಾಧಿಕಾರಿಗಳು ಹಾಗೂ ಸದಸ್ಯರುಗಳಿಗೆ ಬೇಸರವಿದ್ದು, ದಶಮಂಟಪ ಸಮಿತಿಯ ಪರವಾಗಿ ಸರ್ವರಲ್ಲಿ ಕ್ಷಮೆ ಕೋರುವುದಾಗಿ ತಿಳಿಸಿದ್ದಾರೆ.

ಜಿಲ್ಲಾಡಳಿತ, ಪೊಲೀಸ್ ಇಲಾಖೆ, ನಗರ ದಸರಾ ಸಮಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಕ್ಷಮೆಯಾಚಿಸುತ್ತೇವೆ. ಪೊಲೀಸ್ ಇಲಾಖೆ ಅತ್ಯಂತ ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಿದ್ದು, ಎಲ್ಲರ ಸುರಕ್ಷತೆಗೆ ಆದ್ಯತೆ ನೀಡಿದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ದಶ ಮಂಟಪ ಸಮಿತಿಯಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತೊಂದರೆಯಾಗಿದ್ದಲ್ಲಿ ಅದಕ್ಕೆ ವಿಷಾದ ವ್ಯಕ್ತಪಡಿಸುತ್ತೇವೆ. ಮುಂದಿನ ವರ್ಷಗಳಲ್ಲಿ ಈ ರೀತಿಯ ಘಟನೆಗಳು ನಡೆಯದಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುವುದು.

ನಾಡಹಬ್ಬ ದಸರಾವನ್ನು ಯಾವುದೇ ಗೊಂದಲವಿಲ್ಲದೆ ಅತ್ಯಂತ ಶಾಂತಿಯುತವಾಗಿ ನಡೆಸಲು ಸರ್ವರು ಒಗ್ಗಟ್ಟಾಗಿ ಸೇರಿ ಸಮಗ್ರ ಚಿಂತನೆ ನಡೆಸಲಾಗುವುದು. ಬಹುಮಾನದ ಆಯ್ಕೆ ವಿಚಾರವಾಗಿ ನೂತನ ಮಾರ್ಗೋಪಾಯಗಳನ್ನು ಕಂಡುಕೊಳ್ಳಲಾಗುವುದು. ಈ ಕ್ರಮಕ್ಕೆ ದಶಮಂಟಪ ಸಮಿತಿಗಳ ಒಪ್ಪಿಗೆಯನ್ನು ಪಡೆಯಲಾಗುವುದು ಎಂದು ಅಧ್ಯಕ್ಷ ಬಿ.ಎಂ.ಹರೀಶ್ ಅಣ್ವೇಕರ್ ತಿಳಿಸಿದ್ದಾರೆ.

ಕೊಡಗಲ್ಲಿ ಅಂತರರಾಷ್ಟ್ರೀಯ ಕಾಫಿ ದಿನ ಆಚರಣೆ

ಕಾಫಿ ಉತ್ಪಾದನೆ ಹೆಚ್ಚಿಸುವ ಗುರಿ, ಆರೋಗ್ಯ ದೃಷ್ಟಿಯಿಂದ ಕಾಫಿ ಸೇವನೆಗೆ ನಿರ್ಧಾರ

ಮಡಿಕೇರಿ,ಅ.4– ಕೊಡಗು ಮಹಿಳಾ ಕಾಫಿ ಜಾಗೃತಿ ಸಂಸ್ಥೆ ವತಿಯಿಂದ ಅಂತರರಾಷ್ಟ್ರೀಯ ಕಾಫಿ ದಿನವನ್ನು ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ಸಭಾಂಗಣದಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ, ಕಾಫಿ ಉತ್ಪಾದನೆಯನ್ನು ಹೆಚ್ಚಿಸುವ ಗುರಿ ಹಾಗೂ ಆರೋಗ್ಯದ ದೃಷ್ಟಿಯಿಂದ ಕಾಫಿ ಸೇವನೆಯ ಮಹತ್ವದ ಬಗ್ಗೆ ಗಣ್ಯರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಕೂರ್ಗ್ ಪ್ಲಾಂಟರ್ಸ್ ಅಸೋಸಿಯೇಷನ್‌ನ ಮಾಜಿ ಅಧ್ಯಕ್ಷ ಎನ್.ಎ.ಅಪ್ಪಯ್ಯ, ಭಾರತೀಯ ಕಾಫಿಯನ್ನು ಜಾಗತಿಕ ಮಟ್ಟದಲ್ಲಿ ಪ್ರಚಾರಪಡಿಸುವಲ್ಲಿ ಕಾಫಿ ಡೇ ಸಂಸ್ಥಾಪಕ ದಿ.ಸಿದ್ಧಾರ್ಥ್ ಅವರ ಕೊಡುಗೆಯನ್ನು ಸ್ಮರಿಸಿದರು. ಭಾರತಕ್ಕೆ ಕಾಫಿ ಪರಿಚಯವಾಗಿ 400 ವರ್ಷಗಳು ಸಂದಿವೆ ಎಂಬ ಅಂಶವನ್ನು ಅವರು ಉಲ್ಲೇಖಿಸಿದರು. ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ರೈತ ಉತ್ಪಾದಕ ಸಂಸ್ಥೆಗಳನ್ನು ಸ್ಥಾಪಿಸಿ ಗುಣಮಟ್ಟದ ಕಾಫಿ ಉತ್ಪಾದನೆ ಮತ್ತು ನೇರ ಮಾರುಕಟ್ಟೆ ಮಾಡಿದಲ್ಲಿ ಉತ್ತಮ ಮತ್ತು ಸ್ಥಿರ ಬೆಲೆ ನಿರೀಕ್ಷಿಸಬಹುದು ಎಂದು ಸಲಹೆ ನೀಡಿದರು.



ಆರೋಗ್ಯದ ದೃಷ್ಟಿಯಿಂದ ಕಾಫಿ ಸೇವನೆಯ ಮಹತ್ವದ ಬಗ್ಗೆ ಗಣ್ಯರು ಮಾತನಾಡಿದರು.

ಆರೋಗ್ಯಕ್ಕೆ ಕಾಫಿ ಉತ್ತಮ: ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಷನ್‌ನ ಉಪಾಧ್ಯಕ್ಷ ಎಂ.ಸಿ.ಕಾರ್ಯಪ್ಪ ಮಾತನಾಡಿ, ಆರೋಗ್ಯ ದೃಷ್ಟಿಯಿಂದ ಕಾಫಿ ಸೇವನೆಯ ಉಪಯುಕ್ತತೆಗಳನ್ನು ವಿವರಿಸಿದರು. ವಿದ್ಯಾರ್ಥಿಗಳು ಮತ್ತು ಯುವಜನತೆ ಉತ್ತಮ ಪಾನೀಯವಾಗಿ ಡಾರ್ಕ್ ರೋಸ್ಟೆಡ್ ಕಾಫಿಯನ್ನು ಸೇವಿಸುವುದನ್ನು ರೂಢಿಸಿ ಕೊಳ್ಳಬೇಕು. ವೈದ್ಯಕೀಯ ವಿದ್ಯಾರ್ಥಿಗಳು ಇದರ ಕುರಿತು ಆಳವಾದ ಅಧ್ಯಯನ ನಡೆಸಬೇಕು ಎಂದರು.

ವೈದ್ಯರಿಂದ ಬೆಂಬಲ: ಡೀನ್ ಮತ್ತು ನಿರ್ದೇಶಕ ಡಾ. ಲೋಕೇಶ್ ಮಾತನಾಡಿ, ಉತ್ತಮ ಗುಣಮಟ್ಟದ ಕಾಫಿ ಸೇವನೆ ಆರೋಗ್ಯಕ್ಕೆ ಮತ್ತು ಜನರೊಂದಿಗೆ ಸಂವಹನಕ್ಕೆ ಉತ್ತೇಜಕವಾಗಿದೆ ಎಂದು ಅಭಿಪ್ರಾಯಪಟ್ಟರು. ತುರ್ತು ಚಿಕಿತ್ಸಾ ಘಟಕದ ಮುಖ್ಯಸ್ಥ ಡಾ. ಮೋಹನ್ ಅಪ್ಪಾಜಿ ಮಾತನಾಡಿ ಕಾಫಿ ಸೇವನೆಯಿಂದ ಹಲವು ಆರೋಗ್ಯ ಸಮಸ್ಯೆಗಳು ಗುಣಮುಖವಾಗಿರುವುದನ್ನು ಕಂಡಿದ್ದೇವೆ. ನಮ್ಮ ಕಾಫಿಯನ್ನು ಉತ್ತಮ ಗುಣಮಟ್ಟದೊಂದಿಗೆ ಉತ್ಪಾದಿಸಿ ಪ್ರಚಾರ ಮಾಡಬೇಕು ಎಂದರು. ಅಂತರರಾಷ್ಟ್ರೀಯ ಕಾಫಿ ದಿನದ ಮಾದರಿಯಲ್ಲೇ ರಾಷ್ಟ್ರೀಯ ಕಾಫಿ ದಿನವನ್ನು ಆಚರಿಸುವಂತಾಗಬೇಕು ಎಂದು ಕರೆ ನೀಡಿದರು.

ಜಾಗತಿಕ ಸ್ಥಾನಮಾನ: ಕಾಫಿ ಮಂಡಳಿ ಉಪ ನಿರ್ದೇಶಕ ಡಾ. ವಿ.ಚಂದ್ರಶೇಖರ್ ಮಾತನಾಡಿ, ಭಾರತವು ವಿಶ್ವದಲ್ಲಿ 7ನೇ ಅತಿ ದೊಡ್ಡ ಕಾಫಿ ಉತ್ಪಾದಕ ದೇಶವಾಗಿದ್ದು 5ನೇ ಅತಿ ದೊಡ್ಡ ಕಾಫಿ ರಫ್ತು ದೇಶವಾಗಿದೆ. ಈ ನಿಟ್ಟಿನಲ್ಲಿ ಕಾಫಿ ಮಂಡಳಿ ಯಾವಾಗಲೂ ಬೆಳೆಗಾರರಿಗೆ ಬೆಂಬಲವಾಗಿ ನಿಲ್ಲುತ್ತದೆ ಎಂದು ಭರವಸೆ ನೀಡಿದರು.

ಕೂರ್ಗ್ ಪ್ಲಾಂಟರ್ಸ್ ಅಸೋಸಿಯೇಷನ್‌ನ ಅಧ್ಯಕ್ಷ ನಂದಾ ಬೆಳ್ಯಪ್ಪ ಮಾತನಾಡಿ ಭಾರತದ ಒಟ್ಟು ಕಾಫಿ ಉತ್ಪಾದನೆಯಲ್ಲಿ ಕೊಡಗು ಶೇ.40ರಷ್ಟು ಕೊಡುಗೆ ನೀಡುತ್ತದೆ. ಕಾಫಿ ಕೊಡಗಿನ ಕೇವಲ ಪಾನೀಯವಲ್ಲ, ಅದೊಂದು ಸಂಸ್ಕೃತಿಯಾಗಿದೆ ಎಂದು ಪ್ರತಿಪಾದಿಸಿದರು. ಕಾಫಿ ಮಂಡಳಿ ನಿರ್ದೇಶಕರಾದ ತಲೂರು ಕಿಶೋರ್ ಕುಮಾರ್ ಅವರು ಕೇಂದ್ರ ಸರ್ಕಾರದ ಉತ್ತೇಜಕ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.

ಸುಲೀಕುಾದಕೇಂದ್ರ: ಕೊಡಗು ಮಹಿಳಾ ಕಾಫಿ ಜಾಗೃತಿ ಸಂಸ್ಥೆಯ ಖಜಾಂಚಿ ಕುಟ್ಟೆಟಿರ ಕುಮಾರಿ ಕುಂಞಪ್ಪ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ವಿವರಿಸಿದರು. ಸಂಸ್ಥೆಯು 450ರಿಂದ 500 ಸದಸ್ಯರನ್ನು ಹೊಂದಿದ್ದು ಕಾಫಿ ಕುರಿತು ಜಾಗೃತಿ ಕಾರ್ಯಕ್ರಮಗಳ ಜೊತೆಗೆ ರೈತರಿಗೆ ಜೇನು ಸಾಕಾಣಿಕೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಮುಂತಾದ ಕೃಷಿ ಸಂಬಂಧಿತ ಕಾರ್ಯಾಗಾರಗಳನ್ನು ನಡೆಸುತ್ತಾ ಬಂದಿದೆ ಎಂದು ತಿಳಿಸಿದರು.

ಅ.8, ಲೋಕಾಯುಕ್ತದಿಂದ ದೂರು ಅರ್ಜಿ ಸ್ವೀಕಾರ

ಮಡಿಕೇರಿ, ಅ.4– ಕರ್ನಾಟಕ ಲೋಕಾಯುಕ್ತ ಮಡಿಕೇರಿಯ ಲೋಕಾಯುಕ್ತ ಅಧಿಕಾರಿಗಳು ಅ.8 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ವಿರಾಜಪೇಟೆ ತಾಲೂಕಿನ ವಿರಾಜಪೇಟೆ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಲೋಕಾಯುಕ್ತ ಕಾಯಿದೆಯಡಿ ದೂರು ಅರ್ಜಿ ವಿತರಿಸಲಿದ್ದಾರೆ. ಭರ್ತಿ ಮಾಡಿದ ಮತ್ತು ನೋಟರಿಯಿಂದ ಅಫಿಡವಿಟ್ ಮಾಡಿಸಿದ ಅರ್ಜಿ ಸ್ವೀಕರಿಸಲಾಗುವುದು.

ಸರ್ಕಾರಿ ಕಚೇರಿಗಳಲ್ಲಿ ಅಧಿಕೃತ ಕೆಲಸಗಳಲ್ಲಿ ವಿಳಂಬ ಹಾಗೂ ಇನ್ನಿತರ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಸಾರ್ವಜನಿಕರು ದೂರುಗಳನ್ನು ನಿಗದಿತ ಪತ್ರದಲ್ಲಿ ನೀಡಬಹುದಾಗಿದೆ. ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಲು ಕೋರಿದೆ. ಹೆಚ್ಚಿನ ವಿವರಗಳಿಗೆ ಮಡಿಕೇರಿ ಲೋಕಾಯುಕ್ತ ಪೊಲೀಸ್ ಕಚೇರಿ, ಗೌಳಿಬೀದಿ, ದೂ.ಸಂ.08272–295297 ನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ತಿಳಸಿದ್ದಾರೆ.

ಪೌರಕಾರ್ಮಿಕರ ಕುಟುಂಬಕ್ಕೆ ನಿವೇಶನ ಒದಗಿಸಲು ಬದ್ಧ



ಚಾಮರಾಜನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿದರು.

ಮಡಿಕೇರಿ, ಅ.4– ಸಫಾಯಿ ಕರ್ಮಚಾರಿಗಳ, ಮ್ಯಾನ್ಯುವೆಲ್ ಸ್ಕ್ಯಾವೆಂಜರ್‌ಗಳ ಜಿಲ್ಲಾ ಜಾಗೃತಿ ಸಮಿತಿ ಸಭೆಯು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆಯಿತು.

ಸಭೆಯ ಆರಂಭದಲ್ಲಿ ಮಾತನಾಡಿದ ಸಮಿತಿ ಸದಸ್ಯರಾದ ಡಿ.ಆರ್.ರಾಜು ಅವರು ಗೋಣಿಕೊಪ್ಪದಲ್ಲಿ ಪೌರಕಾರ್ಮಿಕರು ಎರಡು ಬದಿ ಚರಂಡಿ ನೀರು ಹರಿಯುವ ಮಧ್ಯದಲ್ಲಿ ಪ್ರಾಣಿಗಳಂತೆ ವಾಸ ಮಾಡುತ್ತಿದ್ದು, ಈ ಕುಟುಂಬಗಳಿಗೆ ನಿವೇಶನ ಒದಗಿಸಿ ಗೃಹಭಾಗ್ಯ ಯೋಜನೆಯಡಿ ಮನೆ ನಿರ್ಮಿಸಿ ಕೊಡಬೇಕು ಎಂದು ಮನವಿ ಮಾಡಿದರು.

ಪೌರಕಾರ್ಮಿಕರು ಎರಡು ತಲೆಮಾರುಗಳಿಂದ ಅದೇ ಸ್ಥಳದಲ್ಲಿಯೇ ವಾಸ ಮಾಡುತ್ತಿದ್ದು, ಇವರಿಗೆ ಇದುವರೆಗೆ ನಿವೇಶನ ಒದಗಿಸಿಲ್ಲ. ಆದ್ದರಿಂದ ಮಾನವೀಯ ದೃಷ್ಟಿಯಿಂದ ಜಿಲ್ಲೆಯಲ್ಲಿನ ನಿವೇಶನ ರಹಿತ ಪೌರಕಾರ್ಮಿಕರಿಗೆ ವಸತಿ ಹಾಗೂ ಮನೆ ನಿರ್ಮಿಸಿಕೊಡಬೇಕು ಎಂದು ಡಿ.ಆರ್.ರಾಜು ಕೋರಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ತಾಲ್ಲೂಕು ಪಂಚಾಯಿತಿ ಇಒ ಅವರು ಪೌರಕಾರ್ಮಿಕರಿಗೆ ನಿವೇಶನ ಗುರುತಿಸಬೇಕು. ಜೊತೆಗೆ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಮನೆ ನಿರ್ಮಾಣಕ್ಕೆ ಅಗತ್ಯ ಕ್ರಮವಹಿಸುವಂತೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಡಿ.ಆರ್.ರಾಜು ಅವರು ಮಾತನಾಡಿ ಪೌರಕಾರ್ಮಿಕರಲ್ಲಿ ಕೆಲವರಿಗೆ ಖಾಯಂ ಆಗಿದ್ದು, ಇನ್ನು ಹಲವರಿಗೆ ಖಾಯಂ ಮಾಡಿಲ್ಲ. ಆ ನಿಟ್ಟಿನಲ್ಲಿ ಪೌರಕಾರ್ಮಿಕರಿಗೆ ಸೂಕ್ತ ಸೇವಾ ಭದ್ರತೆ ಒದಗಿಸಬೇಕು ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಸಮಿತಿ ಸದಸ್ಯರಾದ ರಂಗಸ್ವಾಮಿ ಅವರು ಪೌರಕಾರ್ಮಿಕರಿಗೆ ಸೇವಾ ಭದ್ರತೆ ಒದಗಿಸುವುದರ ಜೊತೆಗೆ ನೇಮಕಾತಿ ಆದೇಶ ಪತ್ರ ನೀಡಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ವಿರಾಜಪೇಟೆ ಪುರಸಭೆ ಮುಖ್ಯಾಧಿಕಾರಿ ನಾಚಪ್ಪ ಅವರು ವಿರಾಜಪೇಟೆಯಲ್ಲಿ 15 ಮಂದಿ ಖಾಯಂ ಪೌರಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಶೇಖರ್ ಅವರು ಹಲವು ಮಾಹಿತಿ ನೀಡಿದರು. ಸಮಿತಿ ಸದಸ್ಯರಾದ ರೂಪಾ, ತೇಜಾವತಿ, ರಾಜೇಶ್ವರಿ, ನಗರಾಭಿವೃದ್ಧಿ ಯೋಜನಾ ಶಾಖೆಯ ಯೋಜನಾ ನಿರ್ದೇಶಕರಾದ ಬಿ.ಬಸಪ್ಪ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್, ಪುರಸಭೆ ಮುಖ್ಯಾಧಿಕಾರಿಗಳಾದ ಕೃಷ್ಣಪ್ರಸಾದ್, ನಾಚಪ್ಪ, ಗಿರೀಶ್, ಗೋಪಿ, ತಾ.ಪಂ.ಇಒಗಳಾದ ಪರಮೇಶ್, ಅಪ್ಪಣ್ಣ, ತಹಶೀಲ್ದಾರ್ ಕಿರಣ್ ಗೌರಯ್ಯ ಇತರರು ಇದ್ದರು.

ಸುರೇಶ್ ನಿಧನ

ನಾಪೋಕ್ಲು: ಚೆಯ್ಯಂಡಾಣೆ ಗ್ರಾಮ



ಪಂಚಾಯಿತಿಯ ಚೇಲಾವರ ಗ್ರಾಮದ ನಿವಾಸಿ ಜೈನೀರ ಪೊನ್ನಪ್ಪನವರ ಪುತ್ರ ಸುರೇಶ್(76) ಶನಿವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಶನಿವಾರ ಚೇಲಾವರ ಗ್ರಾಮದ ಸ್ವಗೃಹದಲ್ಲಿ ನೆರವೇರಿಸಲಾಯಿತು.

ಮೃತರು ಪತ್ನಿ ಅಹಲ್ಯ ಹಾಗೂ ಬಂಧು ಬಳಗವನ್ನು ಅಗಲಿದ್ದಾರೆ.

ಅಬ್ದುಲ್ಲಾ

ನಾಪೋಕ್ಲು: ಸ್ಥಳೀಯ ಇಂದಿರಾ ನಗ



ರದ ನಿವಾಸಿ ಅಬ್ದುಲ್ಲಾ (63) ಶನಿವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಶನಿವಾರ ನಾಪೋಕ್ಲು ಮುಹಿಯುದ್ದೀನ್ ಜುಮಾಮಸೀದಿಯ ಖಬರ್ ಸ್ಥಾನದಲ್ಲಿ ನೆರವೇರಿಸಲಾಯಿತು.

ಮೃತರು ಪತ್ನಿ ರುಕ್ಕಿಯ, ಮೂರು ಗಂಡು, ಮೂರು ಹೆಣ್ಣು ಮಕ್ಕಳು ಸೇರಿದಂತೆ ಬಂಧು ಬಾಂಧವರನ್ನು ಅಗಲಿದ್ದಾರೆ.

ಸೌಹಾರ್ದ ದಯಾನ್ ನಗರದಲ್ಲಿ ನೀರಿಗೆ ಹಾಹಾಕಾರ

ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ; ಕುಡಿಯುವ ನೀರು ಸಮಸ್ಯೆ ನಿವಾರಿಸಲು ಸೂಚನೆ

ಚಾಮರಾಜನಗರ, ಅ.4– ಚಾಮರಾಜನಗರ ನಗರಸಭೆ ವ್ಯಾಪ್ತಿಯ ಸೌಹಾರ್ದ ದಯಾನ್ ನಗರದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದ್ದು, ವಿಷಯ ತಿಳಿದ ಶಾಸಕ ಸಿ.ಪುಟ್ಟರಂಗಶೆಟ್ಟಿ ಶನಿವಾರ ನಗರಸಭೆ ಆಯುಕ್ತ, ಎಇಇ ಜತೆ ಭೇಟಿ ನೀಡಿ, ನಿವಾಸಿಗಳ ಸಮಸ್ಯೆ ಆಲಿಸಿದರು.

ಇದೇ ವೇಳೆ ನಿವಾಸಿಗಳು ತಮ್ಮ ಬಡಾವಣೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ವ್ಯಾಪಕವಾಗಿದ್ದು, ನೀರಿನ ಸಮಸ್ಯೆ ನಿವಾರಿಸಬೇಕು, ಚರಂಡಿಯಲ್ಲಿ ಸಂಗ್ರಹವಾಗಿರುವ ಕಸ–ಕಡ್ಡಿ ತೆರವುಗೊಳಿಸಬೇಕು ಎಂಬ ದೂರುಗಳನ್ನು ಶಾಸಕರ ಗಮನಕ್ಕೆ ತಂದರು.

ಇದೇ ವೇಳೆ ಶಾಸಕರು ಪ್ರತಿಕ್ರಿಯಿಸಿ' ಬಡಾವಣೆಯ ಯಾವುದೇ ಭಾಗದಲ್ಲಿಯಾದರೂ ನೀರು ಬರುವ ಕಡೆ ಪಾಯಿಂಟ್ ಮಾಡಿಸಿ, ಕೊಳವೆಬಾವಿ ಕೊರೆಸಿ, ಕುಡಿಯುವ ನೀರುಒದಗಿಸಲಾಗುವುದು ಎಂದರು.

ಬಡಾವಣೆಯಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಿ, ಸ್ವಚ್ಛತಾ ವಾತಾವರಣ ಕಲ್ಪಿಸಬೇಕು, ಶೀಘ್ರವೇ ಕೊಳವೆ ಬಾವಿ ಕೊರೆಸಲು ಪಾಯಿಂಟ್ ಮಾಡಿಸಲು ಕ್ರಮವಹಿಸಬೇಕು, ಪೈಪ್‌ಲೈನ್ ಡ್ಯಾಮೇಜ್ ಆಗದಂತೆ ನೋಡಿಕೊಳ್ಳಬೇಕು ಎಂದು ನಗರಸಭೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮನೆಯವರು ಸಹ ಮನೆಯಲ್ಲಿ ಸಂಗ್ರಹವಾಗುವ ಕಸವನ್ನು ಚರಂಡಿಯಲ್ಲಿ ಬಿಸಾಡದೇ, ಕಸದ ವಾಹನಕ್ಕೆ ಹಾಕಬೇಕು ಎಂದು ನಿವಾಸಿಗಳಿಗೆ ತಿಳಿಸಿದರು.



ಸೌಹಾರ್ದ ದಯಾನ್‌ನಗರದ ಚರಂಡಿಯಲ್ಲಿ ಮಡುಗಟ್ಟಿದ್ದ ತ್ಯಾಜ್ಯವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ, ನಗರಸಭೆ ಆಯುಕ್ತ, ಎಇಇ ಸಮ್ಮುಖದಲ್ಲಿ ಜೆಸಿಬಿಯಿಂದ ತೆರವು ಮಾಡಲಾಯಿತು.

ಇದೇ ವೇಳೆ ಚರಂಡಿಯಲ್ಲಿ ಮಡುಗಟ್ಟಿದ್ದ ತ್ಯಾಜ್ಯವನ್ನು ಜೆಸಿಬಿಯಿಂದ ತೆರವುಮಾಡಿ, ನೀರುಸರಾಗವಾಗಿ ಹರಿದು ಹೋಗುವಂತೆ ಮಾಡಲಾಯಿತು.

ಚರಂಡಿಗೆ ಮುಚ್ಚಲಾಗಿದ್ದ ಸಿಮೆಂಟ್ ಸ್ಲ್ಯಾಬ್‌ಗಳನ್ನು ತೆಗೆದುಹಾಕಿ, ಚರಂಡಿಯನ್ನು ಸ್ವಚ್ಛಗೊಳಿಸಲಾಯಿತು.

ನಗರಸಭೆ ಆಯುಕ್ತ ಎಸ್.ವಿ.ರಾಮದಾಸ್, ಎಇಇ ಪ್ರಕಾಶ್, ಚುಡಾ ಮಾಜಿ ಅಧ್ಯಕ್ಷ ಸಯ್ಯದ್‌ರಫಿ, ಜಿಪಂ ಕೆಡಿಪಿ ಸದಸ್ಯ ಸಯ್ಯದ್, ಸಿದ್ದಿಕ್ ವುಲ್ಲ. ಚಾಂದ್ ನಿವಾಸಿಗಳು ಹಾಜರಿದ್ದರು.

ಎಂಎಂ ಹಿಲ್ಸ್‌ನಲ್ಲಿ ಮತ್ತೊಂದು ಹುಲಿಗೆ ವಿಷಪ್ರಾಶನ

ಇಬ್ಬರು ಶಂಕಿತರು ವಶಕ್ಕೆ

ಹನೂರು,ಅ.4– ಮಲೆ ಮಹದೇಶ್ವರ(ಎಂಎಂ) ಬೆಟ್ಟದಲ್ಲಿ ಮತ್ತೊಂದು ಹುಲಿ ಮೃತಪಟ್ಟಿದ್ದು, ಆ ಹುಲಿಗೆ ವಿಷಪ್ರಾಶನ ಮಾಡಿ ಹತ್ಯೆ ಮಾಡಿದ ಆರೋಪದ ಮೇಲೆ ಶಂಕಿತರನ್ನು ಶನಿವಾರ ವಶಕ್ಕೆ ಪಡೆಯಲಾಗಿದೆ.

ಪಚ್ಚೆದೊಡ್ಡಿ ತಾಂಡಾ ನಿವಾಸಿಗಳಾದ ಪಚ್ಚೆಮಲ್ಲು ಮತ್ತು ಮಂಜುನಾಥ ಎಂಬುವವರನ್ನು ಹನೂರು ವಲಯ ಅರಣ್ಯಾಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಪ್ರಾಥಮಿಕ ಮಾಹಿತಿ ಪ್ರಕಾರ ಹುಲಿಗೆ ವಿಷಪ್ರಾಶನ ಮಾಡಿ ಕೊಂದಿರುವುದಾಗಿ ತಿಳಿದುಬಂದಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಅರಣ್ಯ ಸಚಿವ ಈಶ್ವರ್ ಖಂಡ್ರೆ, ಈ ಪ್ರದೇಶವನ್ನು ಹುಲಿ ಮೀಸಲು ಪ್ರದೇಶವೆಂದು ಘೋಷಿಸುವ ಬಗ್ಗೆ ನಿವಾಸಿಗಳೊಂದಿಗೆ ಸಮಾಲೋಚನೆ ನಡೆಸಿ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿರುವುದಾಗಿ ತಿಳಿಸಿದ್ದಾರೆ.

ಅ.2 ರಂದು 12 ವರ್ಷದ ಹುಲಿಯ ಮೃತದೇಹ ಪತ್ತೆಯಾಗಿದ್ದು, ಪ್ರಾಥಮಿಕ ತನಿಖೆಯ ಪ್ರಕಾರ, ಆ ಪ್ರಾಣಿಗೆ ವಿಷಪ್ರಾಶನ ಮಾಡಿರುವುದು ಕಂಡುಬಂದಿದೆ. ಈಗಾಗಲೇ ಹನೂರು ವಲಯ ಅರಣ್ಯಾಧಿಕಾರಿಗಳು ಇಬ್ಬರನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಮತ್ತು ಪ್ರಾಥಮಿಕ ಮಾಹಿತಿ ಪ್ರಕಾರ ಹುಲಿಗೆ ವಿಷಪ್ರಾಶನ ಮಾಡಿ ಕೊಂದಿರುವುದಾಗಿ ತಿಳಿದುಬಂದಿದೆ. ವಿಚಾರಣೆ ನಡೆಯುತ್ತಿದೆ ಮತ್ತು ಸಾವಿಗೆ ನಿಜವಾದ ಕಾರಣ ಶೀಘ್ರದಲ್ಲೇ ತಿಳಿಯಲಿದೆ ಎಂದು ಅವರು ಹೇಳಿದರು.

ಕಾರು ಡಿಕ್ಕಿ : ಮಾದಪ್ಪನ ಬೆಟ್ಟಕ್ಕೆ ಹೊರಟಿದ್ದ ಭಕ್ತ ಸಾವು

ಯಳಂದೂರು, ಅ.4– ಅಪರಿಚಿತ ಕಾರೊಂದು ಡಿಕ್ಕಿ ಹೊಡೆದು ಮಹದೇಶ್ವರ



ಬೆಟ್ಟಕ್ಕೆ ತೆರಳುತ್ತಿದ್ದ ಭಕ್ತರೊಬ್ಬರು ಮೃತಪಟ್ಟಿರುವ ಘಟನೆ ತಾಲೂಕಿನ ಯರಿಯೂರು ಗ್ರಾಮದ ಬಳಿ ನಡೆದಿದೆ.

ಗುಂಡ್ಲುಪೇಟೆ ತಾಲೂಕಿನ ನಿಟ್ರೆ ಗ್ರಾಮದ ನಿವಾಸಿ ಸಿದ್ದರಾಜು(34) ಮೃತಪಟ್ಟ ದುರ್ದೈವಿಯಾಗಿದ್ದು, ಮತ್ತೊಬ್ಬರು ಗಾಯಗೊಂಡಿದ್ದಾರೆ. ಮಲೆಮಹದೇಶ್ವರ ಬೆಟ್ಟಕ್ಕೆ ಕಾಲ್ನಡಿಗೆಯಲ್ಲಿ ನಿಟ್ರೆ ಗ್ರಾಮದ ನಿವಾಸಿಗಳು ತೆರಳುತ್ತಿದ್ದರೆನ್ನಲಾಗಿದೆ. ಯಳಂದೂರು ಪಟ್ಟಣದಲ್ಲಿ ರಾತ್ರಿ ತಂಗಿ ಮತ್ತೆ ಬೆಳಗಿನ ಜಾವ ಕಾಲ್ನಡಿಗೆಯಲ್ಲಿ ಸಾಗುತ್ತಿದ್ದರು. ಈ ವೇಳೆ ತಾಲೂಕಿನ ಯರಿಯೂರು ಗ್ರಾಮದ ಬಳಿ ಅಪರಿಚಿತ ಕಾರು ಇವರಿಗೆ ಡಿಕ್ಕಿ ಹೊಡೆದಿದ್ದು, ಸಿದ್ದರಾಜು ಸ್ಥಳದಲ್ಲೆ ಮೃತಪಟ್ಟರೆ ಮಲ್ಲೇಶ್ ಎಂಬುವರಿಗೆ ತಲೆಗೆ ತೀವ್ರ ಪೆಟ್ಟಾಗಿದೆ. ಮೈಸೂರಿನ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಈ ಸಂಬಂಧ ಯಳಂದೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಮುಂದಿನ ಕ್ರಮ ವಹಿಸಲಾಗಿದೆ.

ಪತ್ನಿ ಎದುರೆ ಕಾವೇರಿ ನದಿಗೆ ಜಿಗಿದ ಪತಿ

ಕೊಳ್ಳೇಗಾಲ: ಕೌಟುಂಬಿಕ ಕಲಹ ವಿಕೋಪಕ್ಕೆ ತಿರುಗಿ ಪತ್ನಿ ಎದುರೇ ಕಾವೇರಿ ನದಿಗೆ ಹಾರಿದ ಘಟನೆ ಕೊಳ್ಳೇಗಾಲ ತಾಲೂಕಿನ ದಾಸನಪುರ ಸೇತುವೆ ಬಳಿ ನಡೆದಿದೆ.

ಕೊಳ್ಳೇಗಾಲ ತಾಲೂಕಿನ ಕಜ್ಜಿಹುಂಡಿ ಗ್ರಾಮದ ಮಂಜುನಾಥ್(41) ಎಂಬುವರೇ ನದಿಗೆ ಹಾರಿದ ವ್ಯಕ್ತಿಯಾಗಿದ್ದು, ಇನ್ನೂ ಅವರ ಬಗ್ಗೆ ಯಾವುದೇ ಸುಳಿವು ಲಭ್ಯವಾಗಿಲ್ಲ.

ಕಜ್ಜಿಹುಂಡಿ ಗ್ರಾಮದಿಂದ ಬೈಕ್‌ನಲ್ಲಿ ಬೆಳಕವಾಡಿಗೆ ಪತ್ನಿ ರಾಜೇಶ್ವರಿ ಜೊತೆ ತೆರಳುತ್ತಿದ್ದಾಗ ಸಣ್ಣದಾಗಿ ಆರಂಭಗೊಂಡ ಜಗಳ ವಿಕೋಪಕ್ಕೆ ತಿರುಗಿದ ಪರಿಣಾಮ ತಾನು ಸತ್ತೇ ಹೋಗುವೆ ಎಂದು ಮಂಜುನಾಥ್ ಕಾವೇರಿ ನದಿಗೆ ಹರಿಯುತ್ತಿದ್ದ ಸೇತುವೆ ಬಳಿ ಬೈಕ್ ನಿಲ್ಲಿಸಿ ಸೇತುವೆಯಿಂದ ಕಾವೇರಿ ನದಿಗೆ ಹಾರಿದ್ದಾರೆ ಎನ್ನಲಾಗಿದೆ. ರಾಜೇಶ್ವರಿ ದೂರಿನ ಹಿನ್ನೆಲೆ, ಶನಿವಾರ ಕಾರ್ಯಾಚರಣೆ ನಡೆಸುತ್ತಿದ್ದು ಮಂಜುನಾಥ್ ಕುರುಹು ನದಿಯಲ್ಲಿ ಇನ್ನೂ ಪತ್ತೆಯಾಗಿಲ್ಲ. ಕೊಳ್ಳೇಗಾಲ ಪಟ್ಟಣ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ ಮುಂದಿನ ಕ್ರಮಕೈಗೊಂಡಿದ್ದಾರೆ.

ಅ.7, ಶ್ರೀ ವಾಲ್ಮೀಕಿ ಜಯಂತಿ

ಚಾಮರಾಜನಗರ, ಅ.4– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಅ.7ರಂದು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 10 ಗಂಟೆಗೆ ನಗರದ ಪ್ರವಾಸಿ ಮಂದಿರದಲ್ಲಿ ಮೆರವಣಿಗೆಗೆ ಚಾಲನೆ ದೊರೆಯಲಿದೆ. 11.30 ಗಂಟೆಗೆ ಸರ್ಕಾರಿ ಪೇಟೆ ಪ್ರೈಮರಿ ಶಾಲೆ ಆವರಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ.

ಅ.8ರಂದು ಕೊಳ್ಳೇಗಾಲ ತಾಲೂಕಿಗೆ ಲೋಕಾಯುಕ್ತ ಅಧಿಕಾರಿಗಳ ಭೇಟಿ

ಚಾಮರಾಜನಗರ, ಅ.4– ಜಿಲ್ಲೆಯ ಲೋಕಾಯುಕ್ತ ಅಧಿಕಾರಿಗಳು ಕೊಳ್ಳೇಗಾಲ ತಾಲೂಕು ಪ್ರವಾಸಿ ಮಂದಿರಕ್ಕೆ ಅ.8 ರಂದು ಭೇಟಿ ನೀಡಿ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಸಾರ್ವಜನಿಕರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಭರ್ತಿ ಮಾಡಿದ ದೂರು ಅರ್ಜಿಗಳನ್ನು ಸ್ವೀಕರಿಸಿ, ವಿಚಾರಣೆ ನಡೆಸುವರು.

ಸರ್ಕಾರಿ ಕಚೇರಿಗಳಲ್ಲಿ ಕೆಲಸದಲ್ಲಿ ಅನಗತ್ಯ ವಿಳಂಬ ಹಾಗೂ ಇನ್ನಿತರ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ ಅಥವಾ ನೌಕರರ ವಿರುದ್ಧ ಸಾರ್ವಜನಿಕರು ದೂರುಗಳನ್ನು ನಿಗದಿತ ನಮೂನೆ–1 ಮತ್ತು 2ರಲ್ಲಿ ಭರ್ತಿ ಮಾಡಿ ನೀಡಬಹುದಾಗಿದೆ. ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ವಿಭಾಗದ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ವಿವರಗಳನ್ನು ಪಟ್ಟಣದ ನ್ಯಾಯಾಲಯದಲ್ಲಿ ಪಡೆಯಬಹುದಾಗಿದ್ದು, ಅನಗತ್ಯ ಪ್ರಕರಣ ದಾಖಲಿಸಿಕೊಂಡು ಪರದಾಡುವ ಬದಲು ಈ ಮೂಲಕ ಇತ್ಯರ್ಥ ಪಡಿಸಿಕೊಳ್ಳಲು ಕೋರಿದೆ.

ಕಬ್ಬಹಳ್ಳಿಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ

ಗುಂಡ್ಲುಪೇಟೆ, ಅ.4– ಪ್ರತಿಯೊಬ್ಬ ಮನುಷ್ಯನಿಗೂ ಕಣ್ಣು ಬಹು ಮುಖ್ಯವಾದ ಅಂಗವಾಗಿದ್ದು ಇತ್ತೀಚಿನ ದಿನಗಳಲ್ಲಿ ಜನರು ನಾನಾ ಕಾರಣಗಳಿಂದ ಕಣ್ಣಿನ ತೊಂದರೆಗೆ ಒಳಗಾಗುತ್ತಿದ್ದಾರೆ ಎಂದು ಅರವಿಂದ ಕಣ್ಣಾಸ್ಪತ್ರೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಬಿ.ವಿಜಯಕಾಂತ್ ಹೇಳಿದರು.



ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಅರವಿಂದ ಕಣ್ಣಾಸ್ಪತ್ರೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಬಿ.ವಿಜಯಕಾಂತ್ ಉದ್ಘಾಟಿಸಿದರು.

ತಾಲೂಕಿನ ಕಬ್ಬಹಳ್ಳಿ ಗ್ರಾಮದ ಗ್ರಾಮ ಪಂಚಾಯಿತಿ ಆವರಣದಲ್ಲಿ ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ವತಿಯಿಂದ ಶನಿವಾರ ಆಯೋಜಿಸಿದ್ದ ಉಚಿತ ಕಣ್ಣಿನ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಜನರ ನಿರ್ಲಕ್ಷ್ಯದಿಂದ ಅಥವಾ ಪೋಷಕಾಂಶಗಳ ಕೊರತೆಯಿಂದ ಚಿಕ್ಕ ವಯಸ್ಸಿನಲ್ಲಿಯೇ ಹಲವರು ಕಣ್ಣಿನ ಸಮಸ್ಯೆಯಲ್ಲಿ ಸಿಲುಕುತ್ತಾರೆ. ಯುವಜನತೆ ಹಾಗೂ ಮಕ್ಕಳು ಅತಿ ಹೆಚ್ಚಿನ ಮೊಬೈಲ್ ಬಳಕೆಯಿಂದ ಕಣ್ಣಿನ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಹಾಗಾಗಿ ಪ್ರತಿಯೊಬ್ಬರೂ ಕೂಡ ಕಣ್ಣಿನ ಸುರಕ್ಷತೆಗಾಗಿ ಕಾಳಜಿವಹಿಸಬೇಕು ಎಂದರು.

ಸಕ್ಕರೆ ಕಾಯಿಲೆಯು ಮನುಷ್ಯದ ಕಣ್ಣಿನ ದೃಷ್ಟಿಯ ಮೇಲೆ ತುಂಬಾ ಪರಿಣಾಮ ಬೀರುತ್ತಿದ್ದು ಡಯಾಬಿಟಿಕ್ ರೆಟಿನೋಪತಿಯಿಂದ ಕಣ್ಣಿನ ನರಗಳು ದುರ್ಬಲವಾಗುತ್ತವೆ. 40 ವರ್ಷ ಮೇಲ್ಪಟ್ಟ ಎಲ್ಲರೂ ಕನಿಷ್ಠ ವರ್ಷಕ್ಕೊಮ್ಮೆಯಾದರೂ ಕಣ್ಣಿನ ಆರೋಗ್ಯ ತಪಾಸಣೆಗೆ ಒಳಗಾಗಬೇಕು. ಈ ಶಿಬಿರಗಳಲ್ಲಿ ತಪಾಸಣೆ ನಡೆಸಿ ಉಚಿತವಾಗಿ ಕ್ಯಾಟರಾಕ್ಟ್, ಶಸ್ತ್ರ ಶಸ್ತ್ರಚಿಕಿತ್ಸೆ ಮಾಡಿ ಐಒಎಲ್ ಲೆನ್ಸ್ ಅಳವಡಿಸಿ ದೃಷ್ಟಿ ಉಳಿಸುವಂತೆ ಮಾಡಲಾಗುತ್ತಿದೆ. ಸ್ವಯಂಸೇವಾ ಸಂಸ್ಥೆಗಳು ಹಾಗೂ ಸಮುದಾಯದ ಸಹಕಾರದಿಂದ ಆಸ್ಪತ್ರೆಯು ಪ್ರತಿ ತಿಂಗಳೂ ಅಲ್ಲಲ್ಲಿ ಕ್ಯಾಂಪ್‌ಗಳನ್ನು ಆಯೋಜಿಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಕಬ್ಬಹಳ್ಳಿ ಗ್ರಾಪಂ ಅಧ್ಯಕ್ಷ ಶಿವಶಂಕರ್, ಸದಸ್ಯರಾದ ಕೆ.ಎಸ್. ಶಿರಿಯಪ್ಪ, ಗೋಪಾಲಸ್ವಾಮಿ, ಪುರುಶೋತ್ತಮ್, ಬಸವೇಗೌಡ, ಗ್ರಾಪಂ ಅಭಿವೃದ್ಧಿ ಅಧಿಕಾರಿ ಎ.ಎಂ.ಮಹೇಶ್, ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಎನ್.ಮಹದೇವಸ್ವಾಮಿ, ಜಿಲ್ಲಾ ಸಂಚಾಲಕ ರಾ.ಬಾಬು, ಕಬ್ಬಳ್ಳಿ ಸಂಪಿಗೆಪುರ, ಕಲ್ಲಳ್ಳಿ ಗ್ರಾಮಸ್ಥರು ಇದ್ದರು.

ಕಬ್ಬಹಳ್ಳಿ ಹಾಗೂ ಗುಂಡ್ಲುಪೇಟೆಯಲ್ಲಿ ನಡೆದ ಎರಡೂ ಶಿಬಿರಗಳಲ್ಲಿ ಡಾ.ರೋಹಿತ್, ಡಾ.ಕೃತಿನ್ ಷಾ, ಡಾ.ಶಿವಂಗೋಯಲ್ ಅವರ ತಂಡ 103 ಹೊರ ರೋಗಿಗಳನ್ನು ತಪಾಸಣೆಗೊಳಪಡಿಸಿ ಶಸ್ತ್ರಚಿಕಿತ್ಸೆ ಅಗತ್ಯವಿದ್ದ 23 ಜನರನ್ನು ಕೊಯಮತ್ತೂರಿಗೆ ಕರೆದೊಯ್ದರು.

ಅಂಗವಿಕಲರಿಗೆ ಸಾಧನ–ಸಲಕರಣೆಗಳ ವಿತರಣೆ

ಚಾಮರಾಜನಗರ, ಅ.4– ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ನಗರದಲ್ಲಿಂದು ಚಾಮರಾಜನಗರ ತಾಲೂಕಿನ 10 ಮಂದಿ ವಿಕಲಚೇತನ ಫಲಾನುಭವಿಗಳಿಗೆ ಸಾಧನ, ಸಲಕರಣೆಗಳನ್ನು ವಿತರಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ತಾಲೂಕು ವ್ಯಾಪ್ತಿಯ ವಿಶೇಷಚೇತನರಿಗೆ ಒಟ್ಟು 3,86,310 ರೂ. ವೆಚ್ಚದ ತ್ರಿಚಕ್ರ ವಾಹನ, ಹೊಲಿಗೆಯಂತ್ರ, ಬ್ಯಾಟರಿ ಚಾಲಿತ ವೀಲ್ ಚೇರ್, ಕೈಗಡಿಯಾರ, ಇನ್ನಿತರ ಸಾಧನ ಸಲಕರಣೆಗಳನ್ನು ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ವಿತರಣೆ ಮಾಡಿದರು.

ಇದೇ ವೇಳೆ ಮಾತನಾಡಿದ ಎಂಎಸ್‌ಐಎಲ್ ಅಧ್ಯಕ್ಷರು ಹಾಗೂ ಶಾಸಕ ಸಿ. ಪುಟ್ಟರಂಗಶೆಟ್ಟಿ ಅಂಗವಿಕಲರ ಕಲ್ಯಾಣ ಇಲಾಖೆ ವತಿಯಿಂದ 3 ಲಕ್ಷ ರೂ.ಗಳಿಗೂ ಹೆಚ್ಚಿನ ಮೊತ್ತದ ಸಾಧನ ಸಲಕರಣೆಗಳನ್ನು ಅವಶ್ಯವಿರುವ 10 ಜನರಿಗೆ ಇಂದು ವಿತರಿಸಲಾಗಿದೆ. ವಿವಿಧ ಇಲಾಖೆಗಳು, ಸಚಿವರು, ಶಾಸಕರು, ಸಂಸದರು, ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡುವ ಅನುದಾನದಲ್ಲಿ ವಿಶೇಷಚೇತನರಿಗಾಗಿಯೇ ಶೇ.5ರಷ್ಟು ಅನುದಾನವನ್ನು ಸರ್ಕಾರ ಮೀಸಲಿರಿಸಿದೆ. ಅಂಗವಿಕಲರು ಇದರ ಸದುಪಯೋಗ ಪಡೆಯಬೇಕು ಎಂದರು.



ವಿಕಲಚೇತನ ಫಲಾನುಭವಿಗಳಿಗೆ ಸಾಧನ, ಸಲಕರಣೆಗಳನ್ನು ಶಾಸಕ ಸಿ. ಪುಟ್ಟರಂಗಶೆಟ್ಟಿ ವಿತರಿಸಿದರು.

ಸಾಧನ, ಸಲಕರಣೆಯಿಂದ ವಿಕಲಚೇತನರು ಸ್ವಾವಲಂಬಿ ಜೀವನ ನಡೆಸಲು ಅನುಕೂಲವಾಗಲಿದೆ. ಅಂಗವಿಕಲರಿಗೆ ಕೇವಲ ಅನುಕಂಪ ತೋರುವುದು ಬೇಡ, ಅವರ ಶ್ರೇಯೋಭಿವೃದ್ಧಿಗಾಗಿ ನಿಗದಿಯಾಗಿರುವ ಅನುದಾನದಲ್ಲಿ ಸೌಲಭ್ಯಗಳನ್ನು ಸಮರ್ಪಕವಾಗಿ ತಲುಪಿಸಿದರೆ ಸಾಕು, ಅಂಗವಿಕಲರ ಬದುಕು ಹಸನಾಗಲಿದೆ. ಸಮಾಜದಲ್ಲಿ ಅವರು ಸಹ ಇತರರಂತೆ ನೆಮ್ಮದಿ ಜೀವನ ನಡೆಸಲು ಸಹಕಾರಿಯಾಗಲಿದೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಮಂಜುನಾಥ್, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಸಯ್ಯದ್ ರಫೀ, ಮಾದಾಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ರೂಪೇಶ್, ಇತರರು ಇದೇ ಸಂದರ್ಭದಲ್ಲಿ ಇದ್ದರು.




ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಮಹಾ ಕಾವ್ಯರ್ಷಿ

ವಾಲ್ಮೀಕಿ ಮಹರ್ಷಿ

ತ್ರೇತಾಯುಗದಲ್ಲಿ ಆಗಿ ಹೋದ ಮಹಾ ಜ್ಞಾನಿಗಳು ವಾಲ್ಮೀಕಿ ಮಹಾಮನಿಗಳು. ಇವರು ಬರೆದ ರಾಮಾಯಣ ಮಹಾಕಾವ್ಯವು ಮಾನವ ಕೋಟಿಗೆ ಮಹಾ ಮಾರ್ಗದರ್ಶನ. ತಮ್ಮ ಮಹತ್ಕೃತಿಯಂತೆಯೇ ಈ ಮಹರ್ಷಿಯ ಬದುಕು ಕೂಡ ಮಹಾ ರೋಚಕ,ಅಷ್ಟೇ ಬೋಧ ಪ್ರದಾಯಕ. ಒಂದು ರೀತಿ ಇವರೇ ಒಂದು ಜ್ಞಾನದ ಮಹಾ ಪಾಠಶಾಲೆ. ನಮ್ಮ ನೆಲದ ಸಿರಿ ಹಿರಿಮೆಯನ್ನು ಹೆಚ್ಚಿಸಿರುವ ಇಂತಹ ಮೇರು ಕೃತಿ ರಾಮಾಯಣವನ್ನು ರಚಿಸಿದ ವಾಲ್ಮೀಕಿ ಮಹರ್ಷಿಗಳು ಉತ್ತರ ರಾಮಾಯಣದಲ್ಲಿ ಸ್ವತಃ ತಾವೇ ಒಂದು ಪಾತ್ರವಾಗಿ ಬರುತ್ತಾರೆ. ಶ್ರೀರಾಮನು ತುಂಬು ಗರ್ಭಿಣಿಯಾದ ತನ್ನ ಮಡದಿ ಸೀತಾದೇವಿಯನ್ನು ವನವಾಸಕ್ಕೆ ಕಳುಹಿಸಿದಾಗ ಸೀತಾ ಮಾತೆಗೆ ಆಸರೆ ನೀಡುವವರು ವಾಲ್ಮೀಕಿ ಮುನಿಗಳೇ.

ಪಿತೃವಾಕ್ಯ ಪರಿಪಾಲನೆ ಮಾತು ಬಂದಾಗ ನಮಗೆ ತಕ್ಷಣ ರಾಮ ನೆನಪಿಗೆ ಬರುತ್ತಾನೆ. ತಂದೆ ದಶರಥ ಮಹಾರಾಜನ ಮಾತು ನಡೆಸಿ ಕೊಡಲು ರಾಜ್ಯ ಸೇರಿದಂತೆ ಸರ್ವಸ್ವವನ್ನೂ ತೊರೆದು ಕಾಡಿಗೆ ಹೊರಟ ಮರ್ಯಾದಾ ಪುರುಷೋತ್ತಮ ರಾಮನ ಕಥೆ ಯಾರಿಗೆ ತಾನೇ ತಿಳಿದಿಲ್ಲ. ಹಾಗೆಯೇ ಪತಿಯೇ ತನ್ನ ಪಾಲಿನ ಪರಮಾತ್ಮನೆಂದು ರಾಮನನ್ನು ಹಿಂಬಾಲಿಸಿದ ಪತ್ನಿ ಸೀತಾದೇವಿ, ಅಣ್ಣ-ಅತ್ತಿಗೆಗೆ ಸಂರಕ್ಷಕನಾಗಿ ಅವರ ಹೆಜ್ಜೆಗೆ ಹೆಜ್ಜೆ ಹಾಕಿದ ಸೋದರ ಲಕ್ಷ್ಮಣ, ಸಿಂಹಾಸನದಲ್ಲಿ ಅಣ್ಣನ ಪಾದುಕೆಗಳನ್ನೇ ಇಟ್ಟು ಅಣ್ಣನ ಹೆಸರಿನಲ್ಲೇ ರಾಜಾಳ್ವಿಕೆ ನಡೆಸುವ ಭ್ರಾತೃತ್ವಕ್ಕೊಂದು ಪರ್ಯಾಯ ಪದದಂತಿದ್ದ ತಮ್ಮ ಭರತ, ಕಾಡಿನಲ್ಲಿ ಸೀತೆಯನ್ನು ಕದ್ದೊಯ್ದ ರಾವಣಾಸುರ, ಸ್ವಾಮಿ ನಿಷ್ಠೆಯ ಭಕ್ತ ಹನುಮಂತನ ಲಂಕಾ ದಹನ, ಸೀತಾಮಾತೆಯನ್ನು ಬಂಧ ಮುಕ್ತಗೊಳಿಸಲು ಲಂಕೆಗೆ ಮುತ್ತಿಗೆ ಹಾಕಿದ ವಾನರ ಸೇನೆ, ಕೇಡುಕಿಗೆ ಬೆನ್ನು ತಿರುಗಿಸಿ ಒಳಿತಿಗೆ ಶರಣಾಗಿ ಸಹೋದರ ರಾವಣನನ್ನೇ ಬಿಟ್ಟು ಬಂದು ರಾಮನ ಬೆನ್ನಿಗೆ ನಿಲ್ಲುವ ವಿಭೀಷಣ, ಮಹಾ ಪತಿವ್ರತೆಯರ ಮಹಾ ಸಾಲಿನಲ್ಲಿ ನಿಲ್ಲುವ ರಾವಣನ ಸತಿ ಸಾಧ್ವಿ ಮಂಡೋದರಿ, ಲಂಕಾಧಿಪತಿ ರಾವಣನ ಸಂಹಾರ, ಸೀತಾ ಮಾತೆಯ ಬಿಡುಗಡೆ, ಮತ್ತೆ ಕಾಡಿನಲ್ಲಿ ಸೀತೆಯ ವನವಾಸ, ಕಾಡಿನಲ್ಲಿ ಲವ-ಕುಶರ ಜನನ.... ಹೀಗೆ ಈ ಎಲ್ಲಾ ಘಟನೆಗಳ, ಪಾತ್ರಗಳ ಹಿನ್ನೆಲೆಯಲ್ಲಿ ಬರುವ ಅನೇಕ ಕಥೆಗಳನ್ನು ಸಾಮಾನ್ಯವಾಗಿ ಬಹುತೇಕ ಎಲ್ಲರೂ ಕೇಳಿಯೇ ಇರುತ್ತಾರೆ... ಓದಿಯೇ ತಿಳಿದಿರುತ್ತಾರೆ.

ಇವೆಲ್ಲವೂ, ನಮ್ಮ ಭಾರತೀಯ ಸಂಸ್ಕೃತಿಯ ತಾಯಿ ಬೇರಿನಂತಿರುವ ನಮ್ಮ ನೆಲದ ಆದಿ ಕಾವ್ಯ ಎಂದು ಪರಿಗಣಿಸಲ್ಪಟ್ಟಿರುವ 'ರಾಮಾಯಣ' ಎಂಬ ಪ್ರಾಚೀನ ಮಹಾ ಕಾವ್ಯದಲ್ಲಿ ಕಾಣಬರುವ ಪಾತ್ರಗಳು. ಇದರ ಸೃಷ್ಟಿಕರ್ತರು ಅರ್ಥಾತ್ ರಚನೆಕಾರರು ವಾಲ್ಮೀಕಿ ಎಂಬ ಮಹರ್ಷಿಗಳು. 'ರಾಮಾಯಣ'ದಂತಹ ಜೀವನ ಮೌಲ್ಯಗಳುಳ್ಳ ಮಹಾಕಾವ್ಯವನ್ನು ಕಟ್ಟಿಕೊಟ್ಟ ವಾಲ್ಮೀಕಿಯನ್ನು ನಮ್ಮ ಪರಂಪರೆ ಬಹಳ ಗೌರವದಿಂದ ನೆನೆಯುತ್ತದೆ. ವಾಲ್ಮೀಕಿ ರಾಮಾಯಣವು ಅನೇಕ ಕಾವ್ಯ, ಕಥೆ, ಪುರಾಣ, ಇತಿಹಾಸಗಳು ಸೇರಿದಂತೆ ಪ್ರತಿಯೊಂದಕ್ಕೂ ಮೂಲವಾಗಿದ್ದು ಆಕರವಾಗಿದೆ.

ಮಹರ್ಷಿ ವಾಲ್ಮೀಕಿ ಕುರಿತಂತೆ ಅನೇಕ ಕಥೆಗಳು, ದಂತಕಥೆಗಳಿವೆ. ಇವುಗಳಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಒಂದು ಕಥೆಯ ಪ್ರಕಾರ ಈತ 'ಪ್ರಾಚೇತಸ' ಎಂಬ ಋಷಿಯ ಮಗ. ಈತನಿಗೆ 'ರೂಕ್ಷ' 'ರತ್ನ' ಎಂಬ ಹೆಸರುಗಳ ಜೊತೆಗೆ ಪ್ರಾಚೇತಸ ಮುನಿಯ ಪುತ್ರನಾಗಿದ್ದರಿಂದ 'ಪ್ರಾಚೇತಸ' ಎನ್ನುವ ಹೆಸರುಗಳು ಇದ್ದವು. ಬಾಲ್ಯದಿಂದಲೂ ರೂಕ್ಷನಿಗೆ ದುಷ್ಟರ ಸಹವಾಸವೇ ಹೆಚ್ಚಾಗಿತ್ತು ಹಾಗಾಗಿ ಬೆಳೆಯುತ್ತಾ ಹೋದಂತೆ ರೂಕ್ಷನಿಗೆ ದುಷ್ಟಬುದ್ಧಿಯೂ ಬೆಳೆದು ಇದರ ಪರಿಣಾಮ ದೊಡ್ಡ ಡಕಾಯಿತನಾದ. ಮದುವೆಯಾಗಿ ಆತ ಸಂಸಾರಸ್ಥನಾದ ಮೇಲೂ ದರೋಡೆಯನ್ನು ಬಿಡಲಿಲ್ಲ. ಬದಲಿಗೆ ತನ್ನ ಕುಟುಂಬವನ್ನು ಸಾಕಲು ಡಕಾಯಿತಿಯನ್ನೇ ಆಶ್ರಯಿಸಿಕೊಂಡು ಲೂಟಿಯನ್ನೇ ಕಸುಬು ಮಾಡಿಕೊಂಡ. ದರೋಡೆ ಮಾಡಿಯೇ ಹೆಂಡತಿ ಮಕ್ಕಳನ್ನು ಸಾಕುತ್ತಿದ್ದ. ಕಾಡಿನ ಹಾದಿಯಲ್ಲಿ ಪ್ರಯಾಣಿಸುತ್ತಿದ್ದವರನ್ನು ಅಡ್ಡಗಟ್ಟಿ ಹೊಡೆದು ಬಡಿದು ಅವರಲ್ಲಿದ್ದ ಧನ-ಕನಕಗಳನ್ನು ಲೂಟಿ ಮಾಡುತ್ತಿದ್ದ.

ಒಮ್ಮೆ ನಾರದ ಮುನಿಗಳು ಮತ್ತು ಸಪ್ತ ಋಷಿಗಳು ರೂಕ್ಷನಿದ್ದ ಆ ಕಾಡು ಹಾದಿಯಲ್ಲಿ ಬಂದರು. ಆದರೆ ಅವರನ್ನೂ ಬಿಡದೆ ಅಡ್ಡ ಹಾಕಿ ಅವರ ಮೇಲೆರಗಿದ ರೂಕ್ಷನು 'ನಿಮ್ಮ ಬಳಿ ಇರುವುದೆಲ್ಲವನ್ನು ನನಗೆ ಕೊಟ್ಟುಬಿಡಿ. ಇಲ್ಲವೆಂದರೆ ಯಾರನ್ನೂ ನಾನು ಜೀವಂತವಾಗಿ ಬಿಡುವುದಿಲ್ಲ' ಎಂದು ಅಬ್ಬರಿಸಿದ. ಆಗ ನಾರದ ಮುನಿಗಳು ಶಾಂತಚಿತ್ತದಿಂದಲೇ ತಡೆದು 'ನೋಡಪ್ಪ ರೂಕ್ಷ ನಮ್ಮ ಹತ್ತಿರ ಕಮಂಡಲ ಬಿಟ್ಟರೆ ಬೇರೇನೂ ಇಲ್ಲ. ಬೇಕಾದರೆ ಇದೆಲ್ಲವನ್ನು ನೀನೇ ತೆಗೆದುಕೊಳ್ಳುವೆಯಂತೆ. ಆದರೆ ಅದಕ್ಕೂ ಮುಂಚೆ ನೀನೇಕೆ ದರೋಡೆಯಂತಹ ಕಳ್ಳತನದ ದಾರಿ ಹಿಡಿದಿರುವೆ ಎಂಬುದನ್ನು ಹೇಳು' ಎಂದರು.

ಆಗ ತಕ್ಷಣವೇ ರೂಕ್ಷನು ಹಿಂದೆ-ಮುಂದೆ ಕಿಂಚಿತ್ತೂ ಯೋಚಿಸದೆ 'ನನ್ನ ಹೆಂಡತಿ ಮಕ್ಕಳನ್ನು ಸಾಕುವುದಕ್ಕಾಗಿ' ಎಂದ. ಅವನ ಅಜ್ಞಾನಕ್ಕೆ ಮುಗುಳ್ನಕ್ಕ ನಾರದ ಮುನಿಗಳು 'ಹೌದಾ, ಹಾಗಾದರೆ ಎಲ್ಲರನ್ನೂ ಗೋಳು ಹುಯ್ದುಕೊಂಡು ಹಿಂಸಿಸುವ ನೀನು ಮಾಡುವ ಪಾಪ ಕಾರ್ಯದಲ್ಲಿ ನಿನ್ನ ಹೆಂಡತಿ-ಮಕ್ಕಳು ಪಾಲು ತೆಗೆದುಕೊಳ್ಳುತ್ತಾರೆಯೇ, ಮೊದಲು ಹೋಗಿ ಅವರನ್ನು ಕೇಳಿಕೊಂಡು ಬಾ' ಎಂದರು. ಕೂಡಲೇ ರೂಕ್ಷನು ತನ್ನ ಮನೆಯತ್ತ ಬಿರಬಿರನೆ ನಡೆದು ನಾರದರು ಕೇಳಿದಂತೆ ಅದೇ ಪ್ರಶ್ನೆಯನ್ನು ಹೆಂಡತಿ-ಮಕ್ಕಳಲ್ಲಿ ಕೇಳಿದ. ಆಗ ಅವರು 'ನಮ್ಮನ್ನು ಸಾಕೋದು ನಿನ್ನ ಕರ್ತವ್ಯ ಇದಕ್ಕಾಗಿ ದರೋಡೆಯಂತಹ, ಕಳ್ಳತನದಂತಹ ಪಾಪ ಕೃತ್ಯಗಳನ್ನು ಮಾಡಲು ನಾವ್ಯಾರೂ ನಿನಗೆ ಹೇಳಿಲ್ಲ. ಹಾಗಾಗಿ ನಿನ್ನ ಪಾಪ ಕಾರ್ಯಕ್ಕೆ ನೀನೇ ಹೊಣೆ. ಅದರಲ್ಲಿ ಪಾಲು ತೆಗೆದುಕೊಳ್ಳಲು ನಾವ್ಯಾರೂ ಸಿದ್ಧರಿಲ್ಲ' ಎಂದು ನಿರ್ದಾಕ್ಷಿಣ್ಯವಾಗಿ ಹೇಳಿಬಿಟ್ಟರು. ಆಗ ರೂಕ್ಷನಿಗೆ ತನ್ನ ತಪ್ಪಿನ ಅರಿವಾಗಿ ಜ್ಞಾನೋದಯವಾಯಿತು. ಕೂಡಲೇ ನಾರದ ಮುನಿಯತ್ತ ಓಡೋಡಿ ಬಂದ ಅವನು ತನಗೆ ಮೋಕ್ಷ ಕರುಣಿಸುವಂತೆ ಬೇಡಿಕೊಂಡ. ಅದಕ್ಕೆ ನಾರದ ಮುನಿಗಳು ಈ ಸಪ್ತ ಋಷಿಗಳ ಜೊತೆಯಲ್ಲಿ ಮತ್ತೆ ನಾನು ಇದೇ ಸ್ಥಳಕ್ಕೆ ಮರಳಿ ಬರುವ ತನಕ ನೀನು ಇದೇ ಸ್ಥಳದಲ್ಲಿ ಇದ್ದು ರಾಮನಾಮ ಜಪಿಸುತ್ತಿರು ಎನ್ನುತ್ತಾರೆ.

ಆದರೆ ಎಷ್ಟು ಪ್ರಯತ್ನಿಸಿದರು ರೂಕ್ಷನ ಬಾಯಲ್ಲಿ ರಾಮ ನಾಮ ಬರುವುದೇ ಇಲ್ಲ. ಸದಾ ದುರ್ಮಾರ್ಗದಲ್ಲಿ ನಿರತನಾಗಿದ್ದ ಅವನ ನಾಲಿಗೆಯಿಂದ 'ರಾಮ' ಎನ್ನುವ ಪವಿತ್ರ ಶಬ್ದ ಹೊರಡಲು ಬಹಳ ಕಷ್ಟವಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ ನಾರದರು ರೂಕ್ಷನನ್ನು ಉದ್ದೇಶಿಸಿ 'ಅಲ್ಲಿ ನೋಡು ರೂಕ್ಷ ಮರಗಳಿವೆಯಲ್ಲ ನೀನು ಆ ಮರ ಆ ಮರ ಎಂದು ಹೇಳು' ಎಂದರು. ಅದರಂತೆ ರೂಕ್ಷನು 'ಆ ಮರ ಆ ಮರ' ಎಂದು ಹೇಳುವುದನ್ನು ಕಲಿತು ಅದನ್ನೇ ಮತ್ತೆ ಮತ್ತೆ ಹೇಳುತ್ತಾ ಹೋದ. ಹಾಗೆಯೇ 'ಮರಾ ಮರಾ ಮರಾ' ಎಂದು ಹಾಗೆಯೇ ರಾಮ ನಾಮವನ್ನು ಒಂದೇ ಸಮನೆ ಜಪಿಸತೊಡಗಿದ. ಇದು ನಿರಂತರವಾಗಿ ಸಾಗಿತು. ಹೀಗೆ ಮೈಮರೆತು ಧ್ಯಾನಸ್ಥನಾಗಿ ಅದೆಷ್ಟೋ ವರ್ಷಗಳ ಕಾಲ ರೂಕ್ಷನು ರಾಮನಾಮ ಜಪಿಸುತ್ತಿದ್ದಾಗ ಅವನ ಸುತ್ತ ಬೃಹದಾಕಾರವಾಗಿ ಹಾವಿನ ಹುತ್ತ ಬೆಳೆಯಿತು. ರೂಕ್ಷನು ಹುತ್ತದೊಳಗೆ ಸೇರಿ ಮರೆಯಾಗಿ ಹೋದ. ಹೀಗಾಗಿ ಅವನು ಅಲ್ಲಿ ಕಾಣಿಸದಿದ್ದರೂ ಹುತ್ತದೊಳಗಿನಿಂದ ಅವನು ಹೇಳುತ್ತಿದ್ದ ರಾಮ ನಾಮ ಬಹು ದೊಡ್ಡದಾಗಿ ಕೇಳುತ್ತಲೇ ಇತ್ತು.

ಅನೇಕ ವರ್ಷಗಳ ನಂತರ ನಾರದ ಮುನಿಗಳ ಜೊತೆಯಲ್ಲಿ ಸಪ್ತ ಋಷಿಗಳು ಅದೇ ದಾರಿಯಲ್ಲಿ ಹಿಂದಿರುಗಿ ಬಂದರು. ರಾಮನಾಮ ಜಪದಲ್ಲಿ ಮುಳುಗಿ ಹೋಗಿದ್ದ ರೂಕ್ಷನನ್ನು ಪ್ರೀತಿಯಿಂದ ಕೂಗಿ ಕರೆದರು. ಅವರ ದನಿಯನ್ನು ಕೇಳಿದೊಡನೆ ರೂಕ್ಷ ಹುತ್ತವನ್ನು ಹೊಡೆದುಕೊಂಡು ಹೊರಬಂದ. ಸಂಸ್ಕೃತದಲ್ಲಿ ಹುತ್ತವನ್ನು 'ವಲ್ಮೀಕ' ಎನ್ನುತ್ತಾರೆ. ಆದ್ದರಿಂದ ಹುತ್ತವನ್ನು ಭೇದಿಸಿಕೊಂಡು ಹೊರಬಂದ ರೂಕ್ಷನು ಅಂದಿನಿಂದ ಮಹರ್ಷಿಯಾಗಿ ಬದಲಾಗಿ 'ವಾಲ್ಮೀಕಿ' ಎಂದು ಕರೆಯಲ್ಪಟ್ಟನು.

ಆ ನಂತರ ವಾಲ್ಮೀಕಿ ಮಹರ್ಷಿಯು ತಮಸಾ ನದಿ ತೀರದಲ್ಲಿ ಆಶ್ರಮವೊಂದನ್ನು ಕಟ್ಟಿಕೊಂಡು ಸನ್ಯಾಸಿ ಜೀವನ ನಡೆಸತೊಡಗಿದರು. ಒಮ್ಮೆ ಸ್ನಾನಕ್ಕೆಂದು ಹೋದ ವಾಲ್ಮೀಕಿ ಮಹರ್ಷಿಯು ಆಕಾಶದಲ್ಲಿ ಸರಸ ಸಲ್ಲಾಪದಲ್ಲಿದ್ದ ಕ್ರೌಂಚ ಪಕ್ಷಿಗಳನ್ನು ಕುತೂಹಲದಿಂದ ವೀಕ್ಷಿಸುತ್ತಿದ್ದರು. ಇದ್ದಕ್ಕಿದ್ದಂತೆ ಆಗ ಬೇಡನೊಬ್ಬ ಬಂದು ಬಾಣ ಬಿಟ್ಟು ಗಂಡು ಹಕ್ಕಿಯನ್ನು ಕೊಲ್ಲಲು ಅದರ ಸಂಗಾತಿ ಹೆಣ್ಣು ಹಕ್ಕಿಯು ಸಂಕಟದಿಂದ ಚೀರಲಾರಂಭಿಸಿತು. ಈ ಹೃದಯವಿದ್ರಾವಕ ಘಟನೆಯನ್ನು ಕಂಡು ವಾಲ್ಮೀಕಿ ಮಹರ್ಷಿ ಕರುಣೆ, ದುಃಖ, ಕೋಪದಿಂದ ಕುದಿಯುತ್ತಾರೆ.

'ಮಾ ನಿಷಾದ ಪ್ರತಿಷ್ಠಾಮ್
ತ್ವಮಗಃಶಾಸ್ವತೀಃಸಮಾಃ
ಯತ್ಕ್ರೌಂಚ ಮಿಥುನಾದೇಕ
ಮವಧೀಃಕಾಮಮೋಹಿತಮ್'


ಇದು 'ರಾಮಾಯಣ' ಮಹಾ ಕಾವ್ಯ ರಚನೆಗೆ ಪ್ರೇರಣೆಯಾದ ಸನ್ನಿವೇಶ. ಆ ಸಂದರ್ಭದಲ್ಲಿ ವಾಲ್ಮೀಕಿಯಿಂದ ಹೊರಹೊಮ್ಮಿದ ಮಾತುಗಳಿವು 'ಅಕಾರಣಕ್ಕಾಗಿ ಹಕ್ಕಿಯನ್ನು ಕೊಂದ ಹೇ ಅನ್ಯಾಯಿ, ನಿನ್ನ ಪಾಪದ ಫಲವಾಗಿ ನೀ ಈ ಕೂಡಲೇ ಸಾಯಿ' ಎಂದು ವಾಲ್ಮೀಕಿ ಮಹರ್ಷಿಯು ಆ ಬೇಡನಿಗೆ ಶಾಪವಿತ್ತರು. ಈ ಕರುಣಾಜನಕ ಶ್ಲೋಕವು ಸಾಮಾನ್ಯ ಗದ್ಯ ರೂಪದಲ್ಲಿರದೆ ಪ್ರಾಸಬದ್ಧವಾಗಿ ಲಯ ಮತ್ತು ಛಂದಸ್ಸುಗಳನ್ನೊಳಗೊಂಡು ಕಾವ್ಯಾತ್ಮಕವಾಗಿತ್ತು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಬ್ರಹ್ಮದೇವ ನೇರವಾಗಿ ವಾಲ್ಮೀಕಿ ಮಹರ್ಷಿಗಳ ಬಳಿ ಬಂದು ಇದೇ ಶ್ಲೋಕ ರೂಪದಲ್ಲಿ 'ರಾಮಾಯಣ' ಮಹಾ ಕಾವ್ಯವನ್ನು ರಚಿಸುವಂತೆ ಕೇಳಿಕೊಂಡರು. ಅದರಂತೆ ವಾಲ್ಮೀಕಿ ಮಹರ್ಷಿಗಳು 24,000 ಶ್ಲೋಕಗಳುಳ್ಳ ಬೃಹತ್ ರಾಮಾಯಣ ಮಹಾ ಕಾವ್ಯವನ್ನು ಬರೆದರು. ಈ ರಾಮಾಯಣ ಮಹಾ ಕಾವ್ಯವು ಬಾಲಕಾಂಡ, ಅಯೋಧ್ಯಾಕಾಂಡ, ಕಿಷ್ಕಿಂದಾ ಕಾಂಡ, ಅರಣ್ಯಕಾಂಡ, ಸುಂದರಕಾಂಡ, ಯುದ್ಧಕಾಂಡ, ಮತ್ತು ಉತ್ತರಕಾಂಡ ಹೀಗೆ ಏಳು ಕಾಂಡಗಳಲ್ಲಿ ರಚಿಸಲ್ಪಟ್ಟಿದೆ. ಪ್ರಾಚೀನ ಭಾರತದ ಪ್ರಮುಖ ಸಾಹಿತ್ಯಕ ಮೇರು ಕೃತಿಗಳಲೊಂದಾದ ರಾಮಾಯಣ ಮಹಾ ಕಾವ್ಯವು ಶ್ರೀ ರಾಮನ ಕಥೆಯ ಮೂಲಕ ಬಹು ಮೌಲಿಕವಾದ ನೈತಿಕ ಜೀವನ ಪಾಠವನ್ನು ವಾಲ್ಮೀಕಿ ಮಹರ್ಷಿಗಳು ಹೇಳಿದ್ದಾರೆ.

ತ್ರೇತಾಯುಗದಲ್ಲಿ ಆಗಿ ಹೋದ ಮಹಾ ಜ್ಞಾನಿಗಳು ವಾಲ್ಮೀಕಿ ಮಹಾಮನಿಗಳು. ಇವರು ಬರೆದ ರಾಮಾಯಣ ಮಹಾಕಾವ್ಯವು ಮಾನವ ಕೋಟಿಗೆ ಮಹಾ ಮಾರ್ಗದರ್ಶನ. ತಮ್ಮ ಮಹತ್ಕೃತಿಯಂತೆಯೇ ಈ ಮಹರ್ಷಿಯ ಬದುಕು ಕೂಡ ಮಹಾ ರೋಚಕ, ಅಷ್ಟೇ ಬೋಧ ಪ್ರದಾಯಕ. ಒಂದು ರೀತಿ ಇವರೇ ಒಂದು ಜ್ಞಾನದ ಮಹಾ ಪಾಠಶಾಲೆ. ನಮ್ಮ ನೆಲದ ಸಿರಿ ಹಿರಿಮೆಯನ್ನು ಹೆಚ್ಚಿಸಿರುವ ಇಂತಹ ಮೇರು ಕೃತಿ ರಾಮಾಯಣವನ್ನು ರಚಿಸಿದ ವಾಲ್ಮೀಕಿ ಮಹರ್ಷಿಗಳು ಉತ್ತರ ರಾಮಾಯಣದಲ್ಲಿ ಸ್ವತಃ ತಾವೇ ಒಂದು ಪಾತ್ರವಾಗಿ ಬರುತ್ತಾರೆ. ಶ್ರೀರಾಮನು ತುಂಬು ಗರ್ಭಿಣಿಯಾದ ತನ್ನ ಮಡದಿ ಸೀತಾದೇವಿಯನ್ನು ವನವಾಸಕ್ಕೆ ಕಳುಹಿಸಿದಾಗ ಸೀತಾ ಮಾತೆಗೆ ಆಸರೆ ನೀಡುವವರು ವಾಲ್ಮೀಕಿ ಮುನಿಗಳೇ. ಮುಂದೆ ಸೀತಾ ಮಾತೆಗೆ ಅವಳಿ ಗಂಡು ಮಕ್ಕಳು ಜನಿಸಿದಾಗ ವಾಲ್ಮೀಕಿ ಮಹರ್ಷಿಗಳೇ ಆ ಮಕ್ಕಳಿಗೆ 'ಲವ' 'ಕುಶ' ಎಂದು ನಾಮಕರಣ ಮಾಡಿ ಅವರನ್ನು ಸಕಲಕಲಾ ವಿದ್ಯಾ ಪಾರಂಗತರನ್ನಾಗಿ ಮಾಡುತ್ತಾರೆ. ರಾಮನೇ ಕಥಾನಾಯಕ ಆಗಿರುವ ರಾಮಾಯಣ ಮಹಾಕಾವ್ಯವನ್ನು ಅವರಿಗೆ ಹೃನ್ಮನ ಮುಟ್ಟುವಂತೆ ಹೇಳಿಕೊಟ್ಟು ಅದನ್ನು ಸುಶ್ರಾವ್ಯವಾಗಿ ಗಾಯನ ಮಾಡುವುದನ್ನೂ ಕಲಿಸಿಕೊಡುತ್ತಾರೆ. ಶ್ರೀರಾಮನ ಅಶ್ವಮೇಧ ಯಾಗದ ಸಂದರ್ಭದಲ್ಲಿ ರಾಮನ ಮಕ್ಕಳಾದ ಲವ-ಕುಶರು ಶ್ರೀರಾಮ ಚರಿತೆಯನ್ನು ಹಾಡುವಂತೆ ಮಾಡುತ್ತಾರೆ.

ಮಕ್ಕಳ ಚಿತ್ರಕಥೆ

ವಿದ್ಯಾರ್ಥಿಗಳಿಗಾಗಿ ಕಲಾಂ ಮೇಷ್ಟ್ರು ಹೇಳಿದ ಕಿವಿಮಾತು...

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ನಿಮ್ಮೆಲ್ಲಾ ಸಮಸ್ಯೆಗಳಿಗೆ ಪರಿಹಾರ, ನಿಮ್ಮ ಹಾರ್ಡ್‌ವರ್ಕ್‌ನಲ್ಲಿದೆ.



ನಿಮ್ಮ ಉತ್ತಮವಾದ ಹವ್ಯಾಸಗಳು ನಿಮ್ಮ ಭವಿಷ್ಯವನ್ನ ಖಂಡಿತ ಬದಲಾಯಿಸುತ್ತವೆ.



ಹೇಳಿಕೊಳ್ಳಿ, 'ನಾನು ಅತ್ಯುತ್ತಮ, ಇಂದಿನ ನನ್ನ ಕೆಲಸ ಉತ್ತಮವಾಗಿ ಪೂರ್ಣಗೊಳಿಸುತ್ತೇನೆ, ದೇವರು ನನ್ನೊಂದಿಗೆ ಇದ್ದಾನೆ, ಗೆಲುವು ನನ್ನದೇ, ಈ ದಿನ ನನ್ನದು.'



ಸಮಸ್ಯೆಗಳಿಗೆ, ನಿಮ್ಮನ್ನು ಸೋಲಿಸುವ ಅವಕಾಶವನ್ನು ಯಾವುದೇ ಕಾರಣಕ್ಕೂ ಕೊಡಬೇಡಿ.



ನೆಗೆಟೀವ್ ಪರಿಸ್ಥಿತಿಯಲ್ಲು ನೀವು ಪಾಸಿಟೀವ್ ಆಗಿದ್ದರೆ, ನೀವು ಪ್ರತೀ ಬಾರಿಯೂ ಗೆಲ್ಲುತ್ತೀರಿ.



ಬರುವ ಯಶಸ್ಸು ಮತ್ತು ಸಂತೋಷದ ಅರಿವಾಗುವುದು, ಕಷ್ಟಗಳನ್ನು ಅನುಭವಿಸಿದ ಮನುಷ್ಯನಿಗೆ ಮಾತ್ರ.

ವಾರಭವಿಷ್ಯ

5.10.2025 ರಿಂದ 11.10.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಕನ್ಯಾ, ಚಂದ್ರ-ಕುಂಭ, ಮೀನ, ಮೇಷ, ವೃಷಭ, ಕುಜ-ಕನ್ಯಾ, ಬುಧ-ಕನ್ಯಾ, ಗುರು-ಮಿಥುನ, ಶುಕ್ರ-ಕನ್ಯಾ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ.


ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)
ಈ ವಾರ ಪೂರ್ತಿ ಇತರ ಗ್ರಹಗಳು ನಿಮ್ಮ ಮೇಲೆ ಮುನಿಸು ತೋರಿದರೂ ಚಂದ್ರಗ್ರಹದ ಕೃಪೆಯಿಂದ ಎದುರಾಗುವ ಸವಾಲುಗಳನ್ನು ಜಾಣ್ಮೆಯಿಂದ ಎದುರಿಸುವಿರಿ. ನವ ಉಲ್ಲಾಸದಿಂದ ನಿಮ್ಮ ಸ್ವಂತ ಕೆಲಸ-ಕಾರ್ಯಗಳನ್ನು ನಿರ್ವಹಿಸುವಿರಿ. ಹಣಕಾಸಿನ ಪರಿಸ್ಥಿತಿಯಲ್ಲಿ ಕೊರತೆ ಏನೂ ಆಗದು. ವಿದ್ಯಾರ್ಥಿನಿಯರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ಅವಕಾಶವಿದೆ.

ಶ್ರೀ ಶಾರದಾ ಭುಜಂಗ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-1

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ನಿಮ್ಮ ಕೌಟುಂಬಿಕ ವಿಚಾರಗಳಲ್ಲಿ ಉಂಟಾಗಿದ್ದ ವಿವಾದಗಳು ದೂರವಾಗುವುದು. ಪುರುಷ ಪ್ರಯತ್ನದೊಡನೆ ದೈವಬಲವೂ ಸೇರಿ, ನಿಮ್ಮ ಆದಾಯ ಮೂಲಗಳು ಹೆಚ್ಚುವುದು. ಸಾಮಾಜಿಕ ಜೀವನದಲ್ಲಿ ಆತ್ಮವಿಶ್ವಾಸದಿಂದ ಗೆಲುವನ್ನು ಸಾಧಿಸುವಿರಿ. ಮಹಿಳಾಮಣಿಯರು ಪ್ರಸಾದನ ವಸ್ತುಗಳ ಖರೀದಿಗೆ ಹೆಚ್ಚಿನ ಹಣ ವ್ಯಯಿಸುವರು. ಸುವರ್ಣದಲ್ಲಿ ಬಂಡವಾಳ ಹೂಡಿಕೆಯಿಂದ ಲಾಭ.

ಶ್ರೀ ದೇವೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-2

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)
ವಾರದ ಆದಿಗೆ ಸಜ್ಜನರ ಭೇಟಿಯಿಂದ ಮಾರ್ಗದರ್ಶನ. ಸಮಾಜ ಸೇವಾ ಕಾರ್ಯಗಳಲ್ಲಿ ತೊಡಗಿ ಗೌರವಾದರಗಳಿಗೆ ಪಾತ್ರರಾಗುವಿರಿ. ವಾರ ಮಧ್ಯೆ ಸಂಪಾದನೆ ಹೆಚ್ಚುವುದು, ದುಂದು ವೆಚ್ಚಗಳಿಗೆ ಕಡಿವಾಣ ಹಾಕಿ. ಮನೆಯಲ್ಲಿ ಸಣ್ಣ ಪುಟ್ಟ ಘರ್ಷಣೆಗಳು ಉಂಟಾದೀತು. ಕಡ್ಡಿಯನ್ನು ಬೆಟ್ಟ ಮಾಡದಿರಿ. ನಿಮ್ಮ ಮುಖ್ಯ ದಸ್ತಾವೇಜು ದಾಖಲೆಗಳನ್ನು ಜೋಪಾನ ಮಾಡಿಕೊಳ್ಳಿ.

ಶ್ರೀ ವಿಷ್ಣುನಾಮ ಸ್ಮರಣೆ. ಶುಭ ಸಂಖ್ಯೆ-9

ಕಟಕ (ಹೊ,ಹು,ಹೆ,ಡ,ಡಿ,ಡು)
ನಿಮ್ಮ ರಾಶ್ಯಾಧಿಪತಿ ಚಂದ್ರನಿಂದ ವಾರದ ಪ್ರಾರಂಭಕ್ಕೆ ಇಷ್ಟಾರ್ಥ ಸಿದ್ಧಿ. ಹಿತೈಷಿಗಳೊಂದಿಗೆ ಸಮಾಗಮ. ಭವಿಷ್ಯದ ಕೆಲಸಗಳಿಗೆ ಕಾಲಮಿತಿಯನ್ನು ಹಾಕಿಕೊಳ್ಳುವುದು ಉತ್ತಮ. ಫ್ಯಾನ್ಸಿ ಅಂಗಡಿಯವರಿಗೆ ಭರಪೂರ ವ್ಯಾಪಾರ ಹಾಗೂ ಧನಲಾಭವಾಗುವುದು. ವಿದ್ಯಾರ್ಥಿಗಳು ಅಧ್ಯಯನದಲ್ಲಿ ಆಸಕ್ತಿ ತೋರುವರು. ವಾರದ ಕಡೆಗೆ ಸಣ್ಣ ಪುಟ್ಟ ಕಾಯಿಲೆ ಕಾಡಬಹುದು.

ಶ್ರೀ ದುರ್ಗಾ ದರ್ಶನ. ಶುಭ ಸಂಖ್ಯೆ-4

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ವಾರದ ಆರಂಭ ಶುಭದಾಯಕವಾಗಿದೆ. ಆಜ್ಞಾಪೂರ್ವಕವಾಗಿ ನಿಮ್ಮ ಕೆಲಸಗಳನ್ನು ಪೂರೈಸಿಕೊಳ್ಳುವಿರಿ. ಮನೆಯಲ್ಲಿ ಮಂಗಳ ಕಾರ್ಯಕ್ಕೆ ನಾಂದಿ ಆಗುವುದು. ಹಲವರಿಗೆ 'ವೀಳ್ಯದೆಲೆ ಶಾಸ್ತ್ರ' ನಡೆದೀತು. ಅನುಭವಿಗಳ ಹಿತನುಡಿಗಳನ್ನು ಮನ್ನಿಸಿ ನಡೆದರೆ ಒಳಿತು ಉಂಟಾಗುವುದು. ವಿದ್ಯುತ್ ಯಂತ್ರಗಳ ಮೇಲೆ ಕೆಲಸ ಮಾಡುವಾಗ ಮೈ ಮರೆತರೆ ಅಪಾಯ ತಪ್ಪಿದ್ದಲ್ಲ.

ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ-7

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)
'ಹಂಗಿನ ಹಾಲಿಗಿಂತ ರಾಗಿ ಅಂಬಲಿ ಲೇಸು' ಯಾವ ವಿಷಯದಲ್ಲೂ ಅತಿ ಸಾಹಸ ಮಾಡಲು ಹೋಗಿ ಸಂಕಷ್ಟಕ್ಕೆ ಗುರಿಯಾಗುವಿರಿ. ಹಿರಿಯರ ಸಲಹೆಯನ್ನು ಗೌರವಿಸಿ. ಆರೋಗ್ಯ ಸರಿ ಇರಬೇಕೆಂದರೆ ಆಹಾರ-ಪಾನೀಯಗಳಲ್ಲಿ ಸಂಯಮವಿರಲಿ. ಟ್ರಾವೆಲ್ಸ್ ಸಂಸ್ಥೆಗಳಿಗೆ ಹೆಚ್ಚಿನ ಗಿರಾಕಿಗಳಿಂದ ಹೆಚ್ಚಿನ ವರಮಾನವಾಗುವುದು. ವಾರಾಂತ್ಯಕ್ಕೆ ಪುಣ್ಯಕ್ಷೇತ್ರ ದರ್ಶನ.

ಶ್ರೀ ವೆಂಕಟೇಶ್ವರ ಉಪಾಸನೆ. ಶುಭ ಸಂಖ್ಯೆ-8

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
ಸಪ್ತಾಹದ ಆದಿಗೆ ಸಾಮಾಜಿಕವಾಗಿ ಗೌರವಾದರಗಳು ಲಭಿಸುವುದು. ಸುವರ್ಣ, ರಜತ ಪದಾರ್ಥಗಳ ಖರೀದಿಯಿಂದ ಶ್ರೀಮತಿಗೆ ಸಂತೋಷ. ಕುಶಲಕರ್ಮಿಗಳಿಗೆ ಸರ್ಕಾರದಿಂದ ಮನ್ನಣೆ. ಫೈನಾನ್ಸ್ ಸಂಸ್ಥೆಗಳಿಗೆ ಆದಾಯದಲ್ಲಿ ಹೆಚ್ಚಳ. ಗುರುಕೃಪೆಯಿಂದ ಆಸ್ತಿ-ಪಾಸ್ತಿ ಖರೀದಿಯೋಗವಿದೆ. ವ್ಯಯ ಸ್ಥಾನಸ್ಥಿತ ರವಿಯಿಂದ ರಾಜಕಾರಿಣಿಗಳಿಗೆ ಕಾನೂನು ತೊಡಕುಗಳು ಎದುರಾಗುವುದು.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-9

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)
ನಿರೀಕ್ಷಿತ ಧನ ಕೈ ಸೇರುವುದು. ಉತ್ತಮ ಭೋಜನ, ಶಯನ ಸುಖಗಳೂ ಉಂಟು. 'ಮಾತೇ ಮುತ್ತು' ದುಡುಕಿ ಮಾತನಾಡದಿರಿ. ಗುರು ಜನರ ಭೇಟಿಯಿಂದ ನಿಮ್ಮ ಅಭಿವೃದ್ಧಿಗೆ ಪೂರಕವಾಗುವುದು. ವಿದ್ಯಾರ್ಥಿಗಳು ಅಭ್ಯಾಸದ ಕಡೆ ಹೆಚ್ಚಿನ ಗಮನ ನೀಡಬೇಕು. ಸರ್ಕಾರಿ ಅಧಿಕಾರಿಗಳು ಕಾನೂನುಬಾಹಿರ ಕೆಲಸ ಮಾಡಿ ತೊಂದರೆಗೆ ಸಿಲುಕುವರು.

ಶ್ರೀ ನೃಸಿಂಹ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-3

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ಗುರು ನಿಮ್ಮ ರಾಶ್ಯಾಧಿಪತಿ, ನಿಮ್ಮ ರಾಶಿಯನ್ನು ಪೂರ್ಣ ದೃಷ್ಟಿಯಿಂದ ನೋಡುತ್ತಲಿದ್ದಾರೆ. ಗುರು ಪ್ರಭಾವದಿಂದ ಮನೆಯಲ್ಲಿ ಮಂಗಳ ಕಾರ್ಯಾಚರಣೆ. ಶುಭ ಸುದ್ದಿ ಬರುವುದರಿಂದ ಮನಸ್ಸಿನ ಕಳವಳ ನಿವಾರಣೆ ಆಗುವುದು. ಸಾಫ್ಟ್‌ವೇರ್ ಮಂದಿಗೆ ಕಂಪನಿ ಬದಲಾವಣೆಯಿಂದ ಉನ್ನತಿ. ಶನಿದೇವ ಶುಭನಿಲ್ಲ. ಅನಾವಶ್ಯಕ ಸಂಚಾರಗಳನ್ನು ಅವಾಯ್ಡ್ ಮಾಡಿ.

ಶ್ರೀ ಗುರು ಸ್ತುತಿ. ಶುಭ ಸಂಖ್ಯೆ-6

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)
ಚತುರತೆಯಿಂದ ವಿಧಿಯಾಟವೇ ಮೇಲು. ನೀವು ಬಯಸಿದ್ದೆಲ್ಲಾ ಸಿಗುವುದಿಲ್ಲ. ಸಿಕ್ಕಿದ್ದನ್ನೇ ಬಯಸಿಕೊಳ್ಳಬೇಕು. ಕೈಗೆ ಹಣ ಬಂದರೂ ಪ್ರಯೋಜನವಿಲ್ಲದ ಕೆಲಸಕ್ಕೆ ಬಳಕೆಯಾಗುವುದು. ಕಾಂಟ್ರಾಕ್ಟರುಗಳಿಗೆ, ಉದ್ದಿಮೆದಾರರಿಗೆ ಕಾರ್ಮಿಕರ ಅಸಹಕಾರದಿಂದ ಅಭಿವೃದ್ಧಿ ಕುಂಠಿತವಾಗುವುದು. ಸ್ನೇಹಿತರ ಜೊತೆ ಮಾತಿನ ಚಕಮಕಿಯಿಂದ ಮನಃಶಾಂತಿಗೆ ಭಂಗವಾಗುವುದು.

ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-4

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ವಾರದಾರಂಭಕ್ಕೆ ಹಸನ್ಮುಖಿ ಚಂದ್ರ ನಿಮ್ಮ ಬಾಳಿನಲ್ಲಿ ಸುಖ-ಸಂತೋಷ, ಸಂಪತ್ತುಗಳನ್ನು ತರುವನು. ಪಂಚಮ ಗುರು ಕೃಪೆಯಿಂದ ಕೌಟುಂಬಿಕ ವಿಚಾರದಲ್ಲಿ ಉಂಟಾಗಿದ್ದ ವಾದ-ವಿವಾದಗಳು ದೂರವಾಗುತ್ತವೆ. ವೃತ್ತಿಪರ ವ್ಯವಹಾರಗಳಲ್ಲಿ ಹೆಚ್ಚಿನ ಲಾಭಾಂಶವನ್ನು ಪಡೆಯುವಿರಿ. ರಾಹು-ಕೇತುಗಳು ಅಶುಭರಿದ್ದು ದುಡುಕು ತೀರ್ಮಾನಗಳಿಂದ ನಷ್ಟ, ಸಟ್ಟಾ, ರೇಸುಗಳಿಂದ ಯಾರೂ ಶ್ರೀಮಂತರಾಗಿಲ್ಲ.

ಶ್ರೀ ರಾಹು-ಕೇತು ಸ್ತೋತ್ರ ಪಠಿಸಿ. ಶುಭ ಸಂಖ್ಯೆ-2

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ನೀವು ಸಕಾರಾತ್ಮಕವಾಗಿ ಚಿಂತಿಸಲು ಮನೋಕಾರಕನೆನಿಸಿದ ಚಂದ್ರನ ಬೆಂಬಲವಿದೆ. ಹೊಸ ಹೂಡಿಕೆಗಳನ್ನು ಮಾಡಲು ಅಡ್ಡಿ ಇಲ್ಲ. ಸ್ತ್ರೀಯರೊಬ್ಬರ ಸಹಾಯದಿಂದ ಗೃಹೀಯ ಸಮಸ್ಯೆ ಪರಿಹಾರವಾಗುವುದು. ತೀರ್ಥಯಾತ್ರೆಗೆ ಮನಃಪ್ರೇರಣೆಯಾಗುವುದು. ಹೋಟೆಲ್, ಟೂರಿಸ್ಟ್ ಏಜೆನ್ಸಿಗಳಿಗೆ ಉತ್ತಮ ಲಾಭ ದೊರಕುವುದು. ವಾರದ ಕಡೆಗೆ ವಾತ, ಶೀತ ಸಂಬಂಧಿ ಕಾಯಿಲೆ ಕಾಡಬಹುದು.

ಶ್ರೀ ನಂಜುಂಡೇಶ್ವರ ದರ್ಶನ. ಶುಭ ಸಂಖ್ಯೆ-2

ಅತಿಥಿ ಉಪನ್ಯಾಸಕರ ನೇಮಕಕ್ಕೆ ಆಗ್ರಹಿಸಿ

ಎಸ್‌ಎಫ್‌ಐ ನೇತೃತ್ವದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ



ಭಾರತ ವಿದ್ಯಾರ್ಥಿ ಫೆಡರೇಷನ್ ನೇತೃತ್ವದಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಹುಣಸೂರು, ಅ.4– ಪಟ್ಟಣದ ಡಿ. ದೇವರಾಜ್ ಅರಸು ಪ್ರಥಮ ದರ್ಜೆ ಕಾಲೇಜು, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಸೇರಿದಂತೆ ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಬೇಕು ಮತ್ತು ಪರೀಕ್ಷಾ ಶುಲ್ಕ ಪಾವತಿ ದಿನಾಂಕ ಮತ್ತು ಪರೀಕ್ಷೆಯನ್ನು ಮುಂದೂಡುವಂತೆ ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (SFI) ನೇತೃತ್ವದಲ್ಲಿ ಡಿ.ದೇವರಾಜ ಅರಸು ಕಾಲೇಜು ಮತ್ತು ಮಹಿಳಾ ಪ್ರಥಮ ದರ್ಜೆ ಕಾಲೇಜುಗಳ ಮುಂದೆ ಪ್ರತ್ಯೇಕವಾಗಿ ಪ್ರತಿಭ ಟನೆ ನಡೆಸಲಾಯಿತು.

ಕಾಲೇಜುಗಳ ಮುಂದೆ SFI ನೇತೃತ್ವದಲ್ಲಿ ತರಗತಿ ಬಹಿಸ್ಕರಿಸಿ ನೂರಾರು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ಕೂಡಲೇ ನಮ್ಮ ಸಮಸ್ಯೆಗಳನ್ನು ಬಗೆಹರಿಸಬೇಕು, ಹೆಚ್ಚಿಸಿರುವ ಪರೀಕ್ಷಾ ಶುಲ್ಕವನ್ನು ಕಡಿಮೆ ಮಾಡಬೇಕು. ಉಪನ್ಯಾಸಕರನ್ನು ನೇಮಕ ಮಾಡಬೇಕು ಮತ್ತು ಪರೀಕ್ಷಾ ಶುಲ್ಕ ಪಾವತಿ ದಿನಾಂಕ ಮತ್ತು ಪರೀಕ್ಷೆಯ ದಿನಾಂಕವನ್ನು ಮುಂದೂಡಬೇಕು ಮತ್ತು ಮೂಲಭೂತ ಸೌಕರ್ಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ವಿಜಯ್ ಕುಮಾರ್ ಟಿ ಎಸ್ ಮಾತನಾಡಿ ರಾಜ್ಯದಲ್ಲಿ ಶೈಕ್ಷಣಿಕ ವರ್ಷ ಪ್ರಾರಂಭವಾಗಿ 3 ತಿಂಗಳು ಕಳೆದಿದೆ. ರಾಜ್ಯದಲ್ಲಿರುವ ಬಹುತೇಕ ಸರ್ಕಾರಿ ಪದವಿ ಕಾಲೇಜುಗಲ್ಲಿ ಶೇ 70 ಕ್ಕಿಂತ ಹೆಚ್ಚು ಅತಿಥಿ ಉಪನ್ಯಾಸಕರು ಕೆಲಸ ನಿರ್ವಹಿಸುತ್ತಿದ್ದಾರೆ. ಆದರೆ ಕಾಲೇಜುಗಳು ಪ್ರಾರಂಭವಾಗಿ 3 ತಿಂಗಳು ಕಳೆದರು ಅತಿಥಿ ಉಪನ್ಯಾಸಕರ ನೇಮಕವಾಗಿಲ್ಲ. ರಾಜ್ಯ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸುಮಾರು 11,000ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಹೆಚ್ಚುವರಿ ಬೋಧನಾ ಕಾರ್ಯಭಾರಕ್ಕೆ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಇಲ್ಲಿಯ ತನಕ ಅತಿಥಿ ಉಪನ್ಯಾಸಕ ನೇಮಕಾತಿ ಆಗಿಲ್ಲದ ಕಾರಣ ವಿದ್ಯಾರ್ಥಿಗಳಿಗೆ ಕಾಲೇಜುಗಳಲ್ಲಿ ಪಠ್ಯ ಕ್ರಮ ಮುಗಿದಿಲ್ಲ ಮತ್ತು ಹಲವು ಕಾಲೇಜುಗಳಲ್ಲಿ ಕೆಲವು ವಿಷಯಗಳಲ್ಲಿ ಪಾಠಗಳೇ ಪ್ರಾರಂಭವಾಗಿಲ್ಲ. ಅತಂತ್ರ ಸ್ಥಿತಿಯಲ್ಲಿ ವಿದ್ಯಾರ್ಥಿಗಳು ಸಿಲುಕಿದ್ದಾರೆ ಎಂದರು.

ಹುಣಸೂರು ತಾಲೂಕು ಅಧ್ಯಕ್ಷ ಜೀವನ್ ಕುಮಾರ್ ಮಾತನಾಡಿ, ಹೆಚ್ಚಾಗಿ ಸರ್ಕಾರಿ ಕಾಲೇಜುಗಳಲ್ಲಿ, ಬಡವ, ರೈತ, ಕಾರ್ಮಿಕ, ದಲಿತ, ಹಿಂದುಳಿದ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ವರ್ಷ ಸುಮಾರು 400 ರೂ. ಪರೀಕ್ಷಾ ಶುಲ್ಕ ಹೆಚ್ಚಳ ಮಾಡಲಾಗಿದೆ. ಅದರಿಂದ ತಕ್ಷಣ ಪರೀಕ್ಷಾ ಶುಲ್ಕ ಕಡಿಮೆ ಮಾಡಬೇಕು ಮತ್ತು ಪರೀಕ್ಷಾ ಶುಲ್ಕ ದಿನಾಂಕ ಮತ್ತು ಮುಖ್ಯ ಪರೀಕ್ಷೆಗಳನ್ನು ಮುಂದೂಡಬೇಕೆಂದು ಆಗ್ರಹಿಸಿದರು.

ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ವಿಜಯ್ ಕುಮಾರ್ ಟಿ.ಎಸ್. ತಾಲೂಕು ಅಧ್ಯಕ್ಷ ಜೀವನ್ ಕುಮಾರ್, ತಾಲೂಕು ಕಾರ್ಯದರ್ಶಿ ಪ್ರಿಯಾ, ರಾಜ್ಯ ಸಮಿತಿ ಸದಸ್ಯರಾದ ಅಭಿ ಡಿ ಮತ್ತು ರಜಿಯಾ ಯಾಸ್ಮಿನ್ ಹಾಗೂ ವಿದ್ಯಾರ್ಥಿ ಮುಖಂಡರಾದ ದೀಕ್ಷಿತಾ, ಸಹನಾ, ಸಿಂಚನ, ಸ್ಫೂರ್ತಿ ನಿಶಿತಾ, ಮಂಜು, ಮೊಹಮ್ಮದ್ ಸಕ್ಲೇನ್ ಮತ್ತು ನೂರಾರು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಟಿಪ್ಪರ್–ಇನ್ನೋವಾ ನಡುವೆ ಡಿಕ್ಕಿ: ಓರ್ವ ಸಾವು, ಮತ್ತಿಬ್ಬರಿಗೆ ಗಾಯ

ಹುಣಸೂರು, ಅ.4–ಟಿಪ್ಪರ್ ಮತ್ತು ಇನ್ನೋವಾ ಕಾರಿನ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಿಂದ ಓರ್ವ ಸಾವನ್ನಪ್ಪಿ ಇಬ್ಬರು ಗಾಯಗೊಂಡಿರುವ ಘಟನೆ ಶುಕ್ರವಾರ ಸಂಜೆ ಸಂಭವಿಸಿದೆ.

ಸರಗೂರು ತಾಲೂಕಿನ ತುಮ್ಮನೇಗೆ ನಿವಾಸಿ ಪರಮೇಶ್ ಅವರ ಪುತ್ರ ಮಲ್ಲಿಕಾರ್ಜುನ್(36) ಎಂಬುವರೇ ದುರಂತದಲ್ಲಿ ಬಲಿಯಾ ದವರು. ಗಾಯಗೊಂಡಿರುವ ಬಸವರಾಜ ಪ್ಪನವರ ಪುತ್ರ ಚೇತನ್(26) ಮತ್ತು ಬ್ರೋಮಾ ದೇವಯ್ಯನವರ ಪುತ್ರ ಸುಮಂತ್ ಅವ ರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ತಾಲೂಕಿನ ಚಿಲ್ಕುಂದ ತಂಬಾಕು ಮಾರು ಕಟ್ಟೆ ತಿರುವಿನಲ್ಲಿ ಹುಣಸೂರು ಕಡೆಯಿಂದ ಹೊರಟಿದ್ದ (ಕೆಎ.02ಎಎ–9693) ಇನ್ನೋವಾ ಮತ್ತು ಪಿರಿಯಾಪಟ್ಟಣ ಕಡೆಯಿಂದ ಬರುತ್ತಿದ್ದ ಟಿಪ್ಪರ್ (ಕೆಎ. 02–ಎಐ–3552)ನಡುವೆ ಡಿಕ್ಕಿ ಸಂಭವಿಸಿದ ಪರಿಣಾಮ ಇನ್ನೋವಾದಲ್ಲಿದ್ದ ಮಲ್ಲಿಕಾರ್ಜುನ ಸ್ಥಳದಲ್ಲೆ ಮೃತಪಟ್ಟಿದ್ದಾರೆ. ಇನ್ನೋವಾದಲ್ಲಿದ್ದ ಚೇತನ್ ಹಾಗೂ ಸುಮಂತ್ ತೀವ್ರವಾಗಿ ಗಾಯಗೊಂಡಿದ್ದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ಭೇಟಿ ನೀಡಿದ್ದ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯ ಸಿಪಿಐ ಮುನಿಯಪ್ಪ ಮತ್ತು ಸಿಬ್ಬಂದಿಗಳು ಗಾಯಳುಗಳನ್ನು ಆಸ್ಪತ್ರೆಗೆ ಸ್ಥಳಾಂತರಿಸಿ. ವಾಹನಗಳನ್ನು ವಶಕ್ಕೆ ಪಡೆದು ಬಳಿಕ ಸಂಚಾರ ಸುಗಮಗೊಳಿಸಿ ತನಿಖೆ ನಡೆಸುತ್ತಿದ್ದಾರೆ.

ಶ್ರೀಗುಂಜಾನರಸಿಂಹ ಸ್ವಾಮಿ ದೇವಸ್ಥಾನದ ಆವರಣದ ಲಕ್ಷ್ಮಿ ದೇವಸ್ಥಾನದಲ್ಲಿ ಕಳವು



ತಿ.ನರಸೀಪುರ, ಅ.4– ಪಟ್ಟಣದ ಶ್ರೀ ಗುಂಜಾನರಸಿಂಹ ಸ್ವಾಮಿ ದೇವಾಲಯದ ಒಳಾವರಣದಲ್ಲಿರುವ ಶ್ರೀ ಮಹಾಲಕ್ಷ್ಮಿ ಅಮ್ಮನವರ ಗುಡಿಯಲ್ಲಿಟ್ಟಿದ್ದ ಗೋಲಕದ ಹುಂಡಿಯನ್ನು ಒಡೆದು ಅದರಲ್ಲಿದ್ದ ಹಣವನ್ನು ಕಳ್ಳರು ದೋಚಿರುವ ಘಟನೆ ಶುಕ್ರವಾರ ರಾತ್ರಿ ನಡೆದಿದೆ.

ಪಟ್ಟಣದ ಶ್ರೀ ಗುಂಜಾನರಸಿಂಹ ಸ್ವಾಮಿ ದೇವಾಲಯದ ಗೋಡೆ ಮೇಲಿಂದ ಹತ್ತಿ ಇಳಿದಿರುವ ಕಳ್ಳರು ಶ್ರೀ ಮಹಾಲಕ್ಷ್ಮಿ ದೇವಾಲಯದ ಗೇಟ್ ಬೀಗ ಮುರಿದು ದೇವಾಲಯದ ಒಳಗೆ ನುಗ್ಗಿ ಗೋಲಕ ಒಡೆದು ಚಿಲ್ಲರೆ ಕಾಸು ಅಲ್ಲೇ ಬಿಟ್ಟು ನೋಟುಗಳನ್ನು ತೆಗೆದುಕೊಂಡು ಪರಾರಿಯಾಗಿದ್ದಾರೆ. ಎಷ್ಟು ಹಣ ದೋಚಿದ್ದಾರೆ ಎಂಬುದು ಖಚಿತ ಮಾಹಿತಿ ಇಲ್ಲ

ವಿಷಯ ತಿಳಿದ ಬಳಿಕ ದೇವಾಲಯಕ್ಕೆ ಡಿವೈಎಸ್‌ಪಿ, ರಘು, ಇನ್ಸ್ಪೆಕ್ಟರ್, ಧನಂಜಯ ಸಬ್‌ಇನ್ಸ್ಪೆಕ್ಟರ್ ಪೋಲಿಸ್ ಸಿಬ್ಬಂದಿಗಳು ಬೇಟಿ ಸ್ಥಳ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ತಾಯಿಯೊಂದಿಗೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ನವರಾತ್ರಿ ಪೂಜೆ



ದೇವಸ್ಥಾನ ಸಮಿತಿಯ ಪ್ರಧಾನ ಕಾರ್ಯದರ್ಶಿ ಜಿ.ಸುಬ್ರಮಣ್ಯ ಅವರ ಪುತ್ರಿ ಎಸ್.ಚಂದನ ಅವರನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಸನ್ಮಾನಿಸಿದರು.

ಹುಣಸೂರು, ಅ.4– ನಗರದ ಶ್ರೀ ಕೋಲನೂರು ಮಾರಿಯಮ್ಮ ದೇವಸ್ಥಾನದಲ್ಲಿ ನವರಾತ್ರಿ ಅಂಗವಾಗಿ ಹಮ್ಮಿಕೊಂಡಿದ್ದ ವಿಶೇಷ ಪೂಜೆಯಲ್ಲಿ ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಹಾಗೂ ಅವರ ಮಾತೃಶ್ರೀ ಶ್ರೀಮತಿ ರತ್ನ ಪ್ರೇಮ್ ಕುಮಾರ್ ಪಾಲ್ಗೊಂಡು ದೇವರಿಗೆ ಪೂಜೆ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ದೇವಸ್ಥಾನ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಜಿ.ಸುಬ್ರಮಣ್ಯ ಅವರ ಪುತ್ರಿ ಎಸ್. ಚಂದನ ಆಂಧ್ರಪ್ರದೇಶದ ಆಚಾರ್ಯ ನರೇಂದ್ರ ದೇವ್ ಯುನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಟೆಕ್ನಾಲಜಿಯಲ್ಲಿ ಎಂಎಸ್‌ಸ್ಸಿ (ಸಿಲ್ವಿಕಲ್ಚರ್ ಅಂಡ್ ಆಗ್ರೋ ಫಾರೆಸ್ಟ್ರಿ) ವಿಶ್ವವಿದ್ಯಾಲಯಕ್ಕೆ ಪ್ರಥಮ ಸ್ಥಾನ ಪಡೆದಿದ್ದು, ಇವರ ಸಾಧನೆಯನ್ನು ಪ್ರಶಂಶಿಸಿ ಮಂಜುನಾಥ್ ಅವರು ಸನ್ಮಾನಿಸಿದರು.

ಬಿ.ಎಸ್.ಸ್ಸಿ ಫಾರೆಸ್ಟ್ರಿಯಲ್ಲೂ ಚಿನ್ನದ ಪದಕ ಪಡೆದಿದ್ದ ಚಂದನ, ಇತ್ತೀಚಿಗೆ ನಡೆದ ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರ್ ಅಂಡ್ ರಿಸರ್ಚ್ ಪಿಎಚ್.ಡಿ ಪ್ರವೇಶ ಪರೀಕ್ಷೆಯಲ್ಲಿ ಆಲ್ ಇಂಡಿಯಾ ರ್‍ಯಾಂಕಿಂಗ್‌ನಲ್ಲಿ 17ನೇ ಸ್ಥಾನ ಪಡೆದು ತಾಲೂಕಿಗೆ ಕೀರ್ತಿ ತಂದಿದ್ದಾರೆ.

ಅ.7, ಭೇರ್ಯದಲ್ಲಿ ವಾಲ್ಮಿಕಿ ಜಯಂತೋತ್ಸವ



ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದ ಕರಪತ್ರವನ್ನು ತಾಲೂಕು ವಾಲ್ಮೀಕಿ ನಾಯಕರ ಸಂಘದ ಅಧ್ಯಕ್ಷ ಸಿ.ಸಿ.ಮಹದೇವ್ ಬಿಡುಗಡೆ ಮಾಡಿದರು.

ಭೇರ್ಯ: ವಾಲ್ಮೀಕಿ ಜಯಂತಿಯು ಹಿಂದೂ ಧರ್ಮದಲ್ಲಿ ಹೆಚ್ಚಿನ ಧಾರ್ಮಿಕ ಮಹತ್ವವನ್ನು ಹೊಂದಿದ್ದು ಮಹರ್ಷಿ ವಾಲ್ಮೀಕಿಯವರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಅ.7 ರಂದು ಸಾಲಿಗ್ರಾಮ ಪಟ್ಟಣದ ಹಳೇ ಶಾಲಾವರಣದಲ್ಲಿ ತಾಲೂಕು ಆಡಳಿತ, ತಾಪಂ, ಪುರಸಭೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಅವಳಿ ತಾಲೂಕು ವಾಲ್ಮೀಕಿ ನಾಯಕರ ಸಂಘದ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಮಾಜದ ಬಂದುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಲು ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕಿನ ನಾಯಕ ಸಮಾಜದ ಪ್ರತಿ ಮನೆ ಮನೆಗೂ ಕರಪತ್ರ ಹಂಚುವ ಮೂಲಕ ಆಹ್ವಾನಿಸಲಾಗುತ್ತಿದೆ ಎಂದು ಸಾಲಿಗ್ರಾಮ ತಾಲೂಕು ವಾಲ್ಮೀಕಿ ನಾಯಕರ ಸಂಘದ ಅಧ್ಯಕ್ಷ ಸಿ.ಸಿ.ಮಹದೇವ್ ತಿಳಿಸಿದರು.

ಭೇರ್ಯ ಗ್ರಾಮದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತೋತ್ಸವ ಕಾರ್ಯ ಕ್ರಮದ ಕರಪತ್ರ ಹಂಚಿ ಅವರು ಮಾತನಾಡಿದು. ವಾಲ್ಮೀಕಿ ಜಯಂತಿಯ ಆಚರಣೆಯು ತಮ್ಮ ಮಿತಿಗಳನ್ನು ಮೀರಿಸಿ, ತಮ್ಮ ಬೋಧನೆಗಳ ಮೂಲಕ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಲು ಜನಸಾಮಾನ್ಯರನ್ನು ಪ್ರೇರೇಪಿಸಿದ ಮಹಾನ್ ಸಂತನಿಗೆ ಸಲ್ಲಿಸುವ ಗೌರವವಾಗಿದೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಕ್ಷೇತ್ರದ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಚುನಾಯಿತ ಪ್ರತಿನಿಧಿಗಳು, ವಿವಿದ ಸಂಘಟನೆಯ ಮುಖಂಡರು ಸೇರಿದಂತೆ ಸಾವಿರಾರು ಜನರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ದಿನದಂದು ಸಾಲಿಗ್ರಾಮ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮಹರ್ಷಿ ವಾಲ್ಮೀಕಿ ಅವರ ಪುತ್ಥಳಿಯ ಭಾವಚಿತ್ರ ಹಾಗೂ ರಾಮಾಯಣ ಕುರಿತು ಸ್ತಬ್ಧ ಚಿತ್ರಗಳ ಮೆರವಣಿಗೆ ನಡೆಯಲಿದೆ ಎಂದು ತಿಳಿಸಿದರು.

ಪಿಡಿಓ ಮಮತಾ, ಲೆಕ್ಕ ಸಹಾಯಕಿ ಬಿ.ಎಸ್. ಅಶ್ವಿನಿ, ಸಂಘದ ಉಪಾಧ್ಯಕ್ಷ ವೆಂಕಟೇಶನಾಯಕ, ಕಾರ್ಯದರ್ಶಿ ಲೋಕೇಶ್, ಖಜಾಂಚಿ ಸಂತೋಷ್, ಸಂಘಟನಾ ಕಾರ್ಯದರ್ಶಿ ಬೈರೇಶ್, ಕುಮಾರ್, ನಿರ್ದೇಶಕ ರಾದ ಗೋಬಿಶಂಕರ್ ಟ್ಯಾಂಕ್ ಮಹೇಶ್, ಉದೇಶ ನಾಯಕ, ಯಜಮಾನ ಪ್ರಭಾಕರ್, ಕೆಇಬಿ ದೇವರಾಜ್, ಮಿರ್ಲೆ ವೆಂಕಟೇಶ್, ಹಸೋಗೆ ದಿನೇಶ್, ಮಲ್ಲಿಕಾರ್ಜುನ್, ಮಾವ ನೂರು ಮಂಜು ಸೇರಿದಂತೆ ಅನೇಕರು ಇದ್ದರು.

ಶ್ರೀಕಂಠೇಶ್ವರ ದೇವಾಲಯಕ್ಕೆ 1 ಕೋಟಿ 84 ಲಕ್ಷ 45 ಸಾವಿರ ನಗದು, 50 ಗ್ರಾಂ ಚಿನ್ನ ಆದಾಯ



ನಂಜನಗೂಡು: ಶ್ರೀಕಂಠೇಶ್ವರ ದೇವಾಲಯದ ಹುಂಡಿಯಲ್ಲಿ 1 ಕೋಟಿ 84 ಲಕ್ಷ 45 ಸಾವಿರ ನಗದು, 50 ಗ್ರಾಂ ಚಿನ್ನ, 1 ಕೆಜಿ 950 ಗ್ರಾಂ ಬೆಳ್ಳಿ, 21 ವಿದೇಶಿ ಕರೆನ್ಸಿಗಳು ಸಂಗ್ರಹವಾಗಿವೆ.

ದೇವಾಲಯದ ದಾಸೋಹ ಭವನದ ಆವರಣದಲ್ಲಿ ಶನಿವಾರ ಹುಂಡಿ ಎಣಿಕೆ ಕಾರ್ಯ ನಡೆಸಲಾಯಿತು, ಹುಂಡಿಯಲ್ಲಿ ಒಂದು ಕೋಟಿ 84 ಲಕ್ಷ ನಗದು, 50 ಗ್ರಾಂ ಚಿನ್ನ, ಒಂದು ಕೆಜಿ 950 ಗ್ರಾಂ ಬೆಳ್ಳಿ ಹಾಗೂ ಯುಎಸ್‌ಎ 3 ಡಾಲರ್, 7ಯುರೋ, 2 ರಿಯಾಲ್ಸ್, 1 ಕೆನಡಾ ಡಾಲರ್,2 ದಿರಾಮ್ಸ್, 1 ಪೌಂಡ್, 1 ಮಲೇಶಿಯಾ, 1 ನಿಪ್ಪೋನ್ ಜಿಂಕಾ, 2 ಆಸ್ಟ್ರೇಲಿಯಾ ಡಾಲರ್ ಸೇರಿದಂತೆ ಒಟ್ಟು 21 ವಿದೇಶಿ ಕರೆನ್ಸಿಗಳು ಲಭ್ಯವಾಗಿದ್ದು ಅತ್ಯಧಿಕ ಆದಾಯ ತರುವ ರಾಜ್ಯದ ದೇವಾಲಯ ಗಳಲ್ಲಿ ಶ್ರೀಕಂಠೇಶ್ವರ ದೇವಾಲಯವು ಸಹ ಅಗ್ರಗಣ್ಯ ಸ್ಥಾನವನ್ನು ಪಡೆದಿದೆ.

ಎಣಿಕೆ ಕಾರ್ಯದಲ್ಲಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘದ ಮಹಿಳೆಯರು ನೆರವಾದರು. ಇದೇ ಸಂದರ್ಭದಲ್ಲಿ ದೇವಾಲಯದ ಇಒ ಜಗದೀಶ್ ಕುಮಾರ್, ಸೇರಿದಂತೆ ದೇವಾಲಯದ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸನ್ಮಾನ



ಡಾಕ್ಟರೇಟ್ ಪದವಿ ಪಡೆದ ತಿ.ನರಸೀಪುರ ತಾಪಂ ಮಾಜಿ ಉಪಾಧ್ಯಕ್ಷ ಬಿ. ಮರಯ್ಯ ಅವರನ್ನು ರೇಷ್ಮೆ ಸಹಾಯಕ ನಿರ್ದೇಶಕ ಕೃಷ್ಣಮೂರ್ತಿ ಸನ್ಮಾನಿಸಿದರು. ಹಾಪ್‌ಕಾಮ್ಸ್ ಮಾಜಿ ನಿರ್ದೇಶಕ ಮುಸುವಿನ ಕೊಪ್ಪಲು ಪ್ರಕಾಶ್, ಆಲಗೂಡು ರಾಜು ಇದ್ದಾರೆ.

ಲಾಭದತ್ತ ಶೆಟ್ಟಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘ



ಶೆಟ್ಟಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಸಭೆಯನ್ನು ಉದ್ಘಾಟಿಸುತ್ತಿರುವುದು.

ಪಿರಿಯಾಪಟ್ಟಣ: ತಾಲೂಕಿನ ಸಂಘರ ಶೆಟ್ಟಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಸಭೆ ಗ್ರಾಮದಲ್ಲಿ ಶನಿವಾರ ನಡೆಯಿತು.

ಸಂಘದ ಅಧ್ಯಕ್ಷ ಎಸ್.ಪಿ.ಮಂಜುನಾಥ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹೆಚ್.ಎಸ್.ಮೂರ್ತಿಯವರು ಮಾತನಾಡಿ, ಈ ಬಾರಿ ನಮ್ಮ ಸಹಕಾರ ಸಂಘವು ಎರಡು ಕೋಟಿಗೂ ಹೆಚ್ಚಿನ ವಹಿವಾಟು ನಡೆಸಿ ಸುಮಾರು ಎರಡು ಲಕ್ಷದ ಮೂವತ್ತು ಸಾವಿರ ರೂಪಾಯಿಗಳ ಲಾಭ ಗಳಿಸಿದೆ ಎಂದರು.

ಸಹಕಾರ ಸಂಘವು ಇದೀಗ ಅಭಿವೃದ್ಧಿ ಹೊಂದುತ್ತಿದ್ದು ಇದಕ್ಕೆ ಕಟ್ಟಡದ ಅವಶ್ಯಕತೆ ಇರುವುದರಿಂದ ಸಂಘವನ್ನು ಅಭಿವೃದ್ಧಿ ಮಾಡಿ ಕಟ್ಟಡ ಕಟ್ಟಲು ವಿವಿಧ ಭಾಗಗಳಿಂದ ಸರ್ಕಾರದಿಂದ ಧನಸಹಾಯ ಪಡೆದು ಕಟ್ಟಡ ನಿರ್ಮಿಸಬೇಕೆಂದು ಇದಕ್ಕೆ ರೈತರು ಸಹಕಾರ ನೀಡಬೇಕೆಂದು ತಿಳಿಸಿದರು.

ಜಿಲ್ಲಾ ಬ್ಯಾಂಕ್ ಮೇಲ್ವಿಚಾರಕ ಯತೀಶ್ ಮಾತನಾಡಿ ಸಂಘವು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ಈ ಬಾರಿ ನೂರಕ್ಕೆ ನೂರರಷ್ಟು ಸಾಲ ವಸೂಲಾತಿ ಮಾಡಲಾಗಿದೆ. ಇದರಿಂದ ಈ ಸಂಘಕ್ಕೆ ಹೆಚ್ಚಿನ ಸಾಲ ಸೌಲಭ್ಯ ನೀಡಲು ಅನುಕೂಲವಾಗುತ್ತದೆ ಎಂದು ತಿಳಿಸಿದರು ಕಾರ್ಯಕ್ರಮದಲ್ಲಿ ಉಪಧ್ಯಕ್ಷ ಎಸ್.ಪಿ.ಸೋಮೇಗೌಡ ನಿರ್ದೇಶಕರಾದ ಶಶಿಧರ್, ಕಾಂತರಾಜು, ಸೋಮೇಗೌಡ, ದಶರಥ, ಶ್ರೀಮತಿ ಎಚ್.ಆರ್.ಬೇಬಿ, ಶ್ರೀಮತಿ ರೂಪ, ಶ್ರೀಮತಿ ಶೋಭಾ ಮಹದೇವ ಆಚಾರ್, ಕುಮಾರ್ ನಾಯಕ್ ಹಾಗೂ ಸಂಘದ ಸದಸ್ಯರು ಹಾಗೂ ಮುಖ್ಯನಿರ್ವಹಣಾಧಿಕಾರಿ ಮೂರ್ತಿ ಸಹಾಯಕಿ ಶ್ರೀಮತಿ ಕವಿತಾ ಇತರರು ಹಾಜರಿದ್ದರು.

ಪ್ರಬಂಧ ಸ್ಪರ್ಧೆಯಲ್ಲಿ ಶ್ರಾವ್ಯಗೆ ತೃತೀಯ ಸ್ಥಾನ



ಬೆಟ್ಟದಪುರದ ಅನಿಕೇತನ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿನಿ ಶ್ರಾವ್ಯ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಗಾಂಧಿ ಜಯಂತಿ ಅಂಗವಾಗಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ. ಮೈಸೂರಿನಲ್ಲಿ ನಡೆದ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ತನ್ವೀರ್ ಸೇಠ್ ಬಹುಮಾನ ವಿತರಿಸಿದರು.

ಹುಣಸೂರಿನ ಸಾಯಿ ಮಂದಿರದ ಬಾಬಾನಿಗಾಗಿಯೇ ರಾಜೇಶ್ ಕೃಷ್ಣನ್ ಹಾಡಿದ ಧ್ವನಿಸುರುಳಿ ಕೊಡುಗೆ



ಹುಣಸೂರು, ಅ.4– ಖ್ಯಾತ ಗಾಯಕರಾದ ರಾಜೇಶ್ ಕೃಷ್ಣನ್ ಹುಣಸೂರಿನ ಭಗವಾನ್ ಶ್ರೀ ಸಾಯಿ ಬಾಬಾ ಮಂದಿರಕ್ಕಾಗಿಯೇ ಹಾಡಿದ ಸಾಯಿಬಾಬಾ ಗೀತೆಯ ಧ್ವನಿ ಸುರುಳಿಯನ್ನು ಸಾಯಿ ಭಕ್ತ ಜಿ ಟಿವಿ ಕನ್ನಡ ಚಾನಲ್‌ನ ಸಚಿನ್ ಪ್ರಕಾಶ ಸಾಯಿ ಮಂದಿರದ ಮ್ಯಾನೇಜ್ಮೆಂಟ್ ಟ್ರಸ್ಟಿಗಳಾದ ಶ್ರೀಮತಿ ರತ್ನ ಪ್ರೇಮ್ ಕುಮಾರ್ ಅವರಿಗೆ ನೀಡಿದರು. ಇದಲ್ಲದೆ ಸಚಿನ್ ಪ್ರಕಾಶ್ ಅವರಿಗೆ ಸರಿಗಮಪ ತಂಡದವರು ಕೊಡುಗೆಯಾಗಿ ನೀಡಿದ್ದ ಚಿನ್ನದ ಸರವನ್ನು ಸಚಿನ್ ಪ್ರಕಾಶ್ ಅವರು ಹುಣಸೂರು ಸಾಯಿ ಮಂದಿರಕ್ಕೆ ಕೊಡುಗೆಯಾಗಿ ನೀಡಿ ಭಗವಾನ್ ಶ್ರೀ ಸಾಯಿಬಾಬಾರಿಗೆ ಅರ್ಪಣೆ ಮಾಡಿದರು ಈ ಸಂದರ್ಭದಲ್ಲಿ ಸಚಿನ್ ಪ್ರಕಾಶ್ ಅವರ ಪತ್ನಿ ಸಹ ಜೊತೆಗಿದ್ದರು.

ಅ.12, ಹುಣಸೂರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರುಗಳ ಪದಗ್ರಹಣ

ಹುಣಸೂರು, ಅ.4–ಹುಣಸೂರು ಕಾಂಗ್ರೆಸ್ ಪಕ್ಷದ ನೂತನ ಅಧ್ಯಕ್ಷರುಗಳ ಪದಗ್ರಹಣ ಸಮಾರಂಭ ಅ.12 ರಂದು ನಡೆಯಲಿದ್ದು ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ಮನವಿ ಮಾಡಿದ್ದಾರೆ.

ನಗರದ ಸಲೀಂ ಪ್ಯಾಲೇಸ್ ಕಲ್ಯಾಣ ಮಂಟಪದ ಆವರಣದಲ್ಲಿ ಅ.12 ರಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ ಮಹದೇವಪ್ಪ, ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಶೇಠ್, ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯನವರ ನೇತೃತ್ವದಲ್ಲಿ ನೂತನವಾಗಿ ಆಯ್ಕೆಯಾಗಿರುವ ಹುಣಸೂರು ನಗರ ಹುಣಸೂರು ಗ್ರಾಮಾಂತರ ಹಾಗೂ ಬಿಳಿಕೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳು ಹಾಗೂ ವಿವಿಧ ಘಟಕಗಳ ಪದಾಧಿಕಾರಿಗಳು ಅಧಿಕಾರ ಸ್ವೀಕರಿಸಲಿದ್ದಾರೆ. ಪಕ್ಷದ ಮುಖಂಡರುಗಳು ಕಾರ್ಯಕರ್ತರನ್ನು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕರೆ ತರುವ ಮೂಲಕ ಪಕ್ಷದ ಸಂಘಟನೆ ಹಾಗೂ ಬಲವರ್ಧನೆಗೆ ಒತ್ತು ನೀಡಬೇಕೆಂದರು.

ಮೃತ ಟೈಲರ್ ಕುಟುಂಬಕ್ಕೆ ಪರಿಹಾರ ವಿತರಣೆ



ಟೈಲರ್ ಪ್ರಕಾಶ್ ಅವರ ಪತ್ನಿ ಮಾದೇವಮ್ಮ ಅವರಿಗೆ ಕರ್ನಾಟಕ ರಾಜ್ಯ ಕರುನಾಡು ನೆರವು ನಿಧಿ ಸಮಿತಿ ವತಿಯಿಂದ ಧನಸಹಾಯ ಮಾಡಲಾಯಿತು.

ಹೆಚ್.ಡಿ.ಕೋಟೆ: ತಾಲೂಕು ಅಂತರ ಸಂತೆ ಹೋಬಳಿ ಹೊಸಮಾಳ ಗ್ರಾಮದ ನಿವಾಸಿ ಟೈಲರ್ ಎನ್.ಪ್ರಕಾಶ ಅವರು ಇತ್ತಿಚೆಗೆ ಹೃದಯಘಾತದಿಂದ ನಿಧನರಾಗಿದ್ದು, ಕರ್ನಾಟಕ ರಾಜ್ಯ ಕರುನಾಡು, ನೆರವು ನಿಧಿ ಸಮಿತಿ ವತಿಯಿಂದ ಟೇಲರ್ ಎನ್.ಪ್ರಕಾಶ ಅವರ ಪತ್ನಿ ಮಾದೇವಮ್ಮ ಅವರಿಗೆ 40 ಸಾವಿರ ಧನ ಸಹಾಯ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಕರುನಾಡ ಸಮಿತಿಯ ಗೌರವಾಧ್ಯಕ್ಷ ಪರಮೇಶ್, ಉಪಾಧ್ಯಕ್ಷ ಪ್ರಕಾಶ್, ಖಜಾಂಚಿ ಕಮಲ, ಸಹಕಾರ್ಯದರ್ಶಿ ಪಲ್ಲವಿ, ನಿರ್ದೇಶಕರುಗಳಾದ ರಂಗಸ್ವಾಮಿ, ಪ್ರಸನ್ನ, ಜಗದೀಶ, ಮಂಜು, ಗೋವಿಂದು, ನೀಲಕಂಠಯ್ಯ, ಶ್ರೀನಿವಾಸ್, ಲೋಕಿ, ಇನ್ನು ಮುಂತಾದವರು ಹಾಜರಿದ್ದರು.

ಸಾಹಿತ್ಯ, ಸಂಸ್ಕೃತಿ ಮೈಗೂಡಿಸಿಕೊಂಡಿರುವ ಹೆಚ್.ವಿಶ್ವನಾಥ್

ಯೋಗಾನಂದೇಶ್ವರ ಮಠದ ಶ್ರೀ ಶಂಕರಭಾರತೀ ಸ್ವಾಮೀಜಿ



ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ದಂಪತಿ ಶ್ರೀ ಶಂಕರ ಭಾರತೀ ಸ್ವಾಮೀಜಿಗಳಿಂದ ಆಶೀರ್ವಾದ ಪಡೆದರು.

ಕೆ.ಆರ್.ನಗರ, ಅ.4– ದೇಶಕ್ಕೆ ಮಾದರಿಯಾಗಿ ಶಿಕ್ಷಣ ಕ್ಷೇತ್ರಕ್ಕೆ ಹೊಸ ಬುನಾದಿ ಹಾಕಿ, ಬಡ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಬಿಸಿಯೂಟದಂತಹ ಯೋಜನೆ ಕೊಟ್ಟು ವಿದ್ಯಾರ್ಥಿಗಳ ಉಚಿತ ಶಿಕ್ಷಣಕ್ಕೆ ದಾರಿದೀಪವಾದವರು ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಎಂದು ಪಟ್ಟಣದ ಯಡತೊರೆ ಯೋಗಾನಂದೇಶ್ವರ ಮಠದ ಶ್ರೀ ಶಂಕರ ಭಾರತೀ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಯಡತೊರೆ ಯೋಗಾನಂದೇಶ್ವರ ಮಠದಲ್ಲಿ ತಮ್ಮ ಅಭಿಮಾನಿಗಳು ಮತ್ತು ಪಟ್ಟಣದ ನಾಗರಿಕರು ಹಮ್ಮಿಕೊಂಡಿದ್ದ ವಿದೇಶ ಪ್ರಯಾಣದ ಶುಭ ಹಾರೈಕೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ, ಅಭಿನಂದಿಸಿ ಮಾತನಾಡಿದ ಅವರು, ರಾಜಕಾರಣಿಗಳು ಸದಾ ಸ್ವ ಹಿತಾಸಕ್ತಿಗೆ ಕೆಲಸ ಮಾಡುತ್ತಾರೆ. ಆದರೆ ನಮ್ಮೂರಿನ ಈ ನಾಯಕ ರಾಜಕೀಯದ ಜೊತೆಗೆ ಸಾಹಿತ್ಯ, ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದು, ಇದು ಎಲ್ಲರೂ ಹೆಮ್ಮೆ ಪಡುವ ವಿಚಾರ ಎಂದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ಎನ್. ವಿಜಯ್ ಮಾತನಾಡಿ, ಮಾಜಿ ಸಿಎಂ ದಿ.ಎಸ್.ಎಂ.ಕೃಷ್ಣ ಅವರ ಸಂಪುಟದಲ್ಲಿ ಶಿಕ್ಷಣ ಮಂತ್ರಿಯಾಗಿ ವಿಭಿನ್ನವಾದ ಯೋಜನೆಗಳ ಜಾರಿ, ಸಹಕಾರ ಸಚಿವರಾಗಿ ಮುಚ್ಚಿ ಹೋಗಿದ್ದ ಸಹಕಾರ ಸಂಘಗಳನ್ನು ಪುನಶ್ಚೇತನಗೊಳಿಸಿ ಹೊಸ ರೂಪ ನೀಡಿ ರೈತರಿಗೆ ಸಕಾಲದಲ್ಲಿ ಸಾಲ ದೊರೆಯುವಂತೆ ಮಾಡಿದ್ದು ವಿಶ್ವನಾಥ್ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈಗಲೂ ಕೆಆರ್.ನಗರ ಕ್ಷೇತ್ರದಲ್ಲಿ ಸಾಹೇಬ ಎಂದೇ ಹೆಚ್.ವಿಶ್ವನಾಥ್ ಪ್ರಸಿದ್ಧರಾಗಿದ್ದಾರೆ. ಇಂತಹ ಹಿರಿಯ ರಾಜಕಾರಣಿ ಮಾರ್ಗದರ್ಶನದಲ್ಲಿ ನನ್ನ ಮುಂದಿನ ರಾಜಕೀಯ ನಡೆ ಮುಂದುವರಿಸುವುದಾಗಿ ತಿಳಿಸಿದರು.

ಈವರೆಗೆ 9 ಪುಸ್ತಕಗಳನ್ನು ಬರೆದಿರುವ ಹೆಚ್.ವಿಶ್ವನಾಥ್ ಅವರು 10ನೇ ಪುಸ್ತಕ ಬರೆಯಲು ಸಜ್ಜಾಗಿರುವ ಅವರಿಗೆ, ಪತ್ನಿ ಶಾಂತಮ್ಮ ಅವರಿಗೆ ಒಳ್ಳೆಯದಾಗಲಿ ಎಂದು ಶುಭ ಕೋರಿದರು.

ಈ ವೇಳೆ ಮಾಜಿ ಎಂಎಲ್‌ಸಿ ಕೆ.ಸಿ. ಪುಟ್ಟಸಿದ್ದಶೆಟ್ಟಿ, ನವನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಜಿಲ್ಲಾ ಒಕ್ಕಲಿಗರ ಸಂಘದ ಮಾಜಿ ಉಪಾಧ್ಯಕ್ಷ ಎಸ್.ಪಿ. ತಮ್ಮಯ್ಯ, ಜಾನಪದ ಪರಿಷತ್ ಸದಸ್ಯ ಜಿ.ಪ್ರಕಾಶ್, ತಾಲೂಕು ಕಸಾಪ ಅಧ್ಯಕ್ಷ ಶಂಕರ್, ದಲಿತ ಮುಖಂಡ ನಾಗರಾಜು, ನಿವೃತ್ತ ತಂಬಾಕು ಅಧೀಕ್ಷಕ ಕೆ.ಎನ್. ದೀನೇಶ್, ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಜಿಪಂ ಮಾಜಿ ಸದಸ್ಯರಾದ ಅಮಿತ್ ದೇವರಹಟ್ಟಿ, ಜಿ.ಆರ್. ರಾಮೇಗೌಡ, ಜಯರಾಮೇಗೌಡ, ಪುರಸಭೆ ಮಾಜಿ ಅಧ್ಯಕ್ಷ ತಮ್ಮನಾಯಕ ಸದಸ್ಯ ಕೆ.ಪಿ. ಪ್ರಭುಶಂಕರ್, ಮಾಜಿ ಸದಸ್ಯ ಬಾಲ್ ಶಿವಕುಮಾರ್, ಕೆ.ಎಲ್.ರಾಜೇಶ್, ಕೆ.ಬಿ.ಸುಬ್ರಮಣ್ಯ, ಸಾಹಿತಿ ಪ್ರಭಾಕರ್, ಜಿಲ್ಲಾ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಡಾ.ನಟರಾಜ್, ಸಂಘಟನಾ ಕಾರ್ಯದರ್ಶಿ ರಾಜಶೇಖರ್, ಉಪನ್ಯಾಸಕರಾದ ಡಿ.ಸಿ. ಕುಮಾರ್, ಹೆಚ್.ಡಿ.ರಾಘು, ಎಸ್.ಎಸ್. ಮಂಜು, ರಾವಂದೂರು ಪ್ರಕಾಶ್ ಇತರರಿದ್ದರು.

ನಿಸಾರ್ ಅಹ್ಮದ್ ನಿಧನ



ಹುಣಸೂರು, ಅ.4– ನಗರದ 22ನೇ ವಾರ್ಡಿನ ಅಮೀನ್ ನಗರ ನಿವಾಸಿ ಪತ್ರಿಕೆಯ ವಿತರಕ ಸಮೀರ್ ಅಬ್ಬು ಅವರ ತಂದೆ ನಿಸಾರ್ ಅಹ್ಮದ್ (58) ಅನಾರೋಗ್ಯದಿಂದ ನಿಧನರಾಗಿದ್ದಾರೆ.

ದಿವಂಗತರು ಪತ್ನಿ, ಇಬ್ಬರು ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಶಬ್ಬೀರ್ ನಗರದ ಕಬ್ರ ಸ್ಥಾನದಲ್ಲಿ ನಡೆಯಿತು. ಮಾಜಿ ಶಾಸಕ ಎಚ್.ಪಿ.ಮಂಜುನಾಥ್, ನಗರಸಭೆ ಸದಸ್ಯರಾದ ರಂಜಿತಾ ಹರೀಶ್, ಜಬಿ ಉಲ್ಲಾ ಖಾನ್ ಹಂಡಿ. ಸರವಣ, ಪತ್ರಿಕೆಯ ವಿತರಕರ ಸಂಘದ ಸದಸ್ಯರು, ಪತ್ರಕರ್ತರು, ಟೀಮ್ ಫ್ರೀಡಂ ಯುವಕರು ಹಾಗೂ ಇನ್ನಿತರು ಭೇಟಿ ನೀಡಿ ಸಂತಾಪ ಸೂಚಿಸಿದ್ದಾರೆ.

ಅ.7ಕ್ಕೆ ಮೈಸೂರು ಬಿಷಪ್ ಡಾ. ಫ್ರಾನ್ಸಿಸ್ ಸೆರಾವೋ ಪದಗ್ರಹಣ

ಮೈಸೂರು ಧರ್ಮಪ್ರಾಂತ್ಯದ ಪ್ರೇಷಿತ ಆಡಳಿತಾಧಿಕಾರಿ ಡಾ.ಬರ್ನಾಡ್ ಮೊರಾಸ್ ಮಾಹಿತಿ



ಮೈಸೂರಿನ ಬನ್ನಿಮಂಟಪದ ಬಿಷಪ್ ಹೌಸ್ ಸಭಾಂಗಣದಲ್ಲಿ ಶನಿವಾರ ನೂತನ ಬಿಷಪ್ ಪದಗ್ರಹಣ ಕುರಿತು ಮೈಸೂರು ಧರ್ಮಪ್ರಾಂತ್ಯದ ಪ್ರೇಷಿತ ಆಡಳಿತಾಧಿಕಾರಿ ಡಾ.ಬರ್ನಾಡ್ ಮೊರಾಸ್ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದರು.

ಮೈಸೂರು, ಅ.4(ಬಿಎಲ್‌ಯು)– ಮೈಸೂರು ಧರ್ಮಪ್ರಾಂತ್ಯದ ನೂತನ ಬಿಷಪ್ (ಧರ್ಮಾಧ್ಯಕ್ಷ) ಆಗಿ ನಿಯೋಜನೆಗೊಂಡಿರುವ ಡಾ. ಫ್ರಾನ್ಸಿಸ್ ಸೆರಾವೋ, ಅಕ್ಟೋಬರ್ 7ರಂದು ಪದಗ್ರಹಣ ಮಾಡಲಿದ್ದಾರೆ ಎಂದು ಧರ್ಮಪ್ರಾಂತ್ಯದ ಪ್ರೇಷಿತ ಆಡಳಿತಾಧಿ ಕಾರಿ ಡಾ.ಬರ್ನಾಡ್ ಮೊರಾಸ್ ತಿಳಿಸಿದರು.



ಫ್ರಾನ್ಸಿಸ್ ಸೆರಾವೋ

ಮೈಸೂರಿನ ಬನ್ನಿಮಂಟಪದ ನೂತನ ಬಿಷಪ್ ಕಚೇರಿಯ ಸಭಾಂಗಣದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಸೈಂಟ್ ಫಿಲೋಮಿನಾ ದೇವಾಲಯದಲ್ಲಿ ಅಂದು ಸಂಜೆ 4.30ಕ್ಕೆ ವಿಧ್ಯುಕ್ತವಾಗಿ ಅಧಿಕಾರ ಸ್ವೀಕಾರ ಮಾಡಲಿದ್ದಾರೆ ಎಂದು ಹೇಳಿದರು.

ಅಂದಿನ ಅಧಿಕಾರ ಸ್ವೀಕಾರ ಕಾರ್ಯಕ್ರಮದಲ್ಲಿ ಬೆಂಗಳೂರಿನ ಆರ್ಚ್ ಬಿಷಪ್ ಡಾ. ಪೀಟರ್ ಮಚಾಡೊ ಹಾಗೂ ಭಾರತ ಮತ್ತು ನೇಪಾಳದ ಅಪೋಸ್ಟೋಲಿಕ್ ಬೋಧಕ ಡಾ. ಲಿಯೋಪೋಲ್ಡೊ ಗಿರೆಲ್ಲಿ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ತಿಳಿಸಿದರು.

ಅಂದಿನ ಕಾರ್ಯಕ್ರಮದಲ್ಲಿ ಮೊದಲಿಗೆ ಬಲಿ ಪೂಜೆ, ಬಳಿಕ ಹೊಸ ಧರ್ಮಾಧ್ಯಕ್ಷರ ಪ್ರತಿಷ್ಠಾಪನೆ ನಡೆಯಲಿದೆ. ನಂತರ ಸಂಜೆ 6.30 ಗಂಟೆಗೆ ಸನ್ಮಾನ ನಡೆಯಲಿದ್ದು, ಡಾ. ಬರ್ನಾಡ್ ಮೊರಾಸ್‌ಗೆ ಬೀಳ್ಕೊಡುಗೆ ಗೌರವ ಸಲ್ಲಿಸಲಾಗುವುದು. ಅಂತಿಮವಾಗಿ ಸಹ ಭೋಜನವನ್ನು ಆಯೋಜಿಸಲಾಗಿದೆ ಎಂದರು.

ಅಕ್ಟೋಬರ್ 7ರ ಕಾರ್ಯಕ್ರಮದಲ್ಲಿ ಸಾವಿರಾರು ಮಂದಿ ಆಗಮಿಸುವ ಹಿನ್ನೆಲೆಯಲ್ಲಿ ವಾಹನ ದಟ್ಟಣೆ ಉಂಟಾಗದಂತೆ ಸೈಂಟ್ ಫಿಲೋಮಿನಾ ಹೈಸ್ಕೂಲ್ ಮತ್ತು ಗುಡ್ ಶೆಫರ್ಡ್ ಸ್ಕೂಲ್ ಆವರಣದಲ್ಲಿ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಲಾಗಿದೆ.

ಮೈಸೂರು ಬಿಷಪ್ ಆಗಿ ಅಧಿಕಾರ ಸ್ವೀಕರಿಸುತ್ತಿರುವ ಡಾ.ಫ್ರಾನ್ಸಿಸ್ ಸೆರಾವೋ, ಆಗಸ್ಟ್ 15, 1959ರಲ್ಲಿ ಮೂಡಬಿದಿರೆಯಲ್ಲಿ ಜನಿಸಿದರು. ಇವರು ತಂದೆ-ತಾಯಿಯ 11 ಮಕ್ಕಳಲ್ಲಿ ಇವರೇ ಕಿರಿಯರಾಗಿದ್ದಾರೆ. 1992, ಏಪ್ರಿಲ್ 30ರಂದು ಡಾ. ಫ್ರಾನ್ಸಿಸ್ ಸೆರಾವೋ ಧಾರ್ಮಿಕ ಗುರುವಾಗಿ ದೀಕ್ಷೆ ಪಡೆದರು. ನಂತರ ಮಂಗಳೂರಿನ ಸೈಂಟ್ ಆಲೋಶಿಯಾ ಕಾಲೇಜಿನ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

2014, ಮೇ 7ರಂದು ಶಿವಮೊಗ್ಗದ ಧರ್ಮಾಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಡಾ. ಫ್ರಾನ್ಸಿಸ್ ಸೆರಾವೋ ಅವರಿಗೆ ಈಗ 69 ವರ್ಷ ವಯಸ್ಸಾಗಿದೆ. ಯಾವುದೇ ಧರ್ಮ ಪ್ರಾಂತ್ಯದಲ್ಲಿ ಬಿಷಪ್ ಆದವರು 75 ವರ್ಷಕ್ಕೆ ನಿವೃತ್ತಿ ಹೊಂದಬೇಕಿದೆ. ಈ ಪ್ರಕಾರ ಬಿಷಪ್ ಆಗಿ ಸೇವೆ ಸಲ್ಲಿಸಲು ಇವರಿಗೆ ಇನ್ನು ಆರು ವರ್ಷ ಅವಕಾಶವಿದೆ.

ಮೈಸೂರು ಧರ್ಮ ಪ್ರಾಂತ್ಯದ ವಿಕಾರ್ ಜನರಲ್ ಆಲ್ಫ್ರೆಡ್ ಜಾನ್ ಮೆಡೋನ್ಸಾ, ಹಣಕಾಸು ಆಡಳಿತಾಧಿಕಾರಿ ಸೆಬಾಸ್ಟಿನ್ ಅಲೆಕ್ಸಾಂಡರ್, ಮೈಸೂರು ಶೈಕ್ಷಣಿಕ ಸೊಸೈಟಿಯ ಕಾರ್ಯದರ್ಶಿ ಎಡ್ವರ್ಡ್ ಸಾಲ್ಡಾನಾ, ಹಣಕಾಸು ಸಮಿತಿ ಸದಸ್ಯ ಮೈಕಲ್ ನರೋನಾ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಧರ್ಮ ಕ್ಷೇತ್ರದ ಸಂಕ್ಷಿಪ್ತ ವಿವರ

ಮೈಸೂರು ಧರ್ಮ ಕ್ಷೇತ್ರ ಮೂಲತಃ ಸೊಸೈಟಿ ಆಫ್ ಜೀಸಸ್ ಪಾಲನೆಯಲ್ಲಿತ್ತು. ತರುವಾಯ 1785ರಲ್ಲಿ ಪ್ಯಾರಿಷ್ ಫಾರಿನ್ ಮಿಷನ್‌ಗೆ ಹಸ್ತಾಂತರಗೊಂಡಿತು.

ಆರಂಭಿಕ ಹಂತದಲ್ಲಿ ಮೈಸೂರು ಧರ್ಮ ಕ್ಷೇತ್ರಕ್ಕೆ ಬೆಂಗಳೂರು ಆಡಳಿತ ಕಚೇರಿಯಾಗಿತ್ತು ಆದರೆ 1940, ಫೆಬ್ರವರಿ 13 ರಂದು ಮೈಸೂರು, ಮಂಡ್ಯ, ಕೊಡಗು, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು, ನೀಲಗಿರೀಸ್ ಮತ್ತು ಕೊಯಮತ್ತೂರು ಜಿಲ್ಲೆ ಒಳಗೊಂಡ ಮೈಸೂರು ಪ್ರಾಂತ್ಯವಾಗಿ ರಚನೆಗೊಂಡಿತು. 1931ರಲ್ಲಿ ಮೈಸೂರು ಧರ್ಮ ಪ್ರಾಂತ್ಯಕ್ಕೆ ರೋಮ್‌ನಲ್ಲಿ ಪೋಪ್ 12ನೇ ಪಯಸ್ ಅವರು ಡಾ.ರೇನೆ ಫ್ಯೂಗ ಅವರನ್ನು ಮೊದಲ ಧರ್ಮಾಧ್ಯಕ್ಷರನ್ನಾಗಿ ನೇಮಿಸಿದರು. ಮೈಸೂರು ಧರ್ಮ ಕ್ಷೇತ್ರದಲ್ಲಿ ಕ್ಯಾಥೋಲಿಕ್ ಕ್ರಿಶ್ಚಿಯನ್ ಜನಸಂಖ್ಯೆ 1,81,581 ಇದ್ದು, 90 ಧರ್ಮ ಕೇಂದ್ರಗಳಿವೆ. 43 ಉಪ ಧರ್ಮ ಕೇಂದ್ರಗಳಿದ್ದು, 128 ಧರ್ಮ ಗುರುಗಳು, 14 ವಿವಿಧ ಧಾರ್ಮಿಕ ಗುರುಗಳು ಸೇವೆ ಸಲ್ಲಿಸುತ್ತಿದ್ದಾರೆ. 108 ಧಾರ್ಮಿಕ ಸಭೆಗಳ ಧರ್ಮ ಗುರುಗಳು ಹಾಗೂ 893 ಧಾರ್ಮಿಕ ಭಗಿನಿಯರು ಇದ್ದಾರೆ. ಮೈಸೂರಿನಲ್ಲಿ ಕ್ರೈಸ್ತ ದೇವಾಲಯಗಳ ನಿರ್ಮಾಣ ಸೇರಿದಂತೆ ಶೈಕ್ಷಣಿಕ ಸೇವೆಗೆ ಮೈಸೂರು ಒಡೆಯರ್ ಹಿಂದಿನಿಂದಲೂ ಸಹಕರಿಸುತ್ತಾ ಬಂದಿದ್ದಾರೆ.

ತನಿಖಾ ವರದಿ ಬಹಿರಂಗವಿಲ್ಲ

ಲೈಂಗಿಕ ಕಿರುಕುಳ ಆರೋಪ ಎದುರಿಸುತ್ತಿದ್ದ ಮೈಸೂರಿನ ಹಿಂದಿನ ಬಿಷಪ್ ಡಾ.ವಿಲಿಯಂ ಅವರ ವಿರುದ್ಧ ರೋಮ್ ನಗರದ ವ್ಯಾಟಿಕನ್ ಸಿಟಿ ತನಿಖೆ ನಡೆಸಿದೆ. ಆದರೆ ತನಿಖೆಯ ವರದಿಯನ್ನು ಬಹಿರಂಗ ಗೊಳಿಸುವುದಿಲ್ಲ. ಸದ್ಯ ಡಾ.ವಿಲಿಯಂ ಅವರು ಬೆಂಗಳೂರಿನಲ್ಲಿ ಇದ್ದಾರೆ.

- ಡಾ. ಬರ್ನಾಡ್ ಮೊರಾಸ್, ಧರ್ಮಪ್ರಾಂತ್ಯದ ಪ್ರೇಷಿತ ಆಡಳಿತಾಧಿಕಾರಿ, ಮೈಸೂರು.

'ಆಪರೇಷನ್ ನವರಾತ್ರಿ' ಮೂಲಕ ಭಿಕ್ಷಾಟನೆ ಮಾಡುತ್ತಿದ್ದ 30ಕ್ಕೂ ಹೆಚ್ಚು ಅಧಿಕ ಮಕ್ಕಳ ರಕ್ಷಣೆ

ಅನಿಷ್ಟಕ್ಕೆ ಆಸ್ಪದ ನೀಡದಂತೆ ಪೋಷಕರಲ್ಲಿ ಅರಿವು



ಮಕ್ಕಳನ್ನು ಭಿಕ್ಷಾಟನೆಯಲ್ಲಿ ತೊಡಗಿಸಿದ್ದ ಪೋಷಕರಿಗೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ತಿಳುವಳಿಕೆ ನೀಡಿತು.

ಮೈಸೂರು, ಅ.4– ನಾಡಹಬ್ಬ ದಸರಾ ಮಹೋತ್ಸವದ ವೇಳೆ ವಿವಿಧೆಡೆ ಭಿಕ್ಷಾಟನೆ ಮಾಡುತ್ತಿದ್ದ 30ಕ್ಕೂ ಹೆಚ್ಚು ಮಕ್ಕಳನ್ನು 'ಆಪರೇಷನ್ ನವರಾತ್ರಿ ವಿಶೇಷ ಕಾರ್ಯಾಚರಣೆ ಮೂಲಕ ರಕ್ಷಣೆ ಮಾಡಲಾಗಿದೆ.

ಮಕ್ಕಳ ಸಹಾಯವಾಣಿ 1098, 112

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮಕ್ಕಳ ರಕ್ಷಣಾಧಿಕಾರಿಗಳ ಸೂಚನೆ ಮೇರೆಗೆ ಮಕ್ಕಳ ಸಹಾಯವಾಣಿ(1098/112) ಹಾಗೂ ಮಕ್ಕಳ ವಿಶೇಷ ಪೊಲೀಸ್ ಘಟಕದ ಸಹಕಾರದೊಂದಿಗೆ ಕೈಗೊಂಡಿದ್ದ 'ಆಪರೇಷನ್ ನವರಾತ್ರಿ' ಕಾರ್ಯಾಚರಣೆಯಲ್ಲಿ 12 ಬಾಲಕರು, 21 ಬಾಲಕಿಯರು ಸೇರಿ ಒಟ್ಟು 33 ಮಕ್ಕಳ ರಕ್ಷಣೆ ಮಾಡಿ, ತಾತ್ಕಾಲಿಕ ಪುನರ್ವಸತಿ ಕಲ್ಪಿಸಲಾಗಿದೆ.

ದಸರಾ ಆಹಾರ ಮೇಳ, ವಸ್ತು ಪ್ರದರ್ಶನ, ಅರಮನೆ, ಮೃಗಾಲಯ ಸೇರಿದಂತೆ ಹೆಚ್ಚು ಪ್ರವಾಸಿಗರು ಸೇರುವ ಸ್ಥಳಗಳಲ್ಲಿ ಭಿಕ್ಷಾಟನೆ ಹಾಗೂ ಆಟಿಕೆ ಇನ್ನಿತರ ವಸ್ತುಗಳ ಮಾರಾಟದ ನೆಪದಲ್ಲಿ ಹಣಕ್ಕೆ ಒತ್ತಾಯ ಮಾಡುತ್ತಿದ್ದರ ಬಗ್ಗೆ ಸಾರ್ವಜನಿಕರಿಂದ ಮಾಹಿತಿ ಬಂದಾಕ್ಷಣವೇ ಅಂತಹ ಮಕ್ಕಳನ್ನು ರಕ್ಷಣೆ ಮಾಡಲಾಗಿದೆ. ಅಲ್ಲದೆ ವಿಶೇಷ ತಂಡಗಳ ಮೂಲಕವೂ ಜನನಿಬಿಡ ಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಸಲಾಗಿದೆ.

ಪೋಷಕರಿಗೆ ತಿಳುವಳಿಕೆ: ರಕ್ಷಿಸಲ್ಪಟ್ಟ ಮಕ್ಕಳನ್ನು, ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಿದ ನಂತರ ಸರ್ಕಾರಿ ಪುನರ್ವಸತಿ ಕೇಂದ್ರಗಳಲ್ಲಿ ಆಶ್ರಯ ನೀಡಲಾಗಿತ್ತು. ಬಳಿಕ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ರವಿಚಂದ್ರ ಹಾಗೂ ಸದಸ್ಯರು, ಮಕ್ಕಳನ್ನು ಭಿಕ್ಷಾಟನೆಗೆ ದೂಡಿದ್ದ ಪೋಷಕರೊಂದಿಗೆ ಸಭೆ ನಡೆಸಿದರು. ಹಣದ ಆಸೆಗೆ ಮಕ್ಕಳನ್ನು ಭಿಕ್ಷಾಟನೆಗೆ ದೂಡಿ, ಅವರ ಬದುಕನ್ನು ಹಾಳು ಮಾಡಬೇಡಿ ಎಂದು ತಿಳುವಳಿಕೆ ನೀಡುವುದರ ಜೊತೆಗೆ ಇದು ಮರುಕಳಿಸಿದರೆ ಕಾನೂನು ಕ್ರಮ ಕೈಗೊಳ್ಳುವ ಎಚ್ಚರಿಕೆಯನ್ನೂ ನೀಡಿದರು.

ಮಾಹಿತಿ ನೀಡಿ: ಮರುಕದಿಂದ ಮಕ್ಕಳಿಗೆ ಭಿಕ್ಷೆ ನೀಡಿದರೆ ಪರೋಕ್ಷವಾಗಿ ಅವರ ಬದುಕನ್ನು ಹಾಳು ಮಾಡಿದಂತಾಗುತ್ತದೆ. ಹಣದಾಸೆಗೆ ಶಾಲೆಗೆ ಹೋಗುವ ಮಕ್ಕಳನ್ನೂ ಬಲವಂತವಾಗಿ ಭಿಕ್ಷಾಟನೆಗೆ ದೂಡುವವರಿದ್ದಾರೆ. ಸಣ್ಣ ವಯಸ್ಸಿನಲ್ಲೇ ನೂರಾರು ರೂಪಾಯಿ ಕೈಗೆ ಸಿಕ್ಕರೆ ಮಕ್ಕಳು ಕೆಟ್ಟ ಹಾದಿ ಹಿಡಿಯುವ ಸಾಧ್ಯತೆ ಇರುತ್ತದೆ. ಪೋಷಕರಿಲ್ಲದ ಮಕ್ಕಳಿಗೆ ಸರ್ಕಾರಿ ಪುನರ್ವಸತಿ ಕೇಂದ್ರಗಳಲ್ಲಿ ಆಶ್ರಯ ಕಲ್ಪಿಸಿ, ವಿದ್ಯಾಭ್ಯಾಸಕ್ಕೂ ನೆರವಾಗಲಾಗುತ್ತದೆ. ಆದ್ದರಿಂದ ಪುಟ್ಟ ಮಕ್ಕಳನ್ನು ಎತ್ತಿಕೊಂಡು ಭಿಕ್ಷೆ ಕೇಳುವ ಮಹಿಳೆಯರು, ಅಪ್ರಾಪ್ತರು ಕಂಡರೆ ಕೂಡಲೇ ಮಕ್ಕಳ ಸಹಾಯವಾಣಿ(1098/112)ಗೆ ಮಾಹಿತಿ ನೀಡುವಂತೆ ಅಧಿಕಾರಿಗಳು ಮನವಿ ಮಾಡಿದ್ದಾರೆ.

ನಾಳೆ ಚಾಮುಂಡೇಶ್ವರಿ ರಥೋತ್ಸವ

ಮೈಸೂರು, ಅ.4– ನವರಾತ್ರಿ ಪೂಜಾ ಮಹೋತ್ಸವದ ನಂತರ ಸಂಪ್ರದಾಯದಂತೆ ಚಾಮುಂಡಿಬೆಟ್ಟದಲ್ಲಿ ಸೋಮವಾರ(ಅ.6) ಚಾಮುಂಡೇಶ್ವರಿ ಅಮ್ಮನವರ ರಥೋತ್ಸವ ಜರುಗಲಿದೆ.



ಸೋಮವಾರ ಬೆಳಗ್ಗೆ 9.32ರಿಂದ 9–52 ಗಂಟೆಯೊಳಗೆ ಸಲ್ಲುವ ಶುಭ ಮುಹೂರ್ತದಲ್ಲಿ ತಾಯಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ, ರಥೋತ್ಸವಕ್ಕೆ ಚಾಲನೆ ನೀಡಲಾಗುತ್ತದೆ. ರಾಜವಂಶಸ್ಥರ ಸಮ್ಮುಖದಲ್ಲಿ ಅಪಾರ ಸಂಖ್ಯೆಯ ಭಕ್ತರು ರಥ ಎಳೆಯಲಿದ್ದಾರೆ.

ಆಭರಣಗಳಿಂದ ಅಲಂಕಾರ ಮಾಡಿದ ಚಾಮುಂಡೇಶ್ವರಿ ಉತ್ಸವಮೂರ್ತಿಯನ್ನು ಮಂಗಳವಾದ್ಯದೊಂದಿಗೆ ದೇವಾಲಯದ ಹೊರಗೆ ತಂದು, ರಥದ ಮೇಲೆ ಪ್ರತಿಷ್ಠಾಪಿಸಲಾಗುತ್ತದೆ. ದೇವಾಲಯದ ಸುತ್ತಲೂ ರಥೋತ್ಸವ ನಡೆಯಲಿದ್ದು, ಮಂಗಳವಾದ್ಯ, ಪೊಲೀಸ್ ವಾದ್ಯ, ವೀರಗಾಸೆ, ಇನ್ನಿತರ ಕಲಾತಂಡಗಳು ಜೊತೆಗೆ ಸಾಗಲಿವೆ. ಇದೇ ವೇಳೆ ಫಿರಂಗಿ ದಳದ ಸಿಬ್ಬಂದಿ ಸಿಡಿಮದ್ದು ಸಿಡಿಸಿ, ತಾಯಿಗೆ ಗೌರವ ಸಮರ್ಪಿಸಲಿದ್ದಾರೆ. ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ರಥಕ್ಕೆ ಹಣ್ಣು-ಜವನ ಸಮರ್ಪಿಸಲಿದ್ದಾರೆ.

ಸ್ಥಳೀಯರು ಸೇರಿದಂತೆ ವಿವಿಧೆಡೆಯಿಂದ ಸಾವಿರಾರು ಸಂಖ್ಯೆಯ ಭಕ್ತರು ಚಾಮುಂಡೇಶ್ವರಿ ರಥೋತ್ಸವಕ್ಕೆ ಆಗಮಿಸುವುದರಿಂದ ಬಿಗಿ ಪೊಲೀಸ್ ಬಂದೋಬಸ್ತ್‌ಗೆ ತಯಾರಿ ಮಾಡಿಕೊಳ್ಳಲಾಗುತ್ತಿದೆ. ಮೆಟ್ಟಿಲು ಮಾರ್ಗದಲ್ಲೂ ಪೊಲೀಸರನ್ನು ನಿಯೋಜಿಸಲು ಕ್ರಮ ವಹಿಸಲಾಗಿದೆ. ನಗರ ಬಸ್ ನಿಲ್ದಾಣದಿಂದ ಬೆಟ್ಟಕ್ಕೆ ಸಾರಿಗೆ ಸಂಸ್ಥೆ ಬಸ್‌ಗಳ ಸಂಖ್ಯೆಯನ್ನೂ ಹೆಚ್ಚಿಸುವ ಸಾಧ್ಯತೆ ಇದೆ.


ಡಿಆರ್‌ಸಿ ಸಿನಿಮಾಸ್‌ನ ಸ್ಕ್ರೀನ್ 2ರ ಎಲ್ಲಾ ಟಿಕೆಟ್ ಖರೀದಿಸಿ ಬಿಜೆಪಿ ಕಾರ್ಯಕರ್ತರೊಂದಿಗೆ

'ಕಾಂತಾರ ಚಾಪ್ಟರ್–1' ಸಿನಿಮಾ ವೀಕ್ಷಿಸಿದ ಮಾಜಿ ಸಂಸದ ಪ್ರತಾಪ್ ಸಿಂಹ

- ಕಾರ್ಯಕರ್ತರಿಗಾಗಿ ಮತ್ತೆ ಸೋಮವಾರ ಸಂಜೆ ಶೋ ಸಹ ಬುಕ್ ಮಾಡಿದ್ದೇನೆ ; ಸಿಂಹ
- ಕನ್ನಡದ ಇಂತಹ ಒಳ್ಳೆ ಸಿನಿಮಾ ಬಂದಾಗ ಥಿಯೇಟರ್‌ಗೆ ಬಂದು ನೋಡಿ ಪ್ರೋತ್ಸಾಹಿಸಬೇಕು

ಮೈಸೂರು,ಅ.4(ಪಿಎಂ)– 'ಕಾಂತಾರ ಚಾಪ್ಟರ್–1' ಸಿನಿಮಾವನ್ನು ಬಿಜೆಪಿ ಕಾರ್ಯಕರ್ತರೊಂದಿಗೆ ವೀಕ್ಷಿಸಲು ಡಿಆರ್‌ಸಿ ಸಿನಿಮಾಸ್‌ನ ಸ್ಕ್ರೀನ್ 2ರಲ್ಲಿ ಶನಿವಾರ ಸಂಜೆ ಶೋನ ಪೂರ್ಣ ಟಿಕೆಟ್ ಬುಕ್ ಮಾಡಿದ್ದ ಮಾಜಿ ಸಂಸದ ಪ್ರತಾಪ್ ಸಿಂಹ, ಅಂತೆಯೇ ಕಾರ್ಯಕರ್ತರೊಂದಿಗೆ ಸಿನಿಮಾ ನೋಡಿ ಸಂಭ್ರಮಿಸಿದರು.

ಮೈಸೂರಿನ ಜಯಲಕ್ಷ್ಮೀಪುರಂನ ಬಿ.ಎಂ.ಹ್ಯಾಬಿಟೆಟ್ ಮಾಲ್‌ನಲ್ಲಿರುವ ಡಿಆರ್‌ಸಿ ಮಲ್ಟಿಪ್ಲೆಕ್ಸ್‌ನ ಸ್ಕ್ರೀನ್ 2ರಲ್ಲಿ ಇಂದು ಸಂಜೆ 4 ಗಂಟೆಯ ಶೋ ಅನ್ನು ಅವರು ಕಾರ್ಯಕರ್ತರೊಂದಿಗೆ ವೀಕ್ಷಿಸಿದರು. ಸದರಿ ಸ್ಕ್ರೀನ್‌ನ ಎಲ್ಲಾ 197 ಟಿಕೆಟ್‌ಗಳನ್ನು 68,920 ರೂ. ನೀಡಿ ಅವರು ಖರೀದಿಸಿದ್ದರು.



ಮಾಜಿ ಸಂಸದ ಪ್ರತಾಪ್ ಸಿಂಹ ಅವರು ಬಿಜೆಪಿ ಕಾರ್ಯಕರ್ತರೊಂದಿಗೆ 'ಕಾಂತಾರ ಚಾಪ್ಟರ್–1' ಸಿನಿಮಾ ವೀಕ್ಷಿಸುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಸಿನಿಮಾ ವೀಕ್ಷಣೆಗೂ ಮುನ್ನ ಮಾಧ್ಯಮದರೊಂದಿಗೆ ಮಾತನಾಡಿದ ಪ್ರತಾಪ್ ಸಿಂಹ, ಇಂದು ಕಾಂತಾರ ಚಾಪ್ಟರ್–1 ಸಿನಿಮಾವನ್ನು ನಮ್ಮ ಕಾರ್ಯಕರ್ತರ ಜೊತೆ ನೋಡೋಣವೆಂದು ಪ್ಲಾನ್ ಮಾಡಿ ಇಲ್ಲಿನ ಸ್ಕ್ರೀನ್ 2 ಅನ್ನು ಬುಕ್ ಮಾಡಿದ್ದೆ. ಅಂತೆಯೇ ನಮ್ಮ ಕಾರ್ಯಕರ್ತರು ಬಂದಿದ್ದಾರೆ. ಹಲವು ಕಾರ್ಯಕರ್ತರಿಗೆ ಟಿಕೆಟ್ ಸಿಕ್ಕಿಲ್ಲ. ಅವರಿಗಾಗಿ ಸೋಮವಾರ ಸಂಜೆ ಇದೇ ವೇಳೆಯ ಶೋ ಅನ್ನು ಬುಕ್ ಮಾಡಿದ್ದೇನೆ ಎಂದು ತಿಳಿಸಿದರು.

ಕಾರ್ಯಕರ್ತರೊಟ್ಟಿಗೆ ಈ ಸಿನಿಮಾ ನೋಡಬೇಕೆಂಬ ಬಯಕೆ ಇತ್ತು. ಏಕೆಂದರೆ ಕೊಂಡು ಓದುವವರಿದ್ದರೆ, ಸಾಹಿತಿಗಳು, ಲೇಖಕರು ಬೆಳೆಯುತ್ತಾರೆ. ಹಾಗೆಯೇ ನಮ್ಮ ಕನ್ನಡ ಚಿತ್ರರಂಗ ಬೆಳೆಯಲು ಥಿಯೇಟರ್‌ಗೆ ಬಂದು ಸಿನಿಮಾ ನೋಡುವವರು ಇರಬೇಕು. ಮೊದಲೆಲ್ಲಾ ಪ್ಯಾನ್ ಇಂಡಿಯಾ ಸಿನಿಮಾ ಎಂದರೆ ಕೇವಲ ಹಿಂದಿ ಸಿನಿಮಾ ಎನ್ನುವಂತಿತ್ತು. ಅದನ್ನು ತೆಲುಗು ಸಿನಿಮಾ ಇಂಡಸ್ಟ್ರಿ ಬ್ರೇಕ್ ಮಾಡಿತು. ಹಿಂದಿ ಸಿನಿಮಾದವರು ನಾಚುವಂತಹ ಸಿನಿಮಾಗಳನ್ನು ಕೊಟ್ಟು ಒಳ್ಳೆಯ ಆದಾಯವನ್ನೂ ಗಳಿಸಿ ಶಹಭಾಷ್ ಎನ್ನಿಸಿಕೊಂಡರು ಎಂದರು.

ನಮ್ಮ ಕನ್ನಡದಲ್ಲಿ ಅಂತಹ ಸಿನಿಮಾಗಳು ಬರಬೇಕು. ಕನ್ನಡ ಚಿತ್ರರಂಗವೂ ಬೆಳೆಯಬೇಕು. ಡಾ.ರಾಜ್‌ಕುಮಾರ್, ವಿಷ್ಣುವರ್ಧನ್, ಅಂಬರೀಷಣ್ಣ ಇವರೆಲ್ಲಾ ಇದ್ದಾಗ ಕನ್ನಡ ಚಿತ್ರರಂಗ ಯಾವ ರೀತಿ ಉತ್ತುಂಗದಲ್ಲಿ ಇತ್ತೋ ಹಾಗೆಯೇ ಪ್ರಖ್ಯಾತಿ ಹೊಂದಬೇಕು ಎಂಬುದು ನಮ್ಮ ಮಹದಾಸೆಯಾಗಿತ್ತು. ಆದರೆ ಅಂತಹ ಸಿನಿಮಾಗಳು ಬರುತ್ತಿರಲಿಲ್ಲ. ಆದರೆ ಹೊಂಬಾಳೆ ಫಿಲಂಸ್ ಪ್ಯಾನ್ ಇಂಡಿಯಾ ಸಿನಿಮಾ ಮಾಡಿದ್ದೂ ಮಾತ್ರವಲ್ಲದೆ, ಇಡೀ ಜಗತ್ತೇ ಉಬ್ಬೇರಿಸುವಂತೆ ಮಾಡಿದೆ ಎಂದು ತಿಳಿಸಿದರು.

ಅದೇ ಬ್ಯಾನರ್‌ನಲ್ಲಿ ಕಾಂತಾರ ಚಾಪ್ಟರ್ 1 ಅದ್ಭುತವಾಗಿ ಮೂಡಿ ಬಂದಿದೆ. ಕನ್ನಡಿಗರಾಗಿ ಇಂತಹ ಒಳ್ಳೆಯ ಸಿನಿಮಾಗಳು ಬಂದಾಗ ಪ್ರೋತ್ಸಾಹಿಸುವುದು ನಮ್ಮ ಕರ್ತವ್ಯ. ಥಿಯೇಟರ್‌ಗಳಿಗೆ ಬಂದು ಇಂತಹ ಸಿನಿಮಾಗಳನ್ನು ನೋಡಿ ಪ್ರೋತ್ಸಾಹ ನೀಡಬೇಕು. ನಮ್ಮ ಕನ್ನಡದ ನಟರು, ಕಲಾವಿದರನ್ನು ಬೆಳೆಸಬೇಕು. ಇದೇ ನಿಟ್ಟಿನಲ್ಲಿ ಬಿಜೆಪಿ ಕಾರ್ಯಕರ್ತರೆಲ್ಲರೂ ಸೇರಿ ಸಿನಿಮಾವನ್ನು ಒಟ್ಟಿಗೆ ನೋಡಲು ಬಂದಿದ್ದೇವೆ ಎಂದು ಸಂತಸ ವ್ಯಕ್ತಪಡಿಸಿದರು. ಬಿಜೆಪಿ ಮುಖಂಡರಾದ ಎಂ.ಯು.ಸುಬ್ಬಯ್ಯ, ಕಿರಣ್‌ಗೌಡ ಮತ್ತಿತರರು ಹಾಜರಿದ್ದರು.

ದಸರಾ ಜಂಬೂಸವಾರಿ

ಬಹುಮಾನಿತ ಸ್ತಬ್ಧಚಿತ್ರಗಳು

ಬೆಂಗಳೂರು ವಿಭಾಗ



ಪ್ರಥಮ : ಚಿತ್ರದುರ್ಗ (ರಾಜ ವೀರಮದಕರಿ ನಾಯಕ)



ದ್ವಿತೀಯ : ಬೆಂಗಳೂರು ನಗರ (ಬ್ರ್ಯಾಂಡ್ ಬೆಂಗಳೂರಿನತ್ತ ದಿಟ್ಟ ಹೆಜ್ಜೆ)



ತೃತೀಯ : ತುಮಕೂರು (ನವ್ಯ ಮತ್ತು ಪ್ರಾಚೀನ ಶಿಲ್ಪಕಲಾ ಸಂಕೀರ್ಣ)

ಬೆಳಗಾವಿ ವಿಭಾಗ



ಪ್ರಥಮ : ಗದಗ (ಜೋಡು ಕಳಸದ ಗುಡಿ)




ದ್ವಿತೀಯ : ಧಾರವಾಡ (ರಾಷ್ಟ್ರಧ್ವಜ ತಯಾರಿಕಾ ಕೇಂದ್ರ)




ತೃತೀಯ : ಬೆಳಗಾವಿ (ಶ್ರೀ ಮಹಾಕಾಳಿ ಮಾಯಕ್ಕ ದೇವಿ)

ಕಲಬುರ್ಗಿ ವಿಭಾಗ



ಪ್ರಥಮ : ಬೀದರ್ (ಬೀದರ್ ಕೋಟೆ)

ದ್ವಿತೀಯ : ಕೊಪ್ಪಳ (ಕಿನ್ನಾಳ ಕಲೆ)



ತೃತೀಯ : ವಿಜಯನಗರ (ವಿಜಯನಗರ ಜಿಲ್ಲೆಯ ವೈಶಿಷ್ಟ್ಯತೆಗಳು)

ಮೈಸೂರು ವಿಭಾಗ



ಪ್ರಥಮ : ಚಾಮರಾಜನಗರ (ಪ್ರಕೃತಿಯ ಸೌಹಾರ್ದತೆಯೊಂದಿಗೆ ಪ್ರಗತಿಯತ್ತ ಸಾಗೋಣ)

ದ್ವಿತೀಯ : ದಕ್ಷಿಣ ಕನ್ನಡ (ದೈವಾರಾಧನೆ– ಸಾಂಪ್ರದಾಯಿಕ ಕ್ರೀಡೆ)




ತೃತೀಯ : ಚಿಕ್ಕಬಳ್ಳಾಪುರ (ಜ್ಞಾನಿ ವಿಜ್ಞಾನಿಗಳ ನಾಡು)

ಕೇಂದ್ರ / ರಾಜ್ಯ ಹಾಗೂ ವಿವಿಧ ನಿಗಮಗಳ ವಿಭಾಗದಲ್ಲಿ



ಪ್ರಥಮ : ಹೆಚ್‌ಎಎಲ್ (ವಿಜಯ ರನ್‌ವೇ– ಭಾರತದ ಆಕಾಶಕ್ಕೆ ಹೆಚ್‌ಎಎಲ್‌ನ ಶಕ್ತಿ)



ದ್ವಿತೀಯ : ರಾಜೀವ ಗಾಂಧಿ ಆರೋಗ್ಯ ವಿವಿ (ಡ್ರಗ್ಸ್ ಮುಕ್ತ ಕ್ಯಾಂಪಸ್ ಅಭಿಯಾನ)



ತೃತೀಯ : ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ (ಸುಂದರ ಸ್ವಚ್ಛ ಪರಿಸರ)



ಸಮಾಧಾನಕರ : ತಾಂಡಾ ಅಭಿವೃದ್ಧಿ ನಿಗಮದ ಸ್ತಬ್ಧಚಿತ್ರ

ಇಂದಿನಿಂದ ಮೈಸೂರಲ್ಲಿ 'ಹೆಚ್‌ಆರ್ ದಸರಾ 2025– ಮೈಸೂರು ಕೈಗಾರಿಕಾ ಸಮೃದ್ಧಿಯ ನೋಟ' ಕಾರ್ಯಕ್ರಮ

ಮೈಸೂರು,ಅ.4(ಜಿಎ)–ಮೈಸೂರು ಸಿಹೆಚ್‌ಆರ್‌ಓ ವೇದಿಕೆ, ಎನ್‌ಐಪಿಎಂ, ಎಡಿನ್ ಫೌಂಡೇಷನ್, ಅಪೋಲೋ ಆಸ್ಪತ್ರೆ ಮತ್ತು ಎಸ್‌ಆರ್‌ಎಫ್ ಡಿಟೆಕ್ಟಿವ್ಸ್ ಮತು ಸೆಕ್ಯೂರಿಟಿ ಸಹಯೋಗದೊಂದಿಗೆ 'ಹೆಚ್‌ಆರ್ ದಸರಾ 2025– ಮೈಸೂರು ಕೈಗಾರಿಕಾ ಸಮೃದ್ಧಿಯ ನೋಟ' ಎಂಬ 9 ದಿನಗಳ ಕೈಗಾರಿಕೆ ಮತ್ತು ಸಂಸ್ಕೃತಿ ಸಮಾರಂಭವನ್ನು ಆರಂಭಿಸಲಾಗಿದೆ ಎಂದು ಸಿಹೆಚ್‌ಆರ್‌ಓ ವೇದಿಕೆ ಅಧ್ಯಕ್ಷ ಬಿ.ಎಂ.ಗೌತಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್ಲಾ ಸಂಸ್ಥೆಗಳು ಒಟ್ಟುಗೂಡಿ ಅ.5 ರಿಂದ ಡಿ.12 ರವರೆಗೆ ನಿಗದಿತ ದಿನಾಂಕದಂದು 9 ದಿನಗಳ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದ್ದು, ಅ. 5 ರಂದು ಹೆಚ್.ಡಿ.ಕೋಟೆ ತಾಲೂಕಿನ ಹಾಡಿಗಳ ಸುಮಾರು 60 ಮಕ್ಕಳನ್ನು ನಗರಕ್ಕೆ ಕರೆತಂದು ಐಷಾರಾಮಿ ಹೋಟೆಲ್‌ನಲ್ಲಿ ಊಟ, ಹಬ್ಬದ ಬಟ್ಟೆ ವಿತರಣೆ ವ್ಯವಸ್ಥೆ ಮಾಡಲಾಗಿದೆ. ಅ.17 ರಂದು ಚಾಮರಾಜ ಕೈಗಾರಿಕಾ ಪ್ರದೇಶದಲ್ಲಿ ಹೊಸದಾಗಿ ಸ್ಥಾಪಿತ ಕೈಗಾರಿಕೆಗಳಿಗೆ, ಉತ್ತಮ ತಯಾರಿಕಾ ಘಟಕಗಳಿಗೆ ಹೆಚ್‌ಆರ್ ವೃತ್ತಿಪರರು ಹಾಗೂ ಶಿಕ್ಷಕರನ್ನು ಕರೆದೊಯ್ದು ವೀಕ್ಷಣೆಗೆ ಅವಕಾಶ, ಅ.24 ರಂದು ಆನ್‌ಲೈನ್ ಮೂಲಕ ಎಚ್.ಆರ್. ವೃತ್ತಿಪರರು, ಉದ್ಯಮಿಗಳ ಚರ್ಚೆ ಏರ್ಪಡಿಸಲಾಗುತ್ತಿದೆ ಎಂದರು.

ನ.2 ರಂದು ಅರಮನೆ ದ್ವಾರದಲ್ಲಿ ಸ್ವಚ್ಛತಾ ಕಾರ್ಯ, ನ.10 ರಂದು ಹೆಚ್‌ಆರ್. ಶ್ರೇಷ್ಠತೆ ಕುರಿತ ವಿಚಾರ ಸಂಕಿರಣ, ನ.14 ರಂದು ಅತ್ಯುತ್ತಮ ಹೆಚ್‌ಆರ್ ಕಾರ್ಯನಿರ್ವಹಣೆ ವಿಷಯದ ಚರ್ಚೆ, ನ.21 ರಂದು ಹೆಚ್‌ಆರ್ ವೃತ್ತಿಪರರು ಮತ್ತು ಶಿಕ್ಷಕರಿಗೆ ಕೆಲಸ– ಜೀವನ ನಿರ್ವಹಣೆ ಕಾರ್ಯಕ್ರಮ ಇರಲಿವೆ. ಇದಲ್ಲದೆ ನ.29ರಂದು ಆರ್ಕೆಡ್ ಹೋಟೆಲ್ ಮತ್ತು ಡಿ.12 ರಂದು ಸಹ ಕಾರ್ಯಕ್ರಮಗಳು ಹೆಚ್‌ಆರ್‌ಗಳಿಗೆ ಸಂಬಂಧಿಸಿದಂತೆ ಇದ್ದು, ಎಸ್‌ಡಿಎಂ ಐಎಂಡಿ ಕಾಲೇಜಿನಲ್ಲಿ ನಡೆಯಲಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಸಿ.ಹರ್ಷಿತಾ, ಸಿ.ವಿ.ಶ್ರೀನಿವಾಸನ್, ಎನ್.ದೇವರಾಜ್, ಎಂ.ಫಣೀಶ್, ಡಾ.ಅಮನ್ ನಾಯಕ್, ಎಂ.ಎ.ದೇವಯ್ಯ, ಎನ್.ಕಿರಣ್‌ಕುಮಾರ್, ಟಿ.ಕುಶಾಲ್ ರಾವ್ ಉಪಸ್ಥಿತರಿದ್ದರು.